CC-O. In Public Domain. Digitized by eGangotri

ಘನ ಆನಂದ

(ಸಂಗೀತ ನಾಟಕ)



ವಸಂತ ಕವಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಟಣೆ : ೧೭೨೨

ಘನ ಆನಂದ

ಪರಿಪೂರ್ಣರಂಗನಾಟಕ

ಲೇಖಕರು :
ವಸಂತ ಕವಲಿ
ನಾಟಕ ನಿರ್ದೇಶಕರು
ಆಕಾಶವಾಣಿ, ಬೆಂಗಳೂರು

ಪ್ರಕಾಶನ :
ಶಾರದಾ ಪ್ರಕಟನಾಲಯ
ಅರಳೇಪೇಟೆ, ಬೆಂಗಳೂರು-೫೬೦ ೦೫೩

Sri Vidyabharathi Book Centre, Sringeri

CC-O. In Public Domain. Digitized by eGangotri

Ghana Ananda — *A full-length play by Wasant Kawali, Drama Producer, All India Radio, Bangalore.*

ಮುದ್ರಣ :
ರೋಹಿಣಿ ಪ್ರಿಂಟರ್ಸ್
ಬೆಂಗಳೂರು-೫೬

ಪ್ರಥಮ ಮುದ್ರಣ :
ಜುಲೈ ೧೯೭೪

ಗ್ರಂಥಸ್ವಾಮ್ಯ:
ಶ್ರೀಮತಿ ಲಲಿತಾಗೌರಿ ಕವಲಿ
ರಾಜಾಜಿನಗರ, ಬೆಂಗಳೂರು-೧೦

Sri Vidyabharathi Book Centre, Sringeri

CC-O. In Public Domain. Digitized by eGangotri

ಘನ ಆನಂದ : ಸಾಂಸ್ಕೃತಿಕ ಸೇತುಬಂಧ

ಕೆಲ ದಿನಗಳ ಕೆಳಗೆ ನಾನು ಬೆಂಗಳೂರಿಗೆ ಹೋಗಿದ್ದಾಗ ನನಗೆ
ಆನಂದಾಶ್ಚರ್ಯದ ಸಂಗತಿ ಕಾದಿತ್ತು: ಬೆಂಗಳೂರ ಆಕಾಶವಾ
ಪ್ರಥಿತಯಶ ನಾಟಕ ನಿರ್ದೇಶಕರಾದ ಶ್ರೀ ವಸಂತ ಕವಲಿ ಅವರು ೧೮
ಶತಮಾನದ ಉದ್ದಾಮ ಬ್ರಜ ಭಾಷಾ ಕವಿ ಘನ ಆನಂದನ ಜೀವನವನ್ನಧಿ
ಕನ್ನಡದಲ್ಲೊಂದು ಪೂರ್ಣಾವಧಿಯ ರಂಗ ನಾಟಕವನ್ನು ಬರೆದಿರುವರೆ
ರಂಗಭೂಮಿಯ ಮೇಲದನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆಂದೂ ಕೆ
ಸಂತಸಪಟ್ಟೆ, ಚಕಿತನಾದೆ, ಅಂತೆಯೆ ಆಶಂಕೆಗೊಂಡೆ : ಕರ್ನಾಟಕದ ನ
ಕಾರನೊಬ್ಬ ಉತ್ತರ ಭಾರತದ ಗತಕಾಲದ ಕವಿಯೊಬ್ಬನ ಬಗೆಗೆ ಸತ್ತ್ವ
ವಾಗಿ ಬರೆಯಬಲ್ಲನೇ ಎಂಬುದಾಗಿ. ಆದರೆ ಆ ನಾಟಕದ ರೇಡಿಯೋರ
ಧ್ವನಿಮುದ್ರಿಕೆಯನ್ನು ದುಭಾಷಿಯೊಬ್ಬರ ನೆರವಿನಿಂದ ಕೇಳಿದ ಮೇಲೆ
ಅವಿಶ್ವಾಸ ಆಶಂಕೆಗಳೆಲ್ಲ ಪ್ರೀತ್ಯಾದರಗಳಾಗಿ ಪರಿಣಮಿಸಿದುವು.

ಹಿಂದೀ ಸಾಹಿತ್ಯ ಚರಿತ್ರೆಯಲ್ಲಿ ಘನ ಆನಂದನ ಹೆಸರು ಹ
ರೂಪಾಂತರಗಳನ್ನು ಹೊಂದಿದೆ : ಘನಾನಂದ, ಆನಂದ ಘನ, ಆನಂದ ಮೆ
ಆನಂದ – ಮುಂತಾಗಿ; ಆದರೆ ಸಾಮಾನ್ಯವಾಗಿ ಪ್ರಚುರವಾಗಿರು
ಘನಾನಂದ ಎಂಬ ರೂಪ. ಪಂಡಿತರು ಅನೇಕ ವರ್ಷಗಳ ಸಂಶೋಧನೆ,
ವಿವಾದಗಳ ಅನಂತರ ಆವನಿಗೆ ಬ್ರಜ ಭಾಷೆಯ ಶೃಂಗಾರಿಕ ಕವಿಗಳಲ್ಲೊ
ಉನ್ನತವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಆವನು ಹುಟ್ಟಿದುದು ೧
ರಲ್ಲಿ. ಉತ್ತರ ಪ್ರದೇಶದ ಬುಲಂದಶಹರಿನಲ್ಲೊಂದು ಕಾಯಸ್ಥ ಕುಟುಂಬ
ಕಾಲವಾದದ್ದು ವೃಂದಾವನದಲ್ಲಿ, ೧೭೬೧ರಲ್ಲಿ : ಭಾರತದ ಮೇಲೆ ನ
ಶಾಹನ ದಾಳಿಯಾದ ವರ್ಷ. ಮೇಲ್ನುಟ್ಟಿದ ಬ್ರಜ ಭಾಷಾಕವಿಯಾ
ದಲ್ಲದೆ ಘನಾನಂದ ಪ್ರಸಿದ್ಧ ಧ್ರುಪದ ಗಾಯಕನಾಗಿದ್ದ ; ದಿಲ್ಲಿಯಲ್ಲಿ ಮೊ
ಬಾದಶಾಹ ಮಹಮ್ಮದಶಾಹ ರಂಗೀಲಾನ ದರಬಾರಿನಲ್ಲಿ ಮೀರ ಮುನತಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನೌಕರಿಯಲ್ಲಿದ್ದ. ಮಹಮ್ಮದಶಾಹ ಬಹು ದುರ್ಬಲನಾದ ಆಡಳಿತ
ನಾದರೂ ಅವನೊಬ್ಬ ಮಹಾ ಸಂಗೀತಪ್ರೇಮಿ. ಹಿಂದುಸ್ತಾನೀ ಸಂಗೀತ
ಧ್ರುಪದವನ್ನು ಹಿಂದೆ ಹಾಕಿ ಖಯಾಲ ಗಾಯಕೀ ಮುಂದೆ ಬಂದುದು
ಮಹಮ್ಮದಶಾಹನ ಕಾಲದಲ್ಲಿ.

ಸುಜಾನ ಎಂಬ ನರ್ತಕಿಯೊಬ್ಬಳು ಘನಾನಂದನ ಪ್ರೇಯಸಿ, ಸ್ಫೂರ್ತಿ
ಪ್ರೇರಕಿಯಾಗಿದ್ದಳು. ಅವಳ ಮೇಲಿನ ಅನುರಾಗದಿಂದಾಗಿಯೆ ಅವನು ಮೊ
ಬಾದಶಹನ ಆಗ್ರಹಕ್ಕೆ ಗುರಿಯಾಗಿ ದೆಹಲಿ ನಗರವನ್ನು ತೊರೆದು ವೃಂ
ವನದಲ್ಲಿ ಹೋಗಿ ನೆಲೆಸಬೇಕಾಯಿತು. ಅಲ್ಲಿ ಅವನು ಶ್ರೀಕೃಷ್ಣನ ಪರ
ಭಕ್ತನಾಗಿ ತನ್ನ ಪ್ರೇಮವನ್ನೆಲ್ಲ ಆಧ್ಯಾತ್ಮವಾಗಿ ಪರಿವರ್ತಿಸಿಕೊಂಡು ಬ್ರ
ಭಾಷೆಯ ಸಂತ-ಕವಿಯಾದ. ಮುಂದೆ ೧೭೫೯ರಲ್ಲಿ ದಾಳಿಗಾರ ನಾದಿರಶಾಹ
ವಿಜಯೋನ್ಮತ್ತ ಸೈನಿಕನೊಬ್ಬನ ಕ್ರೂರ ಕರವಾಲಕ್ಕೆ ಬಲಿಯಾಗಿ ಅ
ನೀಗಿದ ಘನಾನಂದ.

ಈ ಕತೆಯನ್ನು ಶ್ರೀ ವಸಂತ ಕವಲಿಯವರು ತಮ್ಮ ಕನ್ನಡ ರಂ
ನಾಟಕ "**ಘನ ಆನಂದ**" ದಲ್ಲಿ ಉಚಿತವಾದ ಐತಿಹಾಸಿಕ ಪರ್ಯವೇಕ್ಷ
ಯೊಂದಿಗೆ ಮನಂಬುಗುವಂತೆ ಕಲಾತ್ಮಕವಾಗಿ ಹೆಣೆದಿದ್ದಾರೆ. ಕವಿಯ ಮೂ
ಬ್ರಜ ಭಾಷೆಯ ಪದಗಳನ್ನು(ಕವಿತ್ತಗಳು, ಸವೈಯಾಗಳು ಇತ್ಯಾದಿ)ಇದ್ದುದಿ
ಹಾಗೆಯೇ ಉಪಯೋಗಿಸಿರುವುದರಿಂದಾಗಿ ನಾಟಕದ ಯಥಾತಥ್ಯತೆ ಹಾಗ
ಸಾಹಿತ್ಯಿಕ ಸೌಷ್ಠವ ಇನ್ನಷ್ಟು ಹೆಚ್ಚಿವೆ. ಹೀಗಾಗಿ ಈ ನಾಟಕ "ಪರಿಪೂರ್ಣ
ರಂಗ" (Total Theatre) ದ ಉಜ್ಜ್ವಲ ಉದಾಹರಣೆಯಾಗಿದೆ. ಇ
ಮಾತು ಗೀತ ನೃತ್ಯಗಳ ಕಲಾಪೂರ್ಣ ಸುಮಧುರ ಸಮ್ಮಿಲನವಾಗಿದೆ
ಸಾಂಪ್ರದಾಯಿಕ ಭಾರತೀಯ ರಂಗಭೂಮಿ ಆಧುನಿಕ ಸಂದರ್ಭದಲ್ಲಿಯೂ
ಸತ್ತ್ವಶಾಲಿಯೆನಿಸಬಲ್ಲುದೆಂಬುದಿಲ್ಲಿ ದೃಢಪಟ್ಟಿದೆ. ಇನ್ನು ಪ್ರಸಾರ ನಾಟಕದ
ತಂತ್ರವಾದ ಸಿಂಹಾವಲೋಕನ (Flash Back) ಕ್ರಮವನ್ನು ಇಲ್ಲಿ
ಬಳಸಿಕೊಂಡಿರುವುದು ಈ ಕನ್ನಡ ರಂಗ ನಾಟಕವನ್ನು ಇನ್ನಷ್ಟು ಪರಿಣಾಮ
ಕಾರಿಯಾಗಿಸಿದೆ. ನಾಟಕಸಾಹಿತ್ಯ ಹಾಗೂ ರಂಗತಂತ್ರಗಳೆರಡರಲ್ಲಿಯೂ
ಹೊಸ ಪ್ರಯೋಗ ನಡೆಸಿ ಯಶಸ್ವಿಯಾಗಿರುವ ಶ್ರೀ ವಸಂತ ಕವಲಿಯವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿನಂದನಾರ್ಹರು. ಇಷ್ಟೇ ಅಲ್ಲ ; ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಿ
ಇವರ ಅದ್ವಿತೀಯ ಸಾಹಸಕ್ಕಾಗಿ ಇವರಿಗೆ ಇನ್ನೂ ಹೆಚ್ಚಿನ ಅಭಿನಂದನೆಗ
ಸಲ್ಲಬೇಕು. ಪೂರ್ವಾಗ್ರಹವಿರಹಿತವಾದ ಸೃಜನಶೀಲ ಕಲಾಪ್ರತಿಭೆಯ
ಇವರು ನಿಷ್ಕಾಮವಂತ ನಾಟಕಕಾರರು, ಸಂಗೀತಗಾರರು. ಅದುದರಿಂದಲೇ ದ
ಣಾತ್ಯ ಪ್ರೇಕ್ಷಕರೆದುರು ಔತ್ತರೇಯ ವಸ್ತುವುಳ್ಳ ನಾಟಕವನ್ನು ಪ್ರದರ್ಶ
ಭಾರತೀಯ ಸಂಸ್ಕೃತಿಯ ಏಕರೂಪತೆಯನ್ನು ಸಾಧಿಸಲು ಸಮರ್ಥರಾಗಿದ್ದಾ
ಅದು ಕಾರಣ, ಅನರ್ಘ್ಯವಾದ ಅತಿ ಮಹತ್ತ್ವದ ಸಾಂಸ್ಕೃತಿಕ ಸೇತುವ
"ಘನ ಆನಂದ" ಎಂದೆಯೇ ನನ್ನ ಅಭಿಮತ.

ದಿನಾಂಕ ೫-೪-೧೯೭೪

ಚಿರಂಜಿತ
ಪ್ರಧಾನ ನಾಟಕ ನಿರ್ದೇಶಕ
ಆಕಾಶವಾಣಿ, ಹೊಸ ದಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಿವೇದನ

ನಾಲ್ವರು "ಕವಿಚರಿತೆ ನಾಟಕ"ಗಳನ್ನು ಬರೆದು ರಂಗದ ಮೇಲೆ ಕೆರೆಯ ಪದ್ಮರಸ, ರಾಘವಾಂಕ ("ದರುಶನ"), ಭಾರವಿ ("ಅರ್ಥಗೌರವ") ಮುದ್ದಣ ("ಎನ್ನ ಮುದ್ದಿನ ಮುದ್ದಣ") ಜಯದೇವ ("ಕಾವ್ಯ ಸಾರಥಿ") ಬಸವೇಶ್ವರ ("ಕಲ್ಯಾಣ ದರ್ಶನ") ಹಾಗೂ ಪುರಂದರದಾಸ ("ಪುರಂದರ ದರ್ಶನ") ಎಂಬುದಾಗಿ ಕನ್ನಡ ಹಾಗೂ ಸಂಸ್ಕೃತ ಕವಿಗಳ ದರ್ಶನ ಮಾಡಿಸಿದ ನಾನು ಇದೀಗ ನಿಮ್ಮೆದುರು ಹಿಂದೀ ಕವಿ ಘನಾನಂದನನ್ನು ತಂದು ನಿಲ್ಲಿಸಿದ್ದೇನೆ. ಆವನನ್ನು ಆನಂದದಿಂದ ಸ್ವಾಗತಿಸುವಿರೆಂದು ನಂಬಿದ್ದೇನೆ. ಹಿಂದೊಮ್ಮೆ ಮುಂಬಯಿಯಲ್ಲಿ ಕನ್ನಡೇತರ ಪ್ರೇಕ್ಷಕರೆದುರು ಹಿಂದೀ ಭಾಷೆಯಲ್ಲಿ "ಪುರಂದರ ದರ್ಶನ"ವನ್ನಾಡಿ ಔತ್ತರೇಯರಿಗೆ ದಾಕ್ಷಿಣಾತ್ಯ ಕವಿ–ಸಂಗೀತಗಾರನ ಪರಿಚಯ ಮಾಡಿಸಿದ್ದು ಇದೀಗ ಕನ್ನಡ ಕಲಾರಸಿಕರಿಗೆ ಉತ್ತರ ಭಾರತೀಯ ಕವಿ–ಗಾಯಕನೊಬ್ಬನ ಪರಿಚಯ ಮಾಡಿಕೊಡುವ ಸಾಹಸ ಮಾಡಿದ್ದೇನೆ.

ಹನ್ನೆರಡು ವರ್ಷಗಳ ಹಿಂದೆ ಮುಂಬಯಿಯ ಕಾಲೇಜೊಂದರಲ್ಲಿ ಪ್ರಾಧ್ಯಾಪಕನಾಗಿದ್ದಾಗ ನನ್ನ ಸಹೋದ್ಯೋಗಿಗಳಾಗಿದ್ದ ಪ್ರೊ|| ಬಿ. ಆರ್. ದೀಕ್ಷಿತ ಹಾಗೂ ಪ್ರೊ|| ಪುರುಷೋತ್ತಮ ದುಬೇ ಅವರುಗಳಿಂದಾಗಿ ಘನ ಆನಂದನ ಬಾಳಿನ ಕರುಣ ಕತೆಯ ಬಗೆಗೆ ನನಗಾಸಕ್ತಿಯುಂಟಾಯಿತು; ಆವನ ಕವಿತ್ವ ದೋಹಾಗಳ ಬಗೆಗೆ ಕುತೂಹಲ ಕೆರಳಿತು. ಆದರಲ್ಲಿಯೂ "ತಬ ಹಾರ ಪಹಾರಸೇ ಲಾಗತಹೇ ಅಬ ಆನಿಕೇ ಬೀಜ ಪಹಾರ ಪರೇ" ಎಂಬ ಮಾತಂತೂ ನನ್ನ ಅಂತರಂಗವನ್ನು ಕಲಕಿತು. ಆ ಸಂಬಂಧದಲ್ಲಿ ವಿರಹವನ್ನು ಇನ್ನಷ್ಟು ಹೃದಯಸ್ಪರ್ಶಿಯಾಗಿ ತೋಡಿಕೊಂಡ ಸಂಸ್ಕೃತ ಶ್ಲೋಕವೊಂದು (ಎಲ್ಲೋ ಕಂಡುದು) ನೆನಪಾಯ್ತು:

ಹಾರೋ ನಾರೋಪಿತಃ ಕಂಠೇ ಮಯಾ ವಿಶ್ಲೇಷಭೀರುಣಾ
ಇದಾನೀಮಾವಯೋರ್ಮಧ್ಯೇ ಸರಿತ್ಸಾಗರ ಪರ್ವತಾಃ||

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಘನಾನಂದನ ಕವಿತೆ ಸಂಗೀತಕ್ಕಾಗಿಯೇ ಹೇಳಿ ಮಾಡಿಸಿದಂತಿರುವ ಬ್ರಜ ಭಾಷೆಯಲ್ಲಿದ್ದ ಕಾರಣ ನನ್ನ ಮನಸ್ಸಿನಲ್ಲಿ ನಾದರೂಪಕವಾಗಿ ಸುಳಿದಾಡ ತೊಡಗಿತು. ಸರಿ, ಅದನ್ನು ಬಿಲಾಸಖಾನೀ ರಾಗದಲ್ಲಿ ಖಯಾಲ ವಿಲಂಬಿತ ಏಕತಾಲದ ಚೀಜನ್ನಾಗಿ ಪರಿವರ್ತಿಸಿ ಮುಂಬಯಿಯಲ್ಲಿ ಒಂದೆರಡು ಕಚೇರಿ ಗಳಲ್ಲಿ ಹಾಡಿದೆ, ಯಶಸ್ವಿಯಾಯಿತು. ಅಂದಿನಿಂದ ಘನಾನಂದನ ಜೀವನ ವನ್ನು ಚಿತ್ರಿಸುವ ನಾಟಕವೊಂದನ್ನು ಬರೆಯಬೇಕೆಂಬ ಒತ್ತಾಸೆ ಮೂಡಿತು. ಐತಿಹಾಸಿಕ ದೃಷ್ಟಿಯಿಂದ ಅವನ ಜೀವನಚರಿತ್ರೆಯೆಂದು ಉಪಲಬ್ಧವಿದ್ದ ಅಂಶಗಳನ್ನು ಸಂಗ್ರಹಿಸಿದೆ. ಅವನ ದುರಂತಕ್ಕೆ ಕಾರಣನಾದ ರಂಗೀಲೇ ಪಿಯಾ ಮಹಮ್ಮದಶಾಹನ ಬಗೆಗೆ ಹಿಂದೆಂದೋ "ಕಸ್ತೂರಿ"ಯಲ್ಲಿ ಪ್ರಕಟ ವಾಗಿದ್ದ ಲೇಖನವೊಂದನ್ನು ಒದಗಿಸಿಕೊಟ್ಟು ನನ್ನ ನೇಹಿಗ ಶ್ರೀ ಸುರೇಂದ್ರ ದಾನಿಯವರು ಮಹದುಪಕಾರ ಮಾಡಿದರು. ಸಂದರ್ಭಾನುಸಾರವಾಗಿ ಬರುವ ಸುಂದರವಾದ ಪದ್ಯಗಳನ್ನು ನನ್ನ ಸಹೋದ್ಯೋಗಿನಿ ಶ್ರೀಮತಿ ಎಚ್. ಎಸ್. ಪಾರ್ವತಿ ಅವರು ಘನಾನಂದನ ಕವಿತಾ ಸಂಗ್ರಹದಿಂದ ಆಯ್ದುಕೊಟ್ಟು ಸಹ ಕರಿಸಿದರು. ಅಲ್ಲದೆ, ಹೇಗೂ ನನ್ನ ಸಂಗೀತಗುರುಬ್ರಹ್ಮನ ಚತುರ್ಮುಖ ಗಳಾದ ದಿ. ಮರೋಳ ನೀಲಪ್ಪನವರು, ಪಂ. ಮೋಹನ ಚಿಕ್ಕರಮನೆ, ಪಂ. ರಾಮರಾವ ನಾಯಕ ಮತ್ತು ಪಂ. ಮಲ್ಲಿಕಾರ್ಜುನ ಮನಸೂರ ಅವರು ಕರುಣೆಯಿಂದ ನನಗಿತ್ತ ಗಾಂಧರ್ವ ವಿದ್ಯೆಯ ಬೆಂಬಲವಿತ್ತು. ಅವುಗಳೆಲ್ಲವು ಗಳ ನೆರವಿನಿಂದ ಘನ ಆನಂದನ ಮೇಲೊಂದು ರೇಡಿಯೋ ನಾಟಕವನ್ನು ಬರೆದೆ. ಅದನ್ನು ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಬೆಂಗಳೂರ ಆಕಾಶವಾಣಿ ನಿಲಯ ದಿಂದ ಬಿತ್ತರಿಸಲಾಯಿತು.

ಡಿಸೆಂಬರ ತಿಂಗಳಿನಲ್ಲಿ ನನ್ನ ಮಿತ್ರರಾದ ಶ್ರೀ ಎಚ್. ಬಿ. ಜ್ವಾಲನಯ್ಯ ಅವರು ಬಂದು ಹಾಸನದಲ್ಲಿ ಹೊಸ ನಾಟಕವೊಂದನ್ನಾಡಬೇಕೆಂದು ಆವಾಹಿಸಿ ದರು. ಒಪ್ಪಿಕೊಂಡೆ. ಆಮೇಲೆ ಅವರು ನಾಟಕ ಪ್ರದರ್ಶನದ ದಿನಾಂಕ ವನ್ನು ನಿಶ್ಚಯಿಸಿ ಕಾಗದ ಬರೆದರು. ಆಗ ಕೇವಲ ಇಪ್ಪತ್ತೈರಡು ದಿನಗಳ ಅವಕಾಶವಿತ್ತು. ಆದರೂ ಧೈರ್ಯದಿಂದ ಮೊದಲು ಪಾತ್ರಧಾರಿಗಳಾರೆಂದು ನಿಶ್ಚಯಿಸಿ ಅವರೆಲ್ಲ ಮರುದಿನದಿಂದ ತಾಲೀಮಿಗೆ ಬರಲು ತಿಳಿಸಿ ಅಂದೇ ರಾತ್ರಿ

Sri Vidyabharathi Book Centre, Sringeri

CC-O. In Public Domain. Digitized by eGangotri

"ಘನ ಆನಂದ" ರೇಡಿಯೋ ನಾಟಕದ ರಂಗರೂಪವನ್ನು ಸಿದ್ಧಪಡಿಸಲು ಕುಳಿತೆವು. ಕುಳಿತೆವು ಎಂದರೆ ನಾನು ಮತ್ತು ಗೆಳೆಯ ಮೋಟಗಾನಹಳ್ಳಿ ಮಹಾದೇವ ಶಾಸ್ತ್ರಿಗಳು. ನಾನು ಹೇಳುತ್ತ ಹೋದಂತೆ ಅವರು ಬರೆದು ಕೊಂಡರು. ಒಂದು ದೃಶ್ಯ ಸಿದ್ಧವಾಯಿತು. ಮರುದಿನ ಬಂದ ನಟರು ಅದನ್ನು ಅಭ್ಯಸಿಸಿದರು. ಆವರೆಲ್ಲ ಹೊರಟುಹೋದ ಮೇಲೆ ಅಂದೇ ರಾತ್ರಿ ಹನ್ನೆರಡು ಗಂಟೆಯ ವರೆಗೆ ಕುಳಿತು ಎರಡನೆಯ ದೃಶ್ಯ ಬರೆದವು. ಹೀಗೆ ಹನ್ನೆರಡು ದಿನಗಳ ವರೆಗೆ ನಾಟಕರಚನೆ, ಅದರೊಂದಿಗೆ ಅಭ್ಯಾಸ ಮುಂದುವರಿದು ದಿನಾಂಕ ೧೯-೧೦-೭೪ ರಂದು ನಾಟಕ ಪೂರ್ತಿಗೊಂಡಿತು; ಹಾಸನದಲ್ಲಿ ೧೧-೧೦-೭೪ ರಂದು ರಂಗಮಂಚವನ್ನೇರಿತು. ಅಂದಿನ ನಾಟಕ ಪ್ರದರ್ಶನದಲ್ಲಿ ನಮ್ಮದು ಮೂರನೆಯದಾಗಿದ್ದು ರಾತ್ರಿ ೧೧ಕ್ಕೆ ಆರಂಭವಾಗಿ ೨-೩೦ಕ್ಕೆ ಮುಗಿಯಿತು. ನಮ್ಮ ನಟವೃಂದದ ಅಭಿನಯವನ್ನು ಮೆಚ್ಚಿ ಹಾಡುಗಳಿಗೆ "ಒನ್ಸ್‌ಮೋರ್" ಹೇಳಿ, ಕೇಳಿ ಆನಂದಿಸಿದ ಹಾಸನದ ಕಲಾರಸಿಕ ಪ್ರೇಕ್ಷಕರ ಪ್ರೋತ್ಸಾಹನವನ್ನಿಲ್ಲಿ ತುಂಬು ಹೃದಯದಿಂದ ನೆನೆಯುತ್ತೇನೆ ಅಂತೆಯೆ ಈ ನಾಟಕದ ರಚನೆಗೆ ಅಪ್ರತ್ಯಕ್ಷವಾಗಿ ಕಾರಣರಾದ ಶ್ರೀ ಜ್ವಾಲನಯ್ಯನವರ ಉಪಕಾರವನ್ನೂ ಸ್ಮರಿಸುತ್ತೇನೆ. (ಸಂಸ್ಕೃತದ ಅದ್ವಿತೀಯ ನಾಟಕಕಾರ ಭಾಸನಿಗೆ ಜಲಣಮಿತ್ರ" — ಜ್ವಲನಮಿತ್ರ — ಎಂಬ ವಿಶೇಷಣವೊಂದಿದೆ. ಹಾಗಾದರೆ ಕುಮಾರಭಾಸ "ಜ್ವಾಲನಯ್ಯ ಮಿತ್ರ"!)

ಶ್ರೀ ಅಲ್‌ಕಾಝಿಯವರಿಂದ ಅಭಿನಯ-ನಿರ್ದೇಶನಗಳಲ್ಲಿ ತರಬೇತಿ ಪಡೆದುಕೊಂಡು ರಂಗತಂತ್ರಗಳಲ್ಲಿ ಅನೇಕ ನವ್ಯ ಪ್ರಯೋಗಗಳನ್ನು ಮಾಡಿಕೊನೆಗೀಗ ನಮ್ಮ ಸಾಂಪ್ರದಾಯಿಕ ವ್ಯಾವಸಾಯಿಕ ರಂಗಭೂಮಿಯ ನಾಟಕ ಪ್ರದರ್ಶನ ಕಲೆಯೇ ನಿಜವಾಗಿ ಸತ್ತ್ವಶಾಲಿಯೆಂಬುದನ್ನು ಮನಗಂಡು ನಾನು ಗುಬ್ಬಿ-ಗರುಡರ ರಂಗತಂತ್ರಗಳಿಗೆ ಶರಣುಹೋಗಿದ್ದೇನೆ. ಇಲ್ಲಿ ರಸ್ತೆ ಮತ್ತು ಮಹಲು ದೃಶ್ಯಗಳು ಒಂದರ ಹಿಂದೊಂದು ಸರದಿಯಂತೆ ಬರುತ್ತವೆ; ಹೀಗಾಗಿ ದೃಶ್ಯನಿಯೋಜನೆ ಸಲೀಸಾಗಿದೆ. ಈ ನಾಟಕಕ್ಕೆ ಸ್ಪಾಟು ಡಿಮರುಗಳ ಆವಶ್ಯಕತೆಯಿಲ್ಲ; ನಟನ ಮುಖಭಾವಗಳನ್ನು ಸುಸ್ಪಷ್ಟವಾಗಿ ತೋರಿಸುವ ಫ್ಲಡ್ಲೈಟು ಫುಟ್ಲೈಟುಗಳು ಬೇಕು. ಘನಾನಂದ, ಸದಾರಂಗ ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ ಇವರು ಮೂವರೂ ಸಂಗೀತಗಾರರಾದುದರಿಂದ ಈ ಪಾತ್ರಗಳನ್ನು ವಹಿಸುವವರು ಧ್ರುಪದ, ಖಯಾಲ ಹಾಗೂ ಠುಮರೀ ಗಾಯನದಲ್ಲಿ ನಿಷ್ಣಾತರಾಗಿರುವುದಾವಶ್ಯಕ. ನನಗೆ ಇಂತಹ ನಟನಟಿಯರು ದೊರೆತು ಅವರ ನೆರವಿನಿಂದಾಗಿ ಈ ನಾಟಕ ಹಾಸನದಲ್ಲಿ, ಆಮೇಲೆ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ವಾಚಿಕಾಂಗಿಕ ಸಾತ್ತ್ವಿಕಾಭಿನಯಗಳನ್ನು ಪ್ರದರ್ಶಿಸಿದ ನನ್ನ ನಟವರ್ಗವೇ ಅಲ್ಲದೆ ಆಹಾರ್ಯಾಭಿನಯದ ಸಲಕರಣೆಗಳನ್ನೊದಗಿಸಿದ ಬೆಂಗಳೂರಿನ ಪ್ರಭಾತ ಶಿಶುವಿಹಾರವೂ ಯಶೋಭಾಗಿ.

ಹಾಸನದಲ್ಲಿ ದೊರೆತ ಯಶಸ್ಸಿನಿಂದ ಆತ್ಮವಿಶ್ವಾಸಗೊಂಡ ನಾನು ನನ್ನ ಸಹೋದ್ಯೋಗಿ ಶ್ರೀ ಜಿ. ಬಸವರಾಜರಿಗೆ "ಘನ ಆನಂದ"ದ ಹಸ್ತಪ್ರತಿಯನ್ನೋದಲು ಕೊಟ್ಟೆ. ಕೆಲ ದಿನಗಳ ನಂತರ ನಾಟಕದ ಬಗೆಗೆ ಅವರ ಅಭಿಪ್ರಾಯ ಕೇಳಿದರೆ "ಶಾರದಾ ಪ್ರಕಟನಾಲಯ"ದ ಮುಖಾಂತರವಾಗಿ ಪ್ರಕಾಶನಕ್ಕೆಂದು ಹಸ್ತಪ್ರತಿಯನ್ನು ಪ್ರೆಸ್ಸಿಗೆ ಕಳಿಸಿರುವುದಾಗಿ ಹೇಳಿದರು. ನನಗಾಶ್ಚರ್ಯವಾದುದನ್ನು ಕಂಡು ತಾವೇ ವಿವರಿಸಿದರು : "ನಮ್ಮ ಕೆಲಸವೆಂದರೇ ಹಾಗೆ : ಝಟ್ ಮಾಗಣಿ, ಫಟ್ ಶಾದೀ, ಫಟಾಫಟ್ ಪ್ರಸ್ತ !" ಎಂದು. ಅಂತು ಪ್ರೆಸ್‌ಸ್ಥವಾಗಿದ್ದ ನಾಟಕವೀಗ ಬಸವರಾಜರ ಕೃಪೆಯಿಂದ ಅಚ್ಚಾಗಿ ನಿಮ್ಮ ಕೈಸೇರಿದೆ. ನಿಮಗೆ ಅಚ್ಚುಮೆಚ್ಚಾದರೆ ನಾನು ಧನ್ಯ.

ಹಿಂದೀ ಸಾಹಿತ್ಯಪಾರಂಗತರೂ ರೇಡಿಯೋ ಹಾಗೂ ರಂಗನಾಟಕತಂತ್ರ ಪರಿಣತರೂ ಸ್ವತಃ ನಾಟಕಕಾರರೂ ಆದ ಶ್ರೀ ಚಿರಂಜಿತರು "ಘನ ಆನಂದ"ಕ್ಕೆ ಮುನ್ನುಡಿಯ ನಾಂದೀ ಹಾಡಿ ಆಶೀರ್ವದಿಸಿದ್ದಾರೆ, ಅವರಿಗೆ ನಾನು ಚಿರಋಣಿ.

—ವಸಂತ ಕವಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಪುರಸ್ಸರ ಸಮರ್ಪಣ

ಪಂಡಿತ ಮೋಹನ ಚಿಕ್ಕರಮನೆ

ಅವರ ಅಡಿದಾವರೆಗಳಲ್ಲಿ

—ಲೇಖಕ

Sri Vidyabharathi Book Centre, Sringeri

CC-O. In Public Domain. Digitized by eGangotri

"ಘನ ಆನಂದ" ನಾಟಕವನ್ನು ಮೊದಲ ಸಲ ಹಾಸನದಲ್ಲಿ ದಿನಾಂಕ ೧೧-೧-೭೪ ರಂದು ಪ್ರಯೋಗಿಸಿದಾಗ ಭಾಗವಹಿಸಿದ ಕಲಾವಿದರು :

ಸುಜಾನ—ಎಂ. ಎಸ್. ಶೀಲಾ

ಕಲಾವತಿ—ಜಿ. ಎಸ್. ಜಾನಕಿ

ಕೊಕಿಜೀಯೋ—ಆರ್. ಉಷಾಕುಮಾರಿ

ಆನೀಜಖಾನ—ಜೆ. ಕೆ. ಶ್ರೀನಿವಾಸಮೂರ್ತಿ

ರಫೀಕ—ಸಿ. ಜಿ. ಅನಂತಸ್ವಾಮಿ

ಸದಾರಂಗ—ರಾಘವೇಂದ್ರ ಹುಣಗುಂದ

ರಾಜದೂತ—ಮೋಟಗಾನಹಳ್ಳಿ ಮಹಾದೇವಶಾಸ್ತ್ರಿ

ಪರ್ಶಿಯನ್ ಸೈನಿಕ—ಟಿ. ಜಿ. ಬಾಲಕೃಷ್ಣ

ಮಹಮ್ಮದಶಾಹ—ಎಚ್. ನಂಜುಂಡಪ್ಪ

ಮತ್ತು

ಘನಾನಂದ—ಕುಮಾರಭಾಸ

ವಾದ್ಯ ಸಂಗೀತ

ವೀಣೆ ಸುಬ್ಬು ಮತ್ತು ಗುರುದತ್ತ ಕಾಮತ

ನೇಪಥ್ಯ

ಪ್ರಭಾತ ಶಿಶುವಿಹಾರ

ಸೂತ್ರಧಾರ

ವೆಂಕಟರಾವ ತಲಗೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಾನಂದ

ದೃಶ್ಯ : ೧

(ಅನೀಜಖಾನನ ಮನೆಯ ಒಳನೋಟ. ವಿಶೇಷವಾದ ವಿಲಾಸ ವೈಭವಗಳ ಸೂಚನೆಯಿಲ್ಲದ ಸೈನ್ಯಾಧಿಕಾರಿಯ ಮಹಲು. ಮೊಗಲ ಸುಲತಾನ ಮಹಮ್ಮದಶಾಹ ರಂಗೀಲೇ ದಿಲ್ಲಿಯಲ್ಲಿ ಆಳುತ್ತಿರುವ ಸಮಯದ ವಾತಾವರಣ. ಬಲ ಪಾರ್ಶ್ವದಲ್ಲಿ ಸಾಮಾನ್ಯವಾದೊಂದು ಆಸನದಲ್ಲಿ ಅನೀಜಖಾನ ಕುಳಿತಿದ್ದಾನೆ. ವಿಷಣ್ಣವದನನಾಗಿದ್ದು ಆಗಾಗ ನಿಟ್ಟುಸಿರಿಡುತ್ತಿದ್ದಾನೆ. ಎಡ ಬದಿಯಿಂದ ಅವನ ಸೇವಕ ರಫೀಕ ಬಂದು ನಿಂತುದು ಅನೀಜನ ಗಮನಕ್ಕೇ ಬಂದಿಲ್ಲ. ಕ್ಷಣ ಕಾಲ ನಿಂತು ಒಡೆಯನ ದೈನ್ಯಾವಸ್ಥೆಯನ್ನು ನೋಡಿ ಆಯ್ಯೋ ಪಾಪ ಎಂಬಂತೆ ಕಳಕಳಿಯಿಂದ ತಲೆಯಲ್ಲಾಡಿಸುತ್ತಾನೆ. ಆನಂತರ ಯಾವುದೋ ಒಂದು ಆಶಾಕಿರಣ ಕಂಡಂತೆ ಮೊಗವರಳಿಸಿ ನಸು ಬಾಗಿ ಬಲಗೈಯ ನಾಲ್ಕು ಬೆರಳುಗಳನ್ನು ಉದ್ದಕ್ಕೆ ಒಟ್ಟಾಗಿಸಿ ಹೆಬ್ಬೆರಳನ್ನು ಮಡಿಸಿ, ಅಂಗೈಯ ಮೇಲೆ ತಂದಿರಿಸಿಕೊಂಡು ಅದರಿಂದ ತನ್ನ ಗಡ್ಡದ ಕೊನೆಯನ್ನು ತಡವಿ ಕೊಳ್ಳುತ್ತ ಸಲಾಮು ಮಾಡುತ್ತಾನೆ.)

ರಫೀಕ—ಆದಾಬ ಆರಜ ಹೈ ಮಾಲಿಕ.

ಅನೀಜ—(ಔದಾಸೀನ್ಯದಿಂದ ಅವನತ್ತ ನೋಡಿ) ಏನು?

ರಫೀಕ—(ಆರ್ಥಗರ್ಭಿತವಾಗಿ, ಆನಂದವನ್ನಡಗಿಸಿಕೊಳ್ಳಲಾರದವನಂತೆ) ನಿಮ್ಮನ್ನು ನೋಡಲು ಯಾರೋ ಬಂದಿದ್ದಾರೆ ಹುಜೂರ.

ಅನೀಜ—ಸಮಯವಿಲ್ಲೆಂದು ತಿಳಿಸು ಅವನಿಗೆ.

ರಫೀಕ—(ಖುಶಿಯಿಂದ) ಅವನಲ್ಲ ಮಾಲಿಕ, ಅವಳು !

ಅನೀಜ—ಯಾರಾದರೂ ಸರಿಯೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಫೀಕ—(ಅವನ ಔದಾಸೀನ್ಯವನ್ನು ಲೆಕ್ಕಿಸದೆ, ತನ್ನ ಲಹರಿಯಲ್ಲಿಯೆ) ವೊ ಹೈ ಸಾವನ ಕೀ ಘಟಾ ಮೇ ಬಿಜಲೀ... ಕರೀ ಸೀರೆಯುಟ್ಟ ಅವಳು ಕಪ್ಪು ಮೋಡದೊಳಗಿನ ಕೋಲ್ಮಿಂಚಿನಂತೆ ಇದ್ದಾಳೆ. ಬಿಳಿಯ ಮೇಲ್ಮುಸುಕನ್ನು ಹೊದೆದಿದ್ದು ಅದರೊಳಗಿಂದ ಕಾಣುವ ಅವಳ ಮುಖ ಶರತ್ ಪೂನಮ ಕಾ ಚಾಂದ !

ಅನೀಜ—(ನಗುಮೊಗದಿಂದ) ಸಾವನಕೀ ಘಟಾ ; ಶರತ ಕಾ ಪೂನಮ್ ! ಏನು, ನಿನ್ನ ಶಾಯರೀ ಶ್ರಾವಣದಿಂದ ಶರತ್ಕಾಲಕ್ಕೆ ಜಿಗಿಯಿತು ಒಮ್ಮೆಲೆ ?

ರಫೀಕ—ಅದು ಹಾಗೆಯೇ ಸರಕಾರ ! ಅವಳನ್ನು ನೋಡುತ್ತ ನಿಂತರೆ ಕಾಲದ ಪರಿವೆಯೇ ಉಳಿಯುವುದಿಲ್ಲ. ಅವಳ ಹಣೆಯ ಮೇಲಿನ ಸುಹಾಗ ಸಿಂಧೂರವನ್ನು ನೋಡುತ್ತಿದ್ದರೆ ಬೆಳಗಿನ ಸೂರಜನನ್ನು ಕಂಡಂತಾಗುತ್ತದೆ—

ಅನೀಜ—(ತಟ್ಟನೆ ಮೇಲಕ್ಕೆದ್ದು) ಏನು, ಅವಳ ಹಣೆಯಲ್ಲಿ ಕುಂಕುಮ ವಿದೆಯೇ ?

ರಫೀಕ—ಜೀ ಹುಜೂರ ; ನೋಡು ನೋಡುತ್ತಿದ್ದಂತೆಯೇ ಅದು ಸಂಜೆಯ ಸೂರಜನಾಗಿ ಬಿಡುತ್ತದೆ !

ಅನೀಜ—ರಫೀಕ, ನಿಲ್ಲಿಸು ನಿನ್ನ ಶಾಯರಿಯನ್ನು....ಸುಲತಾನ ಮಹಮ್ಮದ ಶಾಹರ ರಾಜ್ಯದಲ್ಲಿ ಎಲ್ಲರೂ ಕವಿಗಳೇ ! ಹೇಳು, ಬಂದಿರುವ ಆ ಹೆಂಗಸು ಹಿಂದೂ ಸ್ತ್ರೀಯೇ ?

ರಫೀಕ—ಜೀ ಹುಜೂರ....

ಅನೀಜ—ಹಾಗಾದರೆ ಅವಳನ್ನು ಬರಮಾಡು.

ರಫೀಕ—(ಅರ್ಥಗರ್ಭಿತವಾಗಿ ನಗುತ್ತ) ಅಚ್ಛೀ ಬಾತ ! (ರಫೀಕ ಒಳಗೆ ನಡೆಯುತ್ತಾನೆ. ಕೆಲ ಕ್ಷಣಗಳ ನಂತರ ಕಲಾವತಿ ಪ್ರವೇಶಿಸುತ್ತಾಳೆ. ಅನೀಜನ ಕೈಸನ್ನೆಯ ಆದೇಶದಂತೆ ಎಡಬದಿಯ ಪೀಠದ ಮೇಲೆ ಕುಳಿತು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳ್ಳುತ್ತಾಳೆ. ನಿಧಾನವಾಗಿ ಮುಖದ ಮೇಲ್ಮುಸುಕನ್ನು ಹಿಂದಕ್ಕೆಳೆದು ಕೊಂಡು ತಲೆಯ ಮೇಲಿನ ಸೆರಗನ್ನಾಗಿ ಮಾಡಿಕೊಳ್ಳುತ್ತಾಳೆ.)

ಅನೀಜ—(ಗಂಭೀರನಾಗಿ ಗಿರಾಸಕ್ತಿಯಿಂದ) ಏನು ಬೇಕು ?

ಕಲಾವತಿ—ಭಿಕ್ಷೆ !

ಅನೀಜ—ಅಷ್ಟಕ್ಕಾಗಿ ಇಲ್ಲಿಯ ವರೆಗೆ ಬರಬೇಕಾಗಿರಲಿಲ್ಲ. ಕೇಳಿದ್ದರೆ ರಫೀಕನೇ ಕೊಟ್ಟು ಕಳುಹಿಸುತ್ತಿದ್ದನಲ್ಲ.

ಕಲಾವತಿ—ನಾನು ಕೇಳುವ ಭಿಕ್ಷೆಯನ್ನು ಕೇವಲ ನೀವು ಮಾತ್ರ ಕೊಡ ಬಲ್ಲಿರಿ.

ಅನೀಜ—(ಕನಲಿ ಮೇಲಕ್ಕೆದ್ದು) ಓ.... ನಿಲ್ಲಿಸು ನಿನ್ನ ವ್ಯರ್ಥಾಲಾಪವನ್ನು. ನಿನ್ನಂತಹ ಪ್ರೇಮಭಿಕ್ಷಾರ್ಥಿನಿಯರು ದಿನಕ್ಕೆ ಹತ್ತು ಜನ ಬರುತ್ತಾರೆ.

ಕಲಾವತಿ—ನಾನು ಅಂತಹವಳಲ್ಲ.

ಅನೀಜ—ಗೊತ್ತು ; ಆದಕ್ಕಾಗಿಯೇ ನಿನಗೆ ಇಲ್ಲಿ ಪ್ರವೇಶ ದೊರೆತದ್ದು. ಉಳಿದವರಂತೆ ನೀನು ಗಜಲ ಮೂಲಕ ಪ್ರೇಮ ಸಂದೇಶವನ್ನು ಕೊಡಲು ಬಂದಿರಲಿಕ್ಕಿಲ್ಲವೆಂದು ನಂಬಿ ನಿನ್ನನ್ನು ಬರಮಾಡಿಕೊಂಡೆ. ಆದರೆ ನೀನು ಕೂಡಾ ಅವರೆಲ್ಲರಂತೆಯೇ—

ಕಲಾವತಿ—ಹೇಳಿದೆನಲ್ಲವೇ ನಾನು ಅಂತಹವಳಲ್ಲವೆಂದು ? ನನ್ನ ಹಣೆಯ ಮೇಲೆ ಕುಂಕುಮವಿದೆ. ಕಾಣಿಸಲಿಲ್ಲವೇನು ?

ಅನೀಜ—ನಿಜ ; ನೀನು ಹಿಂದೂ ಸ್ತ್ರೀ. ಆದರೇನು, ರಂಗಿಲೇ ಪಿಯಾ ಸುಲ ತಾನ ಮಹಮ್ಮದಶಾಹರ ಪ್ರಜೆಯಲ್ಲವೆ ? ಎಂದಮೇಲೆ ಉರ್ದೂ ಗಜಲಲ್ಲದಿದ್ದರೆ ಹಿಂದೀ ದೋಹಾ ಹಾಡಿ ಹೃದಯವನ್ನೊಪ್ಪಿಸಲು ಬಂದಿರಬೇಕು.

ಕಲಾವತಿ—ನಾನು ಹೃದಯವನ್ನೊಪ್ಪಿಸಲು ಬರಲಿಲ್ಲ, ಪಡೆಯಲು ಬಂದಿದ್ದೇನೆ.

ಅನೀಜ—(ಗಟ್ಟಿಯಾಗಿ ನಗುತ್ತ) ಅದು ಸಾಧ್ಯವಿಲ್ಲ ! ನೀನೆಂದೂ ಪಡೆಯಲಾರೆ. ನೀನೇಕೆ, ಇನ್ನಾರೂ ಪಡೆಯಲಾರರು, ಬೇರಿನ್ನಾರೂ –

Sri Vidyabharathi Book Centre, Sringeri

CC-O. In Public Domain. Digitized by eGangotri

(ಮ್ಲಾನವದನನಾಗಿ ನಿಟ್ಟುಸಿರಿಡುತ್ತ ತನ್ನಷ್ಟಕ್ಕೆಂಬಂತೆ) ಸರ್ದಾರ ಅನೀಜ ಖಾನನ ಹೃದಯ ಅವಳಿಗೆ ನೀಸಲು.... ಕೇವಲ ಅವಳಿಗೆ.... ಆದರೆ ಅವಳಿಗದು ಬೇಡವಾಯ್ತು. ಅವಳದನ್ನು ದೂಡಿಕೊಟ್ಟಳು. ಕಾಲಲ್ಲಿ ತುಳಿದು ತಿಕ್ಕಿ ಹಾಕಿದಳು.

ಕಲಾವತಿ—ಸುಜಾನ ?

ಅನೀಜ—(ಒಮ್ಮೆಲೆ ಎಚ್ಚೆತ್ತವನಂತೆ ಆಶ್ಚರ್ಯದಿಂದ) ನಿನಗೆ ಹೇಗೆ ಗೊತ್ತು ?

ಕಲಾವತಿ—ನಿಮ್ಮ ಹೃದಯವನ್ನು ಬಿರಿಸಿದ ಅವಳು ನನ್ನ ಹೊಟ್ಟೆಯನ್ನುರಿಸಿದ್ದಾಳೆ–ಆ ನನ್ನ ಸವತಿ !

ಅನೀಜ—(ಆಶ್ಚರ್ಯದಿಂದ) ಸವತಿ ? (ಏನೋ ಅರ್ಥ ಮಾಡಿಕೊಂಡು ಗೊಳ್ಳನೆ ನಕ್ಕು) ಓ.... ಹಾಗೆ ! ಅದು ಸಾಧ್ಯವಿಲ್ಲ. ಹೀಗೆಲ್ಲ ಸುತ್ತಿ ಬಳಸಿ ಸೂಚನೆ ಕೊಟ್ಟು ನಿನ್ನ ಮೋಹಜಾಲದಲ್ಲಿ ನನ್ನನ್ನು ಕೆಡವಿಕೊಳ್ಳುವುದು ಸಾಧ್ಯವಿಲ್ಲ. ನನಗೆ ನಿನ್ನಲ್ಲಿ ಆಸಕ್ತಿಯಿಲ್ಲ. ನಿನ್ನಲ್ಲೇಕೆ, ಇನ್ನಾರಲ್ಲಿಯೂ ಇಲ್ಲ (ನೋವಿನ ನಗು) ಇನ್ನಾರಲ್ಲಿಯೂ ..

ಕಲಾವತಿ—ನನಗೂ ಇಲ್ಲ. (ಅನೀಜ ತಟ್ಟನೆ ನಗು ನಿಲ್ಲಿಸಿ ಅವಳನ್ನು ದಿಟ್ಟಿಸುತ್ತಾನೆ) ನಾನು ನಿನ್ನಲ್ಲಿ ಆಸಕ್ತಳಲ್ಲ. (ಮೇಲಕ್ಕೇಳುತ್ತ) ಅನುರಕ್ತಳಲ್ಲ. ನಾನೊಬ್ಬಳು ಕುಲವಧು. ಘನ ಆನಂದರ ಧರ್ಮಪತ್ನಿ !

ಅನೀಜ—ಘನ ಆನಂದರ ಧರ್ಮಪತ್ನಿ ...ನಮ್ಮಲ್ಲಿ ಆಸಕ್ತಳಲ್ಲ.... (ಅವಳನ್ನು ಸಮೀಪಿಸುತ್ತ) ಯಾಕಲ್ಲ ? ಇಲ್ಲ ಇಲ್ಲ, ಆಲ್ಲವಾಗಿದ್ದರೆ ನೀನಿಲ್ಲಿಗೇಕೆ ಬರುತ್ತಿದ್ದೆ ? (ಹಿಂಜರಿದು, ಪಶ್ಚಾತ್ತಾಪದಿಂದ) ಯಾ ಅಲ್ಲಾಹ, ಇಂದೇಕೆ ನನ್ನ ಮನದಲ್ಲಿ ಮತ್ತೆ ಸೇಡಿನ ಕಿಡಿ ಸಿಡಿಯುತ್ತಿದೆ ? ಆಥವಾ....ಇದು ನ್ಯಾಯವೇ ಆದೀತು. (ಕಲಾವತಿಗೆ) ನಿಜ, ನಿಜ, ನೀನಿಲ್ಲಿಗೆ ಬಂದುದು ಯೋಗ್ಯವೇ. ಸುಜಾನಳಿಗೋಸ್ಕರ ಘನ ಆನಂದ ನಿನ್ನನ್ನು ದೂಡಿಕೊಟ್ಟ. ಆನಂದನಿಗೋಸ್ಕರ ಸುಜಾನಳು ನನ್ನನ್ನು ದೂಡಿಕೊಟ್ಟಳು. ಆದುದರಿಂದ ನೀನುನಾನೀಗ ಒಂದಾಗುವುದು ನ್ಯಾಯ. ಇದರಿಂದ ಇಬ್ಬರಸೇಡೂ ತೀರಿಸಿದಂತಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಾವತಿ—[ಅವನನ್ನು ತಡೆಯುತ್ತ] ಅಲ್ಲ, ಇದು ಅಧರ್ಮ! ಹೇಳಲಿಲ್ಲವೇ ನನಗೆ ಆಸಕ್ತಿಯಿಲ್ಲ—

ಅನೀಜ—ಇಲ್ಲದಿದ್ದರೆ ಬೇಡ, ನನಗೆ ನನ್ನ ಸೇಡು ಮುಖ್ಯ. ನನ್ನ ಸಂಪತ್ತು ಸೂರೆ ಹೋಯಿತು. ಅದಕ್ಕೆ ಪ್ರತಿಯಾಗಿ ನನಗೀಗ ಸೂರೆಗಾರನ ಸಂಪತ್ತು ಸಿಕ್ಕಿದೆ. ಇದನ್ನು ಕೊಳ್ಳೆಹೊಡೆದರೆ ನಾನು ಅವನಿಗಿಂತ ದೊಡ್ಡ ಶ್ರೀಮಂತನಾಗುವೆ. ಏಕೆಂದರೆ, ಅವಳೊಬ್ಬಳು ವೇಶ್ಯೆ; ನೀನು ಕುಲವಧು, ಗೃಹಿಣಿ.

ಕಲಾವತಿ—(ಅವನನ್ನು ತಡೆಯಲು ಕೈಮುಂದೆ ಮಾಡಿ) ನೆನಪಿರಲಿ ನೆನಪಿರಲಿ; ನಾನು ಘನಾನಂದರ ಧರ್ಮಪತ್ನಿ.

ಅನೀಜ—(ಮುಂದೆ ಬಂದು ಮುಂಜಾಚಿದ ಅವಳ ಎಡಗೈಯ್ಯನ್ನು ಹಿಡಿದು ಕೊಳ್ಳುತ್ತ) ಅದಕ್ಕಾಗಿಯೇ ನೀನು ನನಗೆ ಬೇಕು.

ಕಲಾವತಿ—(ಕೊಸರಿಕೊಳ್ಳಲು ಯತ್ನಿಸುತ್ತ) ಬಿಡು ಬಿಡು, ನನ್ನ ಕೈ ಬಿಡು.

ಅನೀಜ—ಘನಾನಂದ ನಿನ್ನ ಕೈ ಬಿಟ್ಟಿರಬಹುದು; ನಾ ಬಿಡಲಾರೆ. [ಕಲಾವತಿಯ ಬಲಗೈ ಅವಳ ನಡುವಿನ ಕಡೆಗೆ ಹೋದುದನ್ನು ಗಮನಿಸಿ] ಓ.... ಶಸ್ತ್ರಸಜ್ಜಿತಳಾಗಿ ಬಂದಿರುವೆಯಾ....? ಹೂ....ಹೊರಬರಲಿ ಕೆರುಗತ್ತಿ. ಗುರಾಣ ಚಿಲಕತ್ತುಗಳಿಲ್ಲದೆಯೂ ವೈರಿ ಸೈನಿಕರ ಖಡ್ಗಗಳನ್ನೆದುರಿಸಿದ ಶೂರ ಸರದಾರ ಅನೀಜಖಾನನನ್ನು ಆಬಲೆ ನೀನು ಅಂಜಿಸುವೆಯಾ? ಕೋಟೆಯ ಗೋಡೆಗಳನ್ನೊಡೆಯುವ ಅರಿರಾಯರ ಫಿರಂಗಿಗಳ ಗುಂಡುಗಳಿಗೆ ಗುಂಡಿಗೆಯೊಡ್ಡಿದ ಗಂಡುಗಲಿ ನೀನಡಗಿಸಿಟ್ಟುಕೊಂಡ ಆಯುಧಕ್ಕೆ ಅಳುಕುವೆನೆ? (ಕೆರುಗತ್ತಿಯನ್ನು ಹಿರಿದಷ್ಟು ರಭಸದಿಂದ ಕಲಾವತಿ ಟೊಂಕದಲ್ಲಿ ಅಡಗಿಸಿಟ್ಟುಕೊಂಡಿದ್ದ ರಾಖಿಯನ್ನೀಚೆಗೆ ತೆಗೆದು ಹಿಡಿಯುತ್ತಾಳೆ. ಅವಳ ಕೈಯಲ್ಲಿ ಹೊಳೆಯುತ್ತ ನೇತಾಡುತ್ತಿರುವ ಆ ಭರ್ಜರಿ ರಾಖಿಯನ್ನು ಕಂಡೊಡನೆ ಹಾವನ್ನು ಕಂಡಂತೆ ಬೆಚ್ಚಿ ಅನೀಜಖಾನ ಅವಳ ಕೈಯನ್ನು ಬಿಟ್ಟು ಹಿಂದಕ್ಕೆ ಸರಿಯುತ್ತಾನೆ. ಅನಂತರ ತಬ್ಬಿಬ್ಬನ್ನು ಅರಗಿಸಿಕೊಂಡು ಅವಳನ್ನು ನೋಡಿ ಮುಗುಳ್ನಗುತ್ತ ಮುಷ್ಠಿಯನ್ನು ಬಿಗಿದ ಬಲದೋಳನ್ನು ನೀಡುತ್ತಾನೆ. ಕಲಾವತಿ ಸಡಗರದಿಂದ ಅವನ ಮುಂಗೈಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಕ್ಷಾಬಂಧನ ಮಾಡುತ್ತಾಳೆ. ಇಬ್ಬರೂ ಹೋಗಿ ಬಲಬದಿಯ ಪೀಠದ ಮೇಲೆ ಕುಳಿತುಕೊಳ್ಳುತ್ತಾರೆ.)

ಅನೀಜ—ರಫೀಕ! (ಒಡೆಯನ ಕೂಗನ್ನು ಕೇಳಿ ಸೇವಕ ಪ್ರವೇಶಿಸುತ್ತಾನೆ. ಇಬ್ಬರೂ ಒಂದೇ ಪೀಠದ ಮೇಲೆ ಕುಳಿತಿರುವುದನ್ನು ಕಂಡು ರಸಿಕತೆಯಿಂದ ಕಣ್ಣು ಮಿಟಕಿಸಿ ಮುಗುಳ್ನಗುತ್ತಾನೆ.) ಮಿತಾಯಿ ಲಾವ.

ರಫೀಕ—(ಆರ್ಥಗರ್ಭಿತವಾದ ಆನಂದದ ಸ್ವರದಲ್ಲಿ) ಅಚ್ಛೇ ಬಾತ! (ಬಲಪಕ್ಕದ ದೊಳಕ್ಕೆ ನಿರ್ಗಮಿಸಿ ಮಿತಾಯಿಯ ತಟ್ಟೆಯನ್ನು ಹಿಡಿದುಕೊಂಡು ಪ್ರವೇಶಿಸುತ್ತಾನೆ. ತಟ್ಟೆಯನ್ನು ಕಲಾವತಿಯ ಎದುರಿಗೆ ಹಿಡಿಯಲೆಂದು ಅನೀಜ ಸನ್ನೆ ಮಾಡುತ್ತಾನೆ. ಕಲಾವತಿ ಮಿತಾಯಿಯನ್ನೆತ್ತಿ ಅನೀಜನ ಬಾಯಿಗಿರಿಸಿ ಕೆಳಗಿಳಿದು ಅವನ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಳ್ಳುತ್ತಾಳೆ. ಅನಿರೀಕ್ಷಿತವಾದ ಈ ನಡೆನಳಿಕೆಯನ್ನು ಕಂಡು ರಫೀಕ ಪೆಚ್ಚಾಗಿ ನಿಲ್ಲುತ್ತಾನೆ.)

ಅನೀಜ—ಹೋಗು, ನನ್ನ ಸಹೋದರಿಗೆ ಉಡುಗೊರೆ ಕೊಡುವುದಕ್ಕಾಗಿ ಸೀರೆ ಕುಪ್ಪಸಗಳನ್ನು ತೆಗೆದುಕೊಂಡು ಬಾ. (ಟೊಂಕಕ್ಕೆ ಸಿಕ್ಕಿಸಿಕೊಂಡಿದ್ದ ಹಣದ ಚೀಲವನ್ನು ರಫೀಕನ ಕಡೆಗೆ ಎಸೆಯುತ್ತಾನೆ. ಅವನದನ್ನೆತ್ತಿಕೊಂಡು ಹೊರಡಬೇಕೆನ್ನುತ್ತಿರುವಷ್ಟರಲ್ಲಿ) ನೆನಪಿರಲಿ, ಉಡುಗೊರೆ ಸೀರೆ—ಕುಪ್ಪಸ; ಸಲ್ವರ—ಖಮೀಜ ತಂದುಬಿಟ್ಟೀಯೆ!

ರಫೀಕ—ಅಂತಹ ತಪ್ಪನ್ನೇನೂ ಮಾಡುವುದಿಲ್ಲ ಸರಕಾರ. ಬೇಗ ಬಂದು ಬಿಡುತ್ತೇನೆ. (ಸೊಂಟ ಬಗ್ಗಿಸಿ ಸಲಾಂಮಾಡಿ ಹೋಗುವಷ್ಟರಲ್ಲಿ)

ಅನೀಜ—ನಿಲ್ಲು, ತಪ್ಪು ಮಾಡಿದೆ ಈಗ. ನನ್ನ ತಂಗಿಗೆ ಸಲಾಂ ಹೇಳುವುದಿಲ್ಲವೇ?

ರಫೀಕ—(ನಗುತ್ತ ಬಂದು ಕಲಾವತಿಯ ಎದುರಿಗೆ ಕೈಜೋಡಿಸಿ ನಿಂತು)ನಮಸ್ತೇ ದೇವೀಜೀ; ಖುದಾ ಹಾಫಿಜ!

(ನಿರ್ಗಮಿಸುವನು)

ಅನೀಜ—ಬಾದಶಹ ಹುಮಾಯೂನರ ಕತೆಯನ್ನು ಕೇಳಿದ್ದೀಯಾ?

ಕಲಾವತಿ—ಕೇಳಿರದೇನು? ನಮ್ಮ ದೆಹಲಿಯ ಸುಲತಾನ ಮಹಮ್ಮದ ಶಹರ ಮುತ್ತಜ್ಜ ಔರಂಗಜೇಬ ಬಾದಶಹರು; ಅವರ ಮುತ್ತಜ್ಜ ಹುಮಾಯೂನರಲ್ಲವೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೀಜ—ಆ ವಂಶಾವಳಿಯೇನೋ ಸರಿ, ಆದರೆ ಹುಮಾಯೂನ ಬಾದಶಹರಿಗೆ ರಾಖೀ ಸಹೋದರಿಯೊಬ್ಬಳಿದ್ದಳು. ಹಿಂದೂ ಸ್ತ್ರೀ. ರಾಣೀ ಕರ್ಮವತಿ.

ಕಲಾವತಿ—ಕರ್ಮವತಿ ?

ಅನೀಜ—ಹೂಂ, ಹಾಗೆಯೇ ಸರದಾರ ಅನೀಜಖಾನನಿಗೆ ರಾಖೀ ಸಹೋದರಿ- (ಪ್ರಶ್ನಾರ್ಥಕವಾಗಿ ಅವಳತ್ತ ನೋಡುವನು)

ಕಲಾವತಿ—ಕಲಾವತಿ.

ಅನೀಜ—ಕಲಾವತಿ ? (ಪೆಚ್ಚಿ) ಮುದ್ದಾದ ಹೆಸರು. (ಏನನ್ನೋ ನೆನೆಸಿಕೊಂಡು ನಿಟ್ಟುಸಿರಿಟ್ಟು) ಅವಳೂ ಕಲಾವತಿ, ಮಧುರ ಗಾಯಕಿ, ಮೋಹಕ ನರ್ತಕಿ....ಆದರೆ ನಯವಂಚಕಿ.

ಕಲಾವತಿ—ಕ್ವಚಿದ್ಗಾನವತೀ ಸತೀ !

ಅನೀಜ—ನಿಜ, ನನ್ನ ವಿಷಯದಲ್ಲಿ ಅವಳು ಅಸತಿಯಾಗಿಯೇ ನಡೆದುಕೊಂಡಳು....ನಂಬಿಸಿ ಕೊರಳು ಕೊಯ್ದಳು. ಹೋಗಲಿ ; ಆ ಘನ ಆನಂದನಿಗಾದರೂ ವಿಶ್ವಾಸಘಾತ ಮಾಡದಿರಲಿ. ಅವನೊಂದಿಗಾದರೂ ಪತಿವ್ರತೆಯಾಗಿ ಬಾಳಲಿ.

ಕಲಾವತಿ—(ಅವನನ್ನು ದುರುಗುಟ್ಟಿ ನೋಡಿ) ನನ್ನಣ್ಣನಾಗಿ ನೀನು ಹೇಳುವ ಮಾತೇ ಇದು ?

ಅನೀಜ—(ತಪ್ಪಿತಸ್ಥನಾದರೂ ನಗುತ್ತ ಮೇಲಕ್ಕೆದ್ದು ಗಲ್ಲ ಬಡಿದುಕೊಳ್ಳುತ್ತ) ಯಾ ಅಲ್ಲಾಹ ! ತೋಬಾ ತೋಬಾ.

ಕಲಾವತಿ—ರಾಣೀ ಕರ್ಮವತಿಗೆ ಹುಮಾಯೂನನೂ ಹೀಗೆಯೇ ಸಹಾಯ ಮಾಡಿದನೇ ? ಅವಳು ಅವನಿಗೆ ರಾಖೀ ಕಟ್ಟಿದುದೂ ಹೀಗೆಯೇ ವ್ಯರ್ಥವಾಗಿ ಹೋಯಿತೆ ?

ಅನೀಜ—ಎಂದಿಗೂ ಇಲ್ಲ. (ಒಮ್ಮೆಲೇ ಗಂಭೀರನಾಗಿ) ರಾಣೀ ಕರ್ಮವತಿಯ ರಾಜ್ಯದ ಮೇಲೆ ಮುಸಲ್ಮಾನ ರಾಜನೊಬ್ಬ ದಂಡೆತ್ತಿ ಬಂದು ಕೋಟೆಗೆ ಮುತ್ತಿಗೆ ಹಾಕಿದ. ಕರ್ಮವತಿ ಹುಮಾಯೂನ ಬಾದಶಹರಿಗೆ ರಾಖಿಯನ್ನು ಕಳುಹಿಸಿದಳು. ಹಿಂದೂ ಸ್ತ್ರೀಯೊಬ್ಬಳನ್ನು ರಾಖೀ ಸೋದರಿ ಎಂದು ಸ್ವೀಕರಿಸಿ ಮೊಗಲ ಬಾದಶಹರು ಸೈನ್ಯ ಸಮೇತರಾಗಿ ಬಂದು ಕರ್ಮವತೀ ರಾಣಿಯ ರಾಜ್ಯವನ್ನು ರಕ್ಷಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮುತ್ತಿಗೆ ಹಾಕಿದ್ದ ಅಹಮ್ಮದನಗರದ ಸುಲತಾನನ ಸೈನಿಕರನ್ನು ಹೊಡೆದೋಡಿಸಿ ಸುಲತಾನನನ್ನು ಸ್ವತಃ ಬೆನ್ನಟ್ಟಿ ಸಂಹರಿಸಿದರು.

ಕಲಾವತಿ—ನನ್ನ ಕೋಟೆಗೂ ಮುತ್ತಿಗೆ ಬಿದ್ದಿದೆ. ನನ್ನ ಪಾತಿವ್ರತ್ಯದ ವಜ್ರಕವಚ, ನನ್ನ ಸೌಭಾಗ್ಯ ರಕ್ಷಣೆಯ ಕೋಟೆ ಸುಜಾನಳ ಸವಿ ಮುತ್ತಿಗೆ ವಶವಾಗಿದೆ. ಘನ ಆನಂದ ದುರ್ಗ ಸವತಿಯ ಕೈಯಿಂದ ಸತಿಯ ಕೈಗೆ ಬರುವ ಬಗೆಯಂತು? ಹೇಳಣ್ಣಾ....

ಅನೀಜ—ಓ! ನಾನೇನು ಹೇಳಲಿ! ಹುಮಾಯೂನರ ಹೊಣೆಯ ನಿರ್ವಹಣೆ ತುಂಬ ಸುಲಭವಾಗಿದ್ದಿತು. ಅವರು ಎದುರಿಸಬೇಕಾಗಿದ್ದ ವೈರಿ ಇವರಂತೆ ಸೈನಿಕ, ಸುಲತಾನ; ಸರಿಜೋಡಿಯಾದ ಪ್ರತಿದ್ವಂದಿ. ಆದರೆ ಇಲ್ಲಿ? ಸುಜಾನ ಅಬಲೆ. ಗಾಯಕಿ. ನರ್ತಕಿ. ಮೊಗಲ ಬಾದಶಾಹ ಔರಂಗಜೇಬರ ಪ್ರಚಂಡ ಸೇನೆಗೂ ಮಣಿಯದೆ ಕಾದಿ ಹಿಂದಕ್ಕೋಡಿಸಿದ ದಖ್ಖಿನ್ನಿನ ಬಿದನೂರ ರಾಣಿಯಂತೆ, ಅಥವಾ ಅಹಮದ ನಗರದ ಚಾಂದಬೀಬಿಯಂತೆ ಇವಳೂ ಖಡ್ಗ ಹಿಡಿಯಬಲ್ಲವಳಾಗಿದ್ದರೆ....ಕಾರ್ಯ ಸುಲಭವಾಗುತ್ತಿತ್ತು. ಇಲ್ಲವೆ....ನಾನು ಕವಿಯಾಗಿದ್ದರೆ....ಅಥವಾ ಗಾಯಕನಾಗಿದ್ದರೆ....

ಕಲಾವತಿ—ಆಗಿದ್ದರೆ....?

ಅನೀಜ—ಶಾಯರಿಯಲ್ಲಿ ಘನಾನಂದನನ್ನು ಸೋಲಿಸಿ ನನ್ನ ಆಡಿಯಾಳಾಗಿಸಿಕೊಳ್ಳುತ್ತಿದ್ದೆ....ನಿನಗೆ ತಂದೊಪ್ಪಿಸುತ್ತಿದ್ದೆ.... ಇಲ್ಲವೆ, ತುಂಬಿದ ದರಬಾರಿನಲ್ಲಿ ಬೈಜು ಬಾವರಾ ತಾನಸೇನನನ್ನು ಮುಕಾಬಲಾಕ್ಕೆ ಆಹ್ವಾನಿಸಿದಂತೆ ನಾನು ಘನಾನಂದನನ್ನು ಆಹ್ವಾನಿಸಿ ಅವನ ಧ್ರುಪದ ಗಾಯನದ ಗಂಡುಗಾಡಿಯನ್ನು ಖಯಾಲ ಗಾಯಕಿಯ ನಯಗಾರಿಕೆಯಿಂದ ಗೆಲಿದು ನನ್ನ ಆಜ್ಞಾನುವರ್ತಿಯನ್ನಾಗಿ ಮಾಡಿಕೊಳ್ಳುತ್ತಿದ್ದೆ. ಆದರೆ ಅಂದು ನನಗಿದೆಲ್ಲ ಹೊಳೆಯಲೇ ಇಲ್ಲ. ನಾನು ಸೈನಿಕ, ಸೈನಿಕನೊಬ್ಬ ಮಾಡಬಹುದಾದುದನ್ನು ಮಾಡಲು ಹೋದೆ. ನನ್ನಲ್ಲಿ ಮತ್ಸರದ ಜ್ವಾಲೆ ಪ್ರತೀಕಾರದ ದಳ್ಳುರಿಯಾಗಿ ಭುಗಿಲೆಂದೆದ್ದಿತ್ತು. ಆದರೆ ಪ್ರೇಮಿಯ ಸ್ಪರ್ಶಕ್ಕೆ ನನ್ನ ಕಣ್ಣು ಕಾಯುತ್ತಿತ್ತು. ನನ್ನ ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನಳ ಒಲುಮೆಯ ಹಾಲನ್ನು ಹಾಲಾಹಲವನ್ನಾಗಿಸಿದವ ಘನಾನಂದ. ನನ್ನ ತೋಳಪ್ಪುಗೆಯೊಳಗಿಂದ ಸುಜಾನಳನ್ನು ಸೆಳೆ ದೊಯ್ದವನೀತ. ಈ ಘನ ಆನಂದನನ್ನು 'ಪುರಸ್ಕರಿಸುವದಕ್ಕೋಸ್ಕರ ನನ್ನನ್ನು ತಿರಸ್ಕರಿಸಿದಳಲ್ಲವೆ ಅವಳು ? ಇವನೊಬ್ಬ ನಮ್ಮಿಬ್ಬರ ಮಧ್ಯೆ ಬಾರದೆ ಹೋಗಿದ್ದರೆ....ಅಥವಾ, ಈಗಲಾದರೂ ಏನಾಯಿತು.... ? ಅವನನ್ನು ಮುಗಿಸಿಬಿಟ್ಟರೆ....

ಕಲಾವತಿ—ಅಣ್ಣಾ ಅನೀಜ.... !

ಅನೀಜ—(ಅದರ ಪರಿವೆಯಿಲ್ಲದೆ) ನಮ್ಮ ಪ್ರೇಮ ಮಾರ್ಗದಲ್ಲಿನ ಕಂಟಕ ದೂರವಾಗುವುದು. ಸುಜಾನ ಪುನಃ ನನ್ನವಳಾಗುವಳು. ಆದ್ದರಿಂದ ಘನ ಆನಂದನನ್ನು ನನ್ನ ಖಡ್ಗಕ್ಕೆ ಬಲಿಕೊಡುವದೇ ವಿಹಿತ –

ಕಲಾವತಿ—ಅನೀಜ ನಾನು ನಿನ್ನಲ್ಲಿಗೆ ಭಿಕ್ಷೆ ಬೇಡಲು ಬಂದೆನೆಂದೆನಲ್ಲವೆ ? ಅದಾವುದೆಂದುಕೊಂಡೆ ? ಪತಿಭಿಕ್ಷೆ !

ಅನೀಜ—ಈ ಭಿಕ್ಷೆ ಕೇಳಲು ನೀನಾಗ ಇರಲಿಲ್ಲ — ಇದ್ದರೂ ನನಗೆ ತಂಗಿ ಯಾಗಿರಲಿಲ್ಲ....ಆ ದಿನ ನಾನು ಸೇಡಿನಮಲಿನಲ್ಲಿ ಸಾರಾಸಾರ ವಿಚಾರ ವನ್ನು ಮರೆದು ಕ್ರೂರ ಕರವಾಲ ಹಿರಿದು (ಖಡ್ಗ ಹಿರಿಯುತ್ತಾನೆ) ಎನ್ನ (ವ್ಯಂಗವಾಗಿ) ಜೆನ್ನರಸಿಯ ಮನೆಯನ್ನರಸಿಕೊಂಡು ಹೊರಟೆ.... (ರಂಗದ ದೀಪಗಳು ಆರುವುವು. ರಂಗಮಧ್ಯದ ತೆರೆಗಳು ಅರ್ಧ ಸರಿದು ಹನ್ನೆಲೆಯ ದೃಶ್ಯವನ್ನು ತೆರೆದು ತೋರಿಸುವುವು. ವ್ಯಾಸಪೀಠವೊಂದರ ಮೇಲೆ ಪ್ರಭಾವಲಯದಲ್ಲಿ ಘನ ಆನಂದ ಸುಜಾನರು ಎದುರುಬದುರಾಗಿ ಕುಳಿತಿದ್ದಾರೆ. ಸರಿದ ತೆರೆಯೊಂದರ ಹಿಂದೆ ಹೋಗಿ ನಿಂತ ಖಡ್ಗಧಾರಿ ಅನೀಜನಾನ ಮೂರ್ತಿಮಂತವಾದ ನೆರಳಾಗಿ ಕಾಣಿಸುತ್ತಾನೆ. ಸುಜಾನಳು ತಂಬೂರಿ ಮೀಟುತ್ತಿದ್ದಾಳೆ. ಘನ ಆನಂದ ಹಾಡುತ್ತಿದ್ದಾನೆ. ಅವಳವನನ್ನನುಸರಿಸಿ ಹಾಡಿ ಕಲಿತುಕೊಳ್ಳುತ್ತಿದ್ದಾಳೆ. ಧ್ರುಪದ ಶೈಲಿಯಲ್ಲಿ ರಾಗ–ಖಟ್. ಅದರಲ್ಲಿ ಆಡಕವಾದ ಆರೂ ರಾಗಗಳನ್ನು ಘನಾನಂದ ಲೀಲಾಜಾಲವಾಗಿ ಅಳವಡಿಸಿಕೊಂಡು ಹಾಡುತ್ತಿದ್ದಾನೆ. ಅವನನ್ನು ಹಿಂಬಾಲಿಸುವುದು ಸುಜಾನಳಿಗೆ ಕಷ್ಟವೆನಿಸುತ್ತಿದೆ. ಆದರೂ ಪ್ರಯತ್ನಿಸುತ್ತಿದ್ದಾಳೆ.)

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ: ಖಟ್ ; ರೂಪತಾಲ

ಅಸ್ಥಾಯಿ

ವಿದ್ಯಾಧರ ಗುನಿಯನಸೋ ಕಹಾ ಅರಿಯೇ ಕಛು
ಗುನಚರಚಾಕೇ ಲರಾಯಿ ಲರಿಯೇ ॥

ಅಂತರಾ

ಜೋ ಕಛು ಆವೇಸೋ ಗಾಯೇ ಸುನಾಯೇ
ನಹೀಂ ತೋ ಗುನಿಯನಕೇ ಚರನ ಪರಿಯೇ ॥

ಆಭೋಗ

ಮೇರೋ ತೇರೋ ನ್ಯಾವ ನಿರಂಜನಕೇ ಆಗೇ
ಚಂದನಾ ಬಬೂಲಕೋ ಏಕ ತೋರ ಧರಿಯೇ ॥

ಸಂಚಾರಿ

ಗ್ಯಾನಕೇ ಸಮರ್ಥು ಬೇಕ ಬಹು ಬೇಕ ಕರಿಯೇ
ಕಹೇ ಬೈಜು ನಾಯಕ ತಾನನ ತೈರಿಯೇ ॥

ಘನಾನಂದ—ಯಾಕೆ ಸುಜಾನ, ಸ್ವರ ಸಂಚಾರ ಕಷ್ಟವೆನಿಸುತ್ತಿದೆಯೇನು ?

ಸುಜಾನ—ಮೊದಲು ಈ ರಾಗ ಯಾವುದೆಂಬುದೇ ಗೊತ್ತಾಗುತ್ತಿಲ್ಲ ಗುರೂಜಿ.

ಘನಾನಂದ—ಇದಕ್ಕೆ ಖಟ್ ಎನ್ನುತ್ತಾರೆ.

ಸುಜಾನ—ಖಟ್ ? (ನಗುತ್ತ) ಕಷ್ಟ ಎಂದಿದ್ದರೆ ಯೋಗ್ಯವಾಗುತ್ತಿತ್ತೇನೋ!

ಘನಾನಂದ—(ತಾನೂ ನಕ್ಕು) ಕಷ್ಟ ಅಲ್ಲ, ತುಂಟ ಹುಡುಗೀ ಖಟ್ ! ಸಂಸ್ಕೃತದಲ್ಲಿ ಷಟ್ ಎಂಬುದು ಬ್ರಿಜ ಭಾಷೆಯಲ್ಲಿ 'ಖಟ್' ಎಂದಾಗಿದೆ. ಆರು ರಾಗಗಳು ಸೇರಿ ಇದೊಂದು ರಾಗವಾಗಿದೆ. ಆದ್ದರಿಂದಲೇ ಇದು ಷಟ್ ಅಥವಾ ಖಟ್. ಕಠಿಣವಾದ ಈ ರಾಗವನ್ನು ಹಾಡುವವರು ಇಡೀ ಹಿಂದುಸ್ತಾನದಲ್ಲಿ ಆರು ಜನ ಸಿಗಲಿಕ್ಕಿಲ್ಲ. ಇಂತಹ ಅಪರೂಪವಾದ ಚೀಜನ್ನು ನಿನಗೆ ನಾನು ಹೇಳಿಕೊಡುತ್ತಿದ್ದೇನೆ. ತೆಗೆದುಕೋ, ಹಾಡು, ನೊದಲು ನಾಯಕೇ ಕಾನಡಾ (ವಿದ್ಯಾಧರ– ಎಂದು ಹಾಡುತ್ತಾನೆ, ಸುಜಾನಳು ಅವನ್ನು ಪುನರಾವರ್ತಿಸುತ್ತಾಳೆ) ಈಗ ಸಂಚಾರಿ (ಗುನಿಯನಸೋ)

Sri Vidyabharathi Book Centre, Sringeri

CC-O. In Public Domain. Digitized by eGangotri

ಜೌನಪುರಿ (ಕಹಾ ಆರಿಯೇ ಕಳು) ಮುಂದೆ ಶಹಾನಾ ಕಾನಡಾ (ಗುನಾಚರಜಾಕೀ) ಲರಾಯೀ ಲರಿಯೇ ಎಂಬಲ್ಲಿ ಭೀಮಪಾಲಸ, ದೇಶೀ ತೋಡಿ ರಾಗಗಳು ಸೇರಿಕೊಳ್ಳುತ್ತವೆ. (ಹಾಡಿ ತೋರಿಸುತ್ತಾನೆ; ಪ್ರಯತ್ನಪಟ್ಟು ಆವಳೂ ಸಾಕಷ್ಟೂ ಚೆನ್ನಾಗಿಯೇ ಹಾಡುತ್ತಾಳೆ.)

ಸುಜಾನ—ಗುರೂಜೀ ಈ ಚೀಜಿನ ಅರ್ಥವೇನು ?

ಘನಾನಂದ—ಪಂಡಿತ ವಿದ್ವಾಂಸರೊಂದಿಗೆ ಶಾಸ್ತ್ರ ವಿದ್ಯಾ ವಿಷಯಕ ಚರ್ಚಾಯುದ್ಧವನ್ನು ಮಾಡಬೇಕು. ಬಂದರೆ ಬಂದಷ್ಟನ್ನು ಹಾಡಿ ತೋರಿಸಬೇಕು. ಇಲ್ಲವೇ ವಾದ ಬಿಟ್ಟು ವಿದ್ವಾಂಸರ ಪಾದಕ್ಕೆ ಬೀಳಬೇಕು.

ಸುಜಾನ—(ಮಾದಕವಾದ ಮುಗುಳ್ನಗೆ ಬೀರುತ್ತ, ವೈಯಾರದಿಂದ) ನಾನು ಹೇಗೂ ನಿಮ್ಮ ಚರಣ ಸೇವೆ ಮಾಡುತ್ತಲೇ ಇರುವೆ ನಲ್ಲವೇ ?

ಘನಾನಂದ—ಆದರೆ ಇದು ನಾನು ನಿನಗೆ ಹೇಳಿದ ಮಾತಲ್ಲ ಪ್ಯಾರೀ; ಬೈಜೂ ಬಾವರಾನಿಗೆ ತಾನಸೇನನಿತ್ತ ಆಹ್ವಾನ.

ಸುಜಾನ—ಏನು ಸಂದರ್ಭ ?

ಘನಾನಂದ—ಬೈಜುವಿಗೆ ತಾನಸೇನನ ಮೇಲೆ ಕೋಪವಿತ್ತು. ಕುನುಸಿತ್ತು. ಎಷ್ಟೆಂದರೆ ಅವನನ್ನು ಮುಗಿಸಿಬಿಡಬೇಕೆಂದು ಬಿಜ್ಜಲಗತ್ತಿಯೊಡನೆ ತಾನಸೇನನ ಮನೆಗೆ ಹೋದ. ಆಗ ತಾನಸೇನ ತಂಬೂರಿ ನುಡಿಸಿಕೊಂಡು ಹಾಡುತ್ತಿದ್ದ. ಬೈಜುವಿನ ಕೈಯಲ್ಲಿನ ಖಡ್ಗವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ನನ್ನ ಮೇಲೆ ಕತ್ತಿಯನ್ನೆತ್ತುವುದೇ ? ತಂಬೂರಿ ಮೀಟಿದವನನ್ನು ಈಟಿಯಿಂದ ಇರಿದುಕೊಲ್ಲುವುದೇನು ಮಹಾ ಪರಾಕ್ರಮ ? ಗಂಡುಸಾದರೆ ನನ್ನೊಂದಿಗೆ ಗಾಯನಕ್ಕೆ ಕುಳಿತುಕೊಳ್ಳಬೇಕು. ನನ್ನೊಂದಿಗೆ ಆಲಾಪ ಮಾಡಬೇಕು. ಸ್ವರಸಂಧಾನದ ಶರ ಸಂಧಾನದಲ್ಲಿ ನನ್ನನ್ನು ಸೋಲಿಸಬೇಕು. ತಾನಗಳ ಬಾಣಗಳನ್ನೆಸೆದು ನನ್ನನ್ನು ಮುತ್ತಬೇಕು. ಇದು ನಿಜವಾಗಿ ನನ್ನಂಥವನೊಡನೆ ಮಾಡ ಬಹುದಾದ ಲಡಾಯಿ. ವಿದ್ಯಾಧರಗುಣಿಗಳಿದುರು ಖಡ್ಗ ಝಳಪಿಸುವುದು ಹೇಡಿಗಳ ಲಕ್ಷಣ ಎಂದ ತಾನಸೇನ. ಆದನ್ನು ಕೇಳಿ ಬೈಜೂವಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಚಿಕೆಯಾಯಿತು. ತನ್ನ ಅವಿವೇಕವನ್ನು ತಾನೇ ಹಳಿದುಕೊಂಡ. ತಾನಸೇನನಂತೆ ತಾನು ಕೂಡಾ ಸ್ವಾಮಿ ಹರಿದಾಸರ ಶಿಷ್ಯ. ಮಹೋನ್ನತ ಸಂಗೀತಗಾರ; ಆದುದರಿಂದ ತಾನಸೇನನನ್ನು ತಾನಗಳಿಂದಲೇ ಸೋಲಿಸುವೆನೆಂದು ನಿರ್ಧರಿಸಿ ಬೈಜೂ ಕೈಯಲ್ಲಿದ್ದ ಖಡ್ಗವನ್ನು ಬಿಸುಡಿದ — (ನೆರಳಾಗಿ ನಿಂತ ಅನೀಜಖಾನ ಖಡ್ಗ ಬಿಸುಡುತ್ತಾನೆ. ಅದರ ಸದ್ದಿಗೆ ಬೆಚ್ಚಿ ಸುಜಾನ ಘನಾನಂದರು ನೋಡುತ್ತಾರೆ. ಸುಜಾನ ಕಿಟಾರನೆ ಕಿರಿಚಿ "ಅನೀಜ ಅನೀಜ" ಎನ್ನುತ್ತ ಬೆರಳು ಮಾಡುತ್ತಾಳೆ. ಆ ದೃಶ್ಯವನ್ನು ಕತ್ತಲಾವರಿಸಲು ಅಗಲಿದ್ದ ತೆರೆಗಳು ಮುಚ್ಚಿಕೊಳ್ಳುತ್ತವೆ. ರಂಗದ ಮುಂಭಾಗದಲ್ಲಿ ಬೆಳಕು ಮೂಡಿದಾಗ ಮುನ್ನಿನಂತೆಯೆ ಖಾನನ ಮನೆಯಲ್ಲಿ ಅನೀಜ ಮತ್ತು ಕಲಾವತಿ ಕಾಣಿಸಿಕೊಳ್ಳುತ್ತಾರೆ.)

ಅನೀಜ—ಅಂದಿನಿಂದ ಇಂದಿನವರೆಗೆ ನಾನು ಸುಜಾನಳ-ಮನೆಗೆ ಕಾಲಿರಿಸಲಿಲ್ಲ.

ಕಲಾವತಿ—ನನ್ನ ಮಾಂಗಲ್ಯ ಉಳಿಯಿತು.

ಅನೀಜ—ಧ್ರುಪದ ಗಾಯನ ಉಳಿಯಿತು. ಖಯಾಲ ಗಾಯನದ ನವ್ಯತೆಯ ಎದುರು ಧ್ರುಪದ ಗಾಯಕಿಯ ಭವ್ಯತೆ ತತ್ತರಿಸುತ್ತಿರುವ ಈ ಪರ್ವಕಾಲದಲ್ಲಿ ಘನಾನಂದರಂತಹ ಸಂಪ್ರದಾಯ ಶರಣರು ಬದುಕಿರುವುದಾವಶ್ಯಕ. ಅವನೊಬ್ಬ ಧ್ರುಪದದ ಧ್ರುವತಾರೆ. ಅವನನ್ನೂ ಮುಗಿಸಿಬಿಟ್ಟಿದ್ದರೆ ಉತ್ತರದ ಸಂಗೀತಾಕಾಶ ನಿಸ್ತೇಜವಾಗುತ್ತಿತ್ತು. ನಿರಾಯುಧನನ್ನು ಕೊಂದ ಕಲಂಕ ನನ್ನ ಶೌರ್ಯಕ್ಕೆ ಕಪ್ಪು ಬಳಿಯುತ್ತಿದ್ದಿತು....ಈಗಲೂ ಆಗಾಗ ದರಬಾರಿನಲ್ಲಿ ಘನಾನಂದನನ್ನು ನೋಡುತ್ತಿರುತ್ತೇನೆ. ಮುನಶಿಯಾಗಿ ಕಾಗದ ಪತ್ರಗಳನ್ನು ಗೀಚುತ್ತ ಕುಳಿತ ಅವನು ಅಕಸ್ಮಾತ್ ನನ್ನೆಡೆಗೆ ಕಣ್ಣೆತ್ತಿ ನೋಡಿದರೂ ಸಾಕು, ನನ್ನ ತೇಜೋವಧೆ ಮಾಡಿದಂತಾಗುತ್ತದೆ. ಸೇಡು ತೀರಿಸಲು ಖಡ್ಗ ಹಿಡಿದು ಬಂದಿದ್ದೆಯಾ, ಹೇಡಿ! ಎಂಬಂತಿರುವ ಅವನ ತಿರಸ್ಕಾರದ ಕಣ್ಣೋಟ ನನ್ನೆದೆಯನ್ನಿರಿಯುತ್ತಿದೆ.

ಕಲಾವತಿ—(ಕಳಕಳಿಯಿಂದ) ಅಪಮಾನ ಆತ್ಮನಿಂದನೆಗಳ ಅಗ್ನಿಕುಂಡದಲ್ಲಿ ಇನ್ನೆಷ್ಟು ದಿನ ಹೀಗೆಯೇ ಚಡಪಡಿಸುತ್ತ ಬಿದ್ದುಕೊಂಡಿರಬೇಕೆಂದಿರುವೆ ಅನೀಜ? ಬದುಕಿನಲ್ಲಿ ಸಂತೋಷವೆಂಬುದೇ ಇಲ್ಲವೇ ?

CC-O. In Public Domain. Digitized by Sri Vidyabharati Foundation, Bengaluru

CC-O. In Public Domain. Digitized by eGangotri

ಅನೀಜ—ಮುಕ್ತಿ? ಉಂಟು. ಮೇಲಿಂದ ಮೇಲೆ ಬರುತ್ತಿರುವ ಯುದ್ಧ ಪ್ರಸಂಗಗಳಲ್ಲಿ ಎಂದಾದರೊಂದು ದಿನ ರಣರಂಗದಲ್ಲಿ ನನ್ನ ಕೈಯ ಖಡ್ಗ ತುಂಡಾಗಿ ಎದುರಾಳಿಯ ಈಟಿ ನನ್ನದೆಯನ್ನು ಸೀಳಿದಾಗ—

ಕಲಾವತಿ—ಅಮಂಗಲ ಆಡಬೇಡ ಅಣ್ಣಾ.

ಅನೀಜ—ಇಲ್ಲವೆ, ನಿಯಾಮತಖಾನ ಸದಾರಂಗರಂತೆ ನಾನೂ ಫಕೀರನಾಗಿ ನಿಜಾಮುದ್ದೀನ ಚಿಸ್ತಿಯ ದರಗಾ ಸೇರಿದಾಗ ಮಾತ್ರ.

ಕಲಾವತಿ—ಹಾಗಾದರೆ ನನಗಿತ್ತ ಪತಿಭಿಕ್ಷೆಯ ವಚನ ?

ಅನೀಜ—(ರಾಖಿಯನ್ನು ನೋಡಿಕೊಂಡು) ನಿಜ; ಆ ಹೊಣೆಯನ್ನು ತಪ್ಪಿಸಿ ಕೊಳ್ಳುವಂತಿಲ್ಲ. ಆದರದನ್ನು ನೆರವೇರಿಸುವ ಮಾರ್ಗವನ್ನು ನೀನೇ ಸೂಚಿಸಬೇಕು.

ಕಲಾವತಿ—ಅದು ಸುಲಭ. ನೀನು ನಿನ್ನ ಸುಜಾನಳನ್ನು ಮರಳಿ ಪಡೆ; ಆಗ ನನ್ನ ಪತಿ ತಾನಾಗಿ ನನ್ನ ಬಾಗಿಲಿಗೆ ಬರುವ.

ಅನೀಜ—ಜವಳು ಚಂಚಲೆ, ವಂಚಕಿ, ಸಂಚುಗಾತಿ! ಅಂತಹವಳನ್ನು ಪುನಃ ನಾನು ಪ್ರೇಮದೇವತೆಯೆಂದು ಆರಾಧಿಸಲೆ?

ಕಲಾವತಿ—ಆರಾಧಿಸೆಂದು ನಾನು ನಿನಗೆ ಹೇಳಬಹುದೆ? ಸವತಿಯೆಂದು ತಿರಸ್ಕರಿಸಿದ ಅವಳನ್ನು ನಾಳೆ ನಾನೇ ಅತ್ತಿಗೆಯೆಂದು ಪುರಸ್ಕರಿಸಲು ಸಾಧ್ಯವಾದೀತೆ ?

ಅನೀಜ—ಹಾಗಾದರೆ ನೀನು ಹೇಳುವುದು ?

ಕಲಾವತಿ—ವಂಚನೆಯನ್ನು ವಂಚನೆಯಿಂದಲೇ ಗೆಲ್ಲಬೇಕು. ಆರಾಧಿಸಿದಂತೆ ನಟಿಸಿ ಈ ಮಹಲಿನ ಬೇಗಮಳಾಗಬಹುದೆಂಬ ಆಮಿಷವನ್ನವಳೆದುರಿಗೆ ಒಡ್ಡುವುದು : ಇಲ್ಲನೆ ಇದಕ್ಕಿಂತ ಹೆಚ್ಚಿನದೇನಾದರೂ ಇದ್ದರೆ ಅದನ್ನು! ಕನ್ನಡಿಯೊಳಗಿನ ಗಂಟನ್ನು ನಂಬಿ ಅವಳು ಕೈಯೊಳಗಿನದನ್ನು ಕಳಿದು ಕೊಳ್ಳುವಂತಾಗಬೇಕು.

ಅನೀಜ—ತುಂಬಾ ವ್ಯವಹಾರಜ್ಞಾನಕುಶಲ ಸ್ತ್ರೀಯಾಕೆ. ಕನ್ನಡಿಯೊಳಗಿನ ಗಂಟನ್ನು ನಂಬುವವಳಲ್ಲ. ಆಮಿಷಗಳಿಗೆ ಬಲಿಬೀಳುವವಳಲ್ಲ....

Sri Vidyabharathi Book Centre, Sringeri

CC-O. In Public Domain. Digitized by eGangotri

ಸುನಾನಂದನನ್ನೂ ಅವಳು ಬಹುಕಾಲ ನೆಚ್ಚಿಕೊಂಡಿರಲಾರಳು. ವೈಭವದ ಮಹಲಿನಲ್ಲಿ ಮೇಲಿನ ಮಜಲಿಗೇರಲು ಅವಳೊಂದು ದಿನ ಇವನನ್ನೇ ನಿಚ್ಚಣಕೆಯಾಗಿ ಉಪಯೋಗಿಸಿಕೊಳ್ಳಬಹುದು. ಆಮೇಲೆ ಅದನ್ನು ಒದ್ದುಬಿಡಲೂಬಹುದು.

ಕಲಾವತಿ—ಸೆರಿ, ಎಂದಾದರೊಂದು ದಿನ ಆಗಲಿರುವ ಇದು ಇಂದು ನಾಳೆಯೊಳಗಾಗಿ ಆಗುವಂತೆ ನೀನು ಪ್ರಯತ್ನಿಸಬೇಕು.

ಅನೀಜ—ಆಹುದು. ಅದಕ್ಕಾಗಿ ಅವಳು ಕಣ್ಣಿಡಬಹುದಾದ ಮೇಲಿನ ಮಜಲು ಯಾವುದಿರಬಹುದೆಂಬುದನ್ನು ಮೊದಲು ಅರಿತುಕೊಳ್ಳಬೇಕು.

ಕಲಾವತಿ—ಯಾವುದಿರಬಹುದು ಆ ಮೇಲಿನ ಮಜಲು ? (ಹಿನ್ನೆಲೆಯಲ್ಲಿ ಗಟ್ಟಿಯಾಗಿ 'ಮಹಮ್ಮದಶಾಹ ರಂಗೀಲೇರೇ ಬಲಮಾ' ಎಂದು ಮಿಯಾಕೀ ಮಲ್ಹಾರ ರಾಗದಲ್ಲಿ ಹಾಡುತ್ತಿರುವುದು ಕೇಳಿಬರುತ್ತದೆ; ತನ್ನ ಪ್ರಶ್ನೆಗೆ ಅದೇ ಉತ್ತರವೇನೋ ಎಂಬಂತೆ ಕಲಾವತಿ ಅದನ್ನು ಪುನರುಚ್ಚರಿಸುತ್ತಾಳೆ :) ಮಹಮ್ಮದಶಾಹ ರಂಗೀಲೇ ! (ರಫೀಕ ಹಾಡುತ್ತ ಪ್ರವೇಶಿಸುತ್ತಾನೆ. ಕೈಯ್ಯಲ್ಲಿದ್ದ ಗಂಟನ್ನು ಬಿಚ್ಚಿ ಅದರೊಳಗಿರುವ ಜರತಾರಿ ಸೀರೆ ಕುಪ್ಪಸದಖಣಗಳನ್ನು ಅನೀಜನ ಕೈಗೊಪ್ಪಿಸುತ್ತಾನೆ. ಅವುಗಳನ್ನವನು ಕಲಾವತಿಗೆ ಕೊಡ ಮಾಡುತ್ತ ಸೀಕವ ಮೇಲೆ ಕುಳಿತುಕೊಳ್ಳಲು ಸನ್ನೆ ಮಾಡುವನು. ಅವಳು ಸೆರಗೊಡ್ಡಿ ಬಾಗಿನವನ್ನು ಸ್ವೀಕರಿಸುತ್ತಾಳೆ. ನಮಸ್ಕರಿಸಿ ಮೇಲೆದ್ದು ಎಡಪಕ್ಕದೊಳಕ್ಕೆ ನಿರ್ಗಮಿಸುತ್ತಾಳೆ. ಅನೀಜ ಬಲಪಕ್ಕದೊಳಕ್ಕೆ ನಡೆಯುತ್ತಾನೆ. ಅವನು ಹೋಗುತ್ತಿರುವಂತೆಯೇ ರಂಗವನ್ನು ಕತ್ತಲಾವರಿಸತೊಡಗುವುದು. ಆಷ್ಟರಲ್ಲಿ ಹಿನ್ನೆಲೆಯಲ್ಲಿ ಸುಜಾನಳ ಸುಮಧುರ ಕಂಠದಿಂದ ತುಮರೀ ಗಾಯನ ಆರಂಭವಾಗುವುದು, ರಂಗದ ಮಧ್ಯದ ತೆರೆಗಳು ಸಂಪೂರ್ಣವಾಗಿ ಸರಿದು ಈ ಹಿಂದೆ ನಾವು ಕಂಡ ಸುಜಾನಳ ಮನೆಯ ದೃಶ್ಯವನ್ನು ಸ್ಪಷ್ಟವಾಗಿ ತರೆದುತೋರಿಸುತ್ತವೆ. ಮೊದಲ ದೃಶ್ಯದಲ್ಲಿ ಕಂಡ ಸೀತಗಳು ಇದ್ದಲ್ಲಿಯೇ ಇವೆ. ಆದರೆ ಅವುಗಳ ಮೇಲಿನ ಹೊದಿಕೆಗಳ ಬಣ್ಣ ಬೇರೆಯಾಗಿ ಅವೀಗ ಸುಜಾನಳ ಮನೆಯ ದಿವಾಣಖಾನೆಯನ್ನೂ ಅಲಂಕರಿಸಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ : ೨

ವ್ಯಾಸಪೀಠದ ಮೇಲೆ ಒಬ್ಬಳೇ ಕುಳಿತುಕೊಂಡು, ಸುಜಾನ ಪಹಾಡಿ ಠುಮರೀ, ಹಾಡುತ್ತಿದ್ದಾಳೆ

ಸುಜಾನ—" ಕಂಕರ ಮಾರ ಜಗಾಯೆ ಬಮನಾಕೆ ಛೋರಾ
ಸೋಯಿ ಪಡೀಥೀ ಅಪನೇ ಮಹಲಮೇ.....
ಜೋರೀ ಜೋರೀ ಆಯಿಕೈ ಮೈಕೋ ಜಗಾಯೆ
ನೇಹಾ ಲಗಾಯೆ ॥

(ಹಿನ್ನೆಲೆಯಲ್ಲಿ ಬಾಗಿಲು ಬಡಿದ ಸದ್ದು ಮತ್ತು 'ಸುಜಾನ' ಎಂಬ ಕೂಗು. ಅದರ ಪರಿವೆಯಿಲ್ಲದೆ ಅವಳ ಗಾಯನ ಮುಂದುವರಿಯುತ್ತದೆ. ತಡೆದು ತಡೆದು ಹೀಗೆ ಮೂರು ನಾಲ್ಕು ಸಲ ಬಾಗಿಲು ತಟ್ಟಿ ಹೆಸರನ್ನು ಕೂಗಿದ ಮೇಲೆ ಅದು ಲಕ್ಷ್ಯಕ್ಕೆ ಬಂದು ಹಾಡನ್ನು ನಿಲ್ಲಿಸುತ್ತಾಳೆ.)

ಸುಜಾನ—(ಹಸನ್ಮುಖಿಳಾಗಿ, ಸ್ವಗತ) ಬಂದರು ಬಮನಾಕೆ ಛೋರ! (ಬಾಗಿಲು ಬಡಿದ ಸದ್ದು, ಸುಜಾನ ಎಂಬ ಕರೆ) " ಸುಜಾನ! " ರಾಣೀ ಸುಜಾನ ಎಂದು ಕರೆಯುತ್ತಿದ್ದವರು ಇಂದೇಕೆ ಹೀಗೆ ಒರಟಾಗಿ ನೀರಸವಾಗಿ ಬರಿ ನನ್ನ ಹೆಸರನ್ನು ಮಾತ್ರ ಉಚ್ಚರಿಸುತ್ತಿದ್ದಾರೆ? ನನ್ನ ಮೇಲೆ ಕೋಪ ವಿರಬಹುದೆ? (ಮತ್ತೆ ಕರೆ, "ಸುಜಾನ") ಅಲ್ಲ, ಇದು ಘನಾನಂದರ ವಾಣಿಯಲ್ಲ (ಗಟ್ಟಿಯಾಗಿ) ಯಾರದು....? (ಅನೀಜಖಾನ ಪ್ರವೇಶಿಸುತ್ತಾನೆ; ಕಂಡು ಸುಜಾನ ಬೆಚ್ಚುತ್ತಾಳೆ) ಓಹ್....ಅನೀಜ—ನೀನು....

ಅನೀಜ—ಹೌದು, ಅನೀಜ! ನಾನು....ಯಾಕೆ? ನಾನಿಲ್ಲಿಗೆ ಬರಬಾರದಿತ್ತೇನು?

ಸುಜಾನ—ಇಂದೇನು ತಂದಿರುವೆ?

ಅನೀಜ—ಎಂದರೆ?

ಸುಜಾನ—ಮೊನ್ನೆಯಂತೂ ಬಿಚ್ಚುಗತ್ತಿಯೊಡನೆ ಬಂದಿದ್ದೆ; ಇಂದು ಮಾತ್ರ ಕೈಯಲ್ಲಿ ಕಠಾರಿಯೇನೂ ಕಾಣುತ್ತಿಲ್ಲ. ಬಹುಶಃ ನಾನೊಬ್ಬಳೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರುವುದರಿಂದ ಟೊಂಕದಲ್ಲಿನ ಸಣ್ಣದೊಂದು ಕಿರುಗತ್ತಿ ಮಾತ್ರ ಸಾಕೆಂದು ಬಂದಿರುವಂತೆ ತೋರುತ್ತದೆ.

ಅನೀಜ—ಹರಿತವಾದ ನಿನ್ನ ನಾಲಗೆಯೆದುರು ಯಾವ ಕಿರುಗತ್ತಿಯ ಆಟವೂ ನಡೆಯುವುದಿಲ್ಲ ಸುಜಾನ; ಅದಕ್ಕಾಗಿ ಅಂದು ನಾನು ಮಾಡಿದ ಅಪರಾಧಕ್ಕಾಗಿ ನಿನ್ನ ಕ್ಷಮೆ ಕೇಳಿ ಹೋಗಲು ಬಂದೆ.

ಸುಜಾನ—ನನ್ನ ಮನೆಗೆ ಬರುವುದಕ್ಕೆ ನಿನಗಿದ್ದ ನೆಪಗಳೆಲ್ಲ ಮುಗಿದು ಕೊನೆಗೀಗ ಕ್ಷಮಾಪಣೆಯ ನೆಪವನ್ನವಲಂಬಿಸಬೇಕಾಯಿತೆ? ಅಯ್ಯೊ ಪಾಪ!

ಅನೀಜ—ನಿಜವಾಗಿಯೂ ನಾನಂದು ಕಡುಹೇಡಿಯಂತೆ ವರ್ತಿಸಿದೆ ಸುಜಾನ. ನೀನದಕ್ಕೆ ತಕ್ಕ ಪ್ರತೀಕಾರವನ್ನೇ ಮಾಡಿಸಿದೆ.

ಸುಜಾನ—ನಾನೇನು ಮಹಾ ಮಾಡಿದೆ? ನೀನಿಲ್ಲಿ ಖಡ್ಗವನ್ನು ಬಿಸುಡಿ ಹೋದ ಮೇಲೆ ಅದನ್ನು ನಿನಗೆ ತಲುಪಿಸಬೇಕೆಂದು ಹೇಳಿ ಮುನಶಿಯವರೊಂದಿಗೆ ನಿಮ್ಮ ಸೇನಾಪತಿಯ ಬಳಿಗೆ ಕಳುಹಿಸಿಕೊಟ್ಟೆ. ಅದು ಪ್ರತೀಕಾರವೆನಿಸಿತೇನು?

ಅನೀಜ—ಅಲ್ಲವೇನು? ನನ್ನ ಖಡ್ಗ ನಿನ್ನ ಮನೆಯಲ್ಲಿ ಉಳಿದುದಕ್ಕೆ ಕಾರಣವೇನಾಯ್ತು ಎಂಬುದನ್ನೆಲ್ಲ ಆಮೂಲಾಗ್ರವಾಗಿ ಕಾವ್ಯಮಯವಾಗಿ ಮುನಶಿಯವರು ನನ್ನ ಮೇಲಧಿಕಾರಿಯೆದುರು ಬಣ್ಣಿಸಿ ಹೋಗಿದ್ದರು. ಅದರಿಂದಾಗಿ ಅಧಿಕಾರಿಯ ಕಟಕಿಯ ಮಾತು ಶೂಲದಂತಿರಿಯಿತು ನನ್ನನ್ನು. ಮೊದಲೇ ಪಶ್ಚಾತ್ತಾಪದಿಂದ ನೊಂದ ನಾನು ಈ ಅವಮಾನದಿಂದ ಬೆಂದುಹೋದೆ. ಜೀವನವನ್ನೇ ಕೊನೆಗಾಣಿಸಲು ನಿರ್ಧರಿಸಿದೆ.

ಸುಜಾನ—ಶೂರ ಸರದಾರನಿಗೆ ಆತ್ಮಹತ್ಯೆ ಸಾಧ್ಯವಾಗಲಿಲ್ಲವೇನೊ, ಪಾಪ!

ಅನೀಜ—ಶೂರನಾದುದರಿಂದಲೇ ಸಾಧ್ಯವಾಗಲಿಲ್ಲ ಸುಜಾನ. ಬಂದಿದ್ದ ಯುದ್ಧಪ್ರಸಂಗಗಳನ್ನೆಲ್ಲ ಸ್ವಾಗತಿಸಿ ಸೇನಾಪತಿಯ ಅಪ್ಪಣೆ ಪಡೆದು ರಣರಂಗದಲ್ಲಿ ಸೇನೆಯ ಮುಂಚೂಣಿಯಲ್ಲಿ ನಾನೇ ನಾಯಕನಾಗಿ ನಿಂತು ಮುನ್ನಡೆಸುತ್ತಿದ್ದೆ. ಸಾಯಲು ಸಿದ್ಧನಾಗಿದ್ದ ನಾನು ಕಾಳೆಗದ ಕಣದಲ್ಲಿ ಸೈನಿಗಳ ಮಧ್ಯಕ್ಕೆ ನಿರ್ಭಯನಾಗಿ ನುಗ್ಗುತ್ತಿದ್ದೆ. ಖಡ್ಗ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ತಿರುಗಿಸುತ್ತ ಮುಂಬರಿದಾಗ ಮುಂದೆ ನಾನು ಮುನ್ನುಗ್ಗಿದ್ದ ಉದ್ದೇಶವೇ ಮರೆತುಹೋಗಿ ಸಾಯಲು ಮುಂದಾಗಿದ್ದ ನಾನು ಕೊಲ್ಲಲು ಪಕ್ರಮಿಸುತ್ತಿದ್ದೆ. ನನ್ನ ಹಥಿಯಾರದ ಮಿಂಚಿನ ಸಂಚಾರಕ್ಕೆ ಸಿಕ್ಕ ಅರಿಗಳ ಶಿರಗಳು ಒಂದರ ನಂತರ ಒಂದು ಉರುಳುತ್ತ ನಡೆದಂತೆ ನನ್ನ ಉತ್ಸಾಹ ಇಮ್ಮಡಿಸಿ ಮುಮ್ಮಡಿಸಿ ನೂರ್ಮಡಿಸುತ್ತಿತ್ತು. ಅಂದಂದಿನ ಹೋರಾಟ ಮುಗಿದು ಡೇರೆಗೆ ಹಿಂದಿರುಗಿದಾಗ ಸೇನಾಪತಿ ನನ್ನನ್ನು ಹುಡುಕಿಕೊಂಡು ಬಂದು " ಶಾಬಾಶ್ ಪಠ್ಠೆ !" ಎಂದಾಗಲೇ ನನಗೆ ನನ್ನ ಆಕಾರ್ಯದ ನೆನಪಾಗುತ್ತಿದ್ದುದು : ಸಾಯಹೊರಟವನು ಕೊಂದು ಬಂದೆನಲ್ಲ ಎಂದು.

ಸುಜಾನ—ಅಂತೂ ನಿನ್ನ ಶೌರ್ಯಕ್ಕಾಗಿ ನಿನಗೆ ಸೈನ್ಯದಲ್ಲಿ ಮೇಲಿನ ಹುದ್ದೆ ಸಿಕ್ಕಿತೆಂದು ಕೇಳಿದೆ.

ಅನೀಜ—ಓ, ಹಾಗಾದರೆ ನಿನಗಾ ಸಮಾಚಾರ ಸಿಕ್ಕಿದೆ ಈಗಾಗಲೇ. ನಿಜ ಸುಜಾನ, ಸೈನ್ಯದಲ್ಲಿ ನಾನೊಬ್ಬ ದೊಡ್ಡ ಮನುಷ್ಯನೀಗ. ಉನ್ನತ ಅಧಿಕಾರಿ. ಈಗಲಾದರೂ ನಿನ್ನ ಮನಸ್ಸನ್ನು ಬದಲಾಯಿಸು. ಆ ಬಡ ಮುನಶೀ ಘನಾನಂದನನ್ನು ಮರೆತುಬಿಡು. ನನ್ನವಳಾಗು ಸುಜಾನ.

ಸುಜಾನ—ಬಡ ಮುನ್ಶೀ ! ಹೊಟ್ಟೆಪಾಡಿಗಾಗಿ ಅವರು ಸುಲತಾನರ ದರ ಬಾರಿನಲ್ಲಿ ಮುನಿಶಿಯಾಗಿರಬಹುದು ಅನೀಜ ; ಆದರೆ ಅವರೆಂಥ ದರ್ಜಿಯ ಗಾಯಕರೆಂಬುದನ್ನು ಒರಟು ಸೈನಿಕನಾದ ನೀನೇನು ಬಲ್ಲೆ! ಅವರ ಧ್ರುಪದ ಗಾಯನಕ್ಕೆ ನಮ್ಮ ಈ ಮಹಲಿನ ಗೋಡೆಗಳು ನಡುಗುತ್ತಿವೆ. , ಕೆಲವೊಮ್ಮೆ ಅವರ ತಾನಗಳನ್ನೇ ಮೇಘ ಗರ್ಜನೆಯೆಂದು ಭ್ರಮಿಸಿ ನಮ್ಮ ಬಗೀಚಾದಲ್ಲಿ ನವಿಲುಗಳು ನರ್ತಿಸುವುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಇನ್ನು ಅವರ ಕವಿತ್ವದ ವಿಷಯ. ಅದನ್ನು ವಿವರಿಸಿ ಹೇಳಿದರೂ ನಿನಗರ್ಥವಾಗುವುದಿಲ್ಲ.

ಅನೀಜ—ಅದನ್ನೇ ನಾನೀಗ ಹೇಳಲು ಬಂದೆ ಸುಜಾನ. ಅವನು ಕವಿ. ಅವನ ಪಾಡಿಗವನನ್ನು ಬಿಟ್ಟುಬಿಡು. ಇನ್ನವನನ್ನು ಈ ಮಹಲಿಗೆ ಬರಗೊಡಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಆದರಿಂದ ನಿನಗಾಗುವ ಲಾಭವೇನು? ಅವರನ್ನಿಲ್ಲಿಗೆ ಬರಗೊಡದಿದ್ದ ಮಾತ್ರಕ್ಕೆ ನಿನಗೆ ಸದಾ ಸ್ವಾಗತ ಸಿಕ್ಕೀತೆಂದು ತಿಳಿಯಬೇಡ. ನಿನ್ನ ಪಾಲಿಗೆ ಈ ಮಹಲಿನ ಬಾಗಿಲು ಎಂದೆಂದಿಗೂ ಮುಚ್ಚಿದಂತೆಯೆ. ಇದನ್ನರಿತು ನಡೆದುಕೊಳ್ಳದಿದ್ದರೆ ಇನ್ನು ಮೇಲೆ ನಿನ್ನ ವಿರುದ್ಧ ಸುಲತಾನ ಮಹಮ್ಮದ ಶಾಹರಿಗೆ ದೂರು ಕೊಡಬೇಕಾದೀತು, ಎಚ್ಚರಿಕೆ!

ಅನೀಜ—ಸುಲತಾನ ಮಹಮ್ಮದ ಶಾಹರಿಗೆ! (ಗಹಗಹಿಸಿ ನಕ್ಕು) ರಂಗೀಲೆ ಪಿಯಾ ಮಹಮ್ಮದ ಶಾಹರಿಗೆ! ಸದಾ ಕುಡಿತ ಕುಣಿತ ಹಾಡು ಹುಚ್ಚಾಟಗಳಲ್ಲಿ ನಿರತರಾದ ಸುಲತಾನರಿಗೆ ನೀನು ದೂರು ಕೊಡಲು ಹೋಗುವೆಯಾ ಸುಜಾನ? ಆ ರಸಿಕ ರಾಜನ ಕಣ್ಣಿಗೆ ಬಿದ್ದ ಈ ರೂಪರಾಶಿ ಅವನ ಜನಾನಖಾನೆಯನ್ನು ಸೇರದೆ ಮರಳಿ ಈ ಮಹಲಿಗೆ ಬರುವುದು ಸಾಧ್ಯವೆ? (ಆವಳಿಗೇನೋ ಹೊಸ ಯೋಚನೆ ಹೊಳೆಯುತ್ತದೆ.) ಆಮೇಲೆ ಆ ಘನಾನಂದನ ಗತಿಯೇನು? ಯೋಚಿಸು. ನಾನೇನೋ ಗಡುಸು ಗಂಡಸು. ಶೂರ ಸೈನಿಕ. ನನ್ನನ್ನು ದೂಡಿಕೊಟ್ಟು ನೀನು ಆ ಘನಾನಂದನನ್ನು ಆಶ್ರಯಿಸಿದ ಆ ಆಘಾತವನ್ನು ನಾನು ಹೇಗೋ ಸಹಿಸಿದೆ. ಆದರೆ ಹೆಣ್ಣೆದೆಯ ಆ ಕವಿ ಸಹಿಸಿಯಾನೆ? ಆದಕ್ಕಾಗಿ, ಅವನ ಒಗೆಗಿನ ಕನಿಕರದಿಂದಾಗಿ ಹೇಳುತ್ತಿದ್ದೇನೆ ಸುಜಾನ, ಘನಾನಂದ ಇನ್ನೂ ಪೂರ್ತಿಯಾಗಿ ನಿನ್ನ ವಿಷಯದಲ್ಲಿ ಹುಚ್ಚನಾಗುವ ಮುನ್ನವೇ ಆವನನ್ನು ಉದಾಸೀನವಾಗಿ ಕಂಡು ಇಲ್ಲಿಗೆ ಬರುವುದನ್ನು ನಿಲ್ಲಿಸುವಂತೆ ಮಾಡು. ಆ ಕಾರಣಕ್ಕಾಗಿಯಾದರೂ ನನ್ನಲ್ಲಿ ಅನುರಾಗ —

ಸುಜಾನ—ಏನು? ನಿನ್ನಲ್ಲಿ ಅನುರಾಗವೆ? (ನಗು) ಗುಜರಗಯಾ ಫೋಜಮಾನಾ.

ಅನೀಜ—ಬಲ್ಲೆ ಸುಜಾನ.. ಆ ಕಾಲ ಇನ್ನೆಂದಿಗೂ ಮರಳಿ ಬರಲಾರದೆಂದು ಬಲ್ಲೆ ನಾನು. ಆದರೆ ಆ ಕವಿಯನ್ನು ನಿನ್ನಿಂದ ವಿಮುಖನನ್ನಾಗಿಸುವುದಕ್ಕಾಗಿ ನನ್ನಲ್ಲಿ ಆಸಕ್ತಳಾದಂತೆ ಅಭಿನಯಿಸು. ಹೇಗೂ ಹೂವಿಂದ ಹೂವಿಗೆ ಹಾರುವ ಪಾತರಗಿತ್ತಿ ನೀನು.

Sri Vidyabharathi Book Centre, Sringeri

ಸುಜಾನ—(ಕೋಪದಿಂದ) ಅನೀಜ್!

CC-O. In Public Domain. Digitized by eGangotri

ಅನೀಜ—ಈ ಸೈನಿಕನನ್ನು ಬೆದರಿಸಲಾರೆ ನೀನು ಸುಜಾನ....ಹಿಂದೊಮ್ಮೆ ನಿನ್ನ ಬಾಳ ಪುಸ್ತಕದಲ್ಲಿ ನನ್ನ ಹೆಸರನ್ನು ಬರೆವೆನೆಂದಿದ್ದಾಗ ಅಭಿಮಾನ ಪಟ್ಟಿದ್ದೆ ನಾನು. ಆದರೆ ಯಾರ ಹೆಸರನ್ನು ತೊಡೆದುಹಾಕಿ ಎಂಬ ವಿಚಾರವೇ ನನ್ನ ಮತಿಗಾಗ ಹೊಳೆಯಲಿಲ್ಲ. ಈಗಲೇನೋ ಘನಾನಂದನ ಹೆಸರನ್ನು ಬರೆದಿರುವಿರಿ. ಆದರೆ ಮುಂದೆ ಅದನ್ನು ಹೊಡೆದುಹಾಕಿ ಇನ್ನೊಬ್ಬರ ಹೆಸರನ್ನು ಬರೆದಾಗ ಆ ಹೊಡೆತವನ್ನು ಸಹಿಸಿಯಾನೇ ಆ ಘನಾನಂದ ? ಮೇಘ ಗರ್ಜನೆಯಂತೆ ಧ್ರುಪದ ತಾನಗಳನ್ನು ಗುಡುಗುವ ಆತ ಶ್ರಾವಣದ ಮಳೆಯಂತೆ ಕಂಬನಿ ಸುರಿಸುತ್ತ ಸೋತು ಹೋಗಲಿಕ್ಕಿಲ್ಲವೆ ?

ಸುಜಾನ—ಅನೀಜ, ಘನಾನಂದರ ಬಗ್ಗೆ ನಿನಗಿಷ್ಟೊಂದು ಕರುಣೆ ಕಳಕಳ ಏಕೆ ?

ಅನೀಜ—ಹೇಳಲೇಬೇಕೇನು ? ಹೇಗಾದರೂ ಮಾಡಿ ಆವರನ್ನು ನಿನ್ನ ಹಿಡಿತದಿಂದ ಬಿಡಿಸಬೇಕೆಂದು ಘನಾನಂದರ ಹೆಂಡತಿ–ನನ್ನ ರಾಖೀ ಸಹೋದರಿ–ನನ್ನಲ್ಲಿ ಅಂಗಲಾಚಿದಳು.

ಸುಜಾನ—ಓ ! ಆದರೆ ಅವಳು ಈ ಊರನ್ನೇ ತೊರೆದು ತೌರೂರಿಗೆ ಹೊರಟು ಹೋದಳೆಂದು ಕೇಳಿದ್ದೆನಲ್ಲ ?

ಅನೀಜ—ಇನ್ನೇನನ್ನು ತಾನೆ ಮಾಡಿಯಾಳು ! ಘನಾನಂದ ನಿನ್ನ ಸಹವಾಸ ಮಾಡಿದನೆಂದು ಬ್ರಾಹ್ಮಣ ಸಮಾಜ ಅವನಿಗೆ ಬಹಿಷ್ಕಾರ ಹಾಕಿತು. ಅವನಿಗೇನೋ ನಿನ್ನಲ್ಲಿ ಆಶ್ರಯ, ಆದರಾತಿಥ್ಯ ಎಲ್ಲ ಸಡಗರದಿಂದ ನಡೆದಿದೆ–ಎಷ್ಟು ಕಾಲ ನಡೆಯುವುದೋ ನೋಡಬೇಕು – ಆದರೆ ಅವನ ಹೆಂಡತಿಯ ಗತಿ ? ಕುಡಿಯಲು ತೊಟ್ಟು ನೀರೂ ಸಿಗದಂತೆ ವ್ಯವಸ್ಥೆ ಮಾಡಿತು ಸಮಾಜ.

ಸುಜಾನ—ಅದಕ್ಕಾಗಿ ಅವಳು ಮನೆಯನ್ನು ತೆರವು ಮಾಡಿ ತೌರಿಗೆ ನಡೆದಳು. ನೀನಲ್ಲಿಗೆ ಹೋಗಿ ಅವಳನ್ನು ನೋಡಿಕೊಂಡು ಬಂದೆ.

ಅನೀಜ—ನಾಲಿಗೆಯ ಮೇಲೆ ಹಿಡಿತವಿರಲಿ ಸುಜಾನ ! ಆವಳು ನನ್ನ ರಾಖೀ ಸಹೋದರಿಯೆಂಬುದು ನೆನಪಿರಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—(ಅಳುದನಿ) ನೀವಿಬ್ಬರೂ ಮಸಲತ್ತು ಮಾಡಿ ಜಗನ್ನಾಥ-ಲವಂಗಿ ಯರಂತಿರುವ ನಮ್ಮನ್ನು ಅಗಲಿಸುವ ನಿರ್ಧಾರ ಮಾಡಿದಿರಿ.

ಅನೀಜ—ಲವಂಗಿ ? ಲವಂಗಿಯ ಹೆಸರು ನಿನ್ನ ಬಾಯಲ್ಲೇಕೆ ಸುಜಾನ ? ಲವಂಗಿ ಪತಿವ್ರತೆ !

ಸುಜಾನ—ಅನೀಜ !

ಅನೀಜ—ಜಗನ್ನಾಥನೊಡನೆ ಜಲಸಮಾಧಿ ಹೊಂದಿ ಪತಿಯೊಡನೆ ಸಹ ಗಮನ ಮಾಡಿದ ಸತಿ ಆಕೆ. ಆದರೆ ನೀನು ? ಕೆಲ ಕಾಲ ಸುಖಪಟ್ಟು-ನಿನ್ನ ಮನಸ್ಸಿನಲ್ಲಿ ಯಾವ ಉದ್ದೇಶವಿದೆಯೋ ಖುದಾನಿಗೆ ಗೊತ್ತು—ಅದು ಈಡೇರಿದ ಮರುದಿನವೇ ಘನಾನಂದನನ್ನು ದೂಡಿಕೊಟ್ಟು ಇನ್ನೊಬ್ಬ ಯಾರನನ್ನು ಹುಡುಕಿಕೊಳ್ಳಲಿರುವ ನಿನ್ನನ್ನು ಆ ಲವಂಗಿಗೆ ಹೋಲಿಸಿ ಕೊಳ್ಳುವೆಯಾ ?

ಸುಜಾನ—(ಬಂದ ಕೋಪವನ್ನು ಅದುಮಿಕೊಳ್ಳುತ್ತ) ನೀನಿಲ್ಲಿಗೆ ಬಂದೀಗ ಬಹಳ ಹೊತ್ತಾಯಿತಲ್ಲವೆ ಅನೀಜ ? ನಿನ್ನ ರಾಖೀ ಸಹೋದರಿಗಾಗಿ ಮಾಡಬೇಕಾಗಿರುವ ಮಹತ್ಕಾರ್ಯ ನಿನ್ನನ್ನು ಕರೆಯುತ್ತಿರಬೇಕು.

ಅನೀಜ—ಸಕಾಲದಲ್ಲಿ ನೆನಪು ಮಾಡಿಕೊಟ್ಟೆ. ನಿಜ. ನಾನೀಗ ಹೊರಡು ತ್ತೇನೆ. ಹೇಗಾದರೂ ಮಾಡಿ ಘನಾನಂದನನ್ನುಳಿಸಬೇಕು. ನನ್ನ ತಂಗಿಗೆ ಕೊಟ್ಟ ವಚನವನ್ನು ಪಾಲಿಸಲೇಬೇಕು. ಬರುತ್ತೇನೆ ಸುಜಾನ, ಫಿರ ಮಿಲೇಂಗೇ.

ಸುಜಾನ—ಹೇಳಿದೆನಲ್ಲವೆ ಅನೀಜ, ನೀನು ಮತ್ತೆಂದೂ ಈ ಮಹಲಿನಲ್ಲಿ ಕಾಲಿರಿಸಕೂಡದು. ನನ್ನನ್ನು ಭೇಟಿ ಮಾಡಲು ಪ್ರಯತ್ನಿಸಕೂಡದು.

ಅನೀಜ—ಎಂದಿಗೂ ಇಲ್ಲ ಸುಜಾನ, ಮೇರೀ ಜಾನ ! ಫಿರ ಭೀ ಜರೂರ ಫಿರ ಮಿಲೇಂಗೆ ! ನಾನಿನ್ನು ನಿನ್ನನ್ನು ನೋಡುವುದು ಸುಲತಾನ ಮಹಮ್ಮದ ಶಾಹರ ದರಬಾರಿನಲ್ಲಿ ! ಶಾಯದ್ ಜನಾನಖಾನೆಯಲ್ಲಿ (ಹೋಗುತ್ತ) ಖುದಾ ಹಾಫಿಜ್.

(ಕೃತಕ ಗೌರವ ಸೂಚಕವಾಗಿ ಸಲಾಮ ಮಾಡಿ ಅನೀಜ ಹೊರಟು ಹೋಗುತ್ತಿರುವಂತೆಯೇ ಬೃಶ್ಯವು ಕತ್ತಲೆಯಲ್ಲಿ ಕರಗುವುದು. ಮತ್ತೆ

Sri Vidyalakshmi Book Centre, Sringeri

CC-O. In Public Domain. Digitized by eGangotri

ಬೆಳಕಾದಾಗ ರಂಗದ ಮಧ್ಯಕ್ಕೆ ರಸ್ತೆಯ ತೆರೆ ಇಳಿದಿರುವುದು. ಫಕೀರನಾದ ಸದಾರಂಗ ಯಾವುದೋ ರಾಗಾಲಾಪನೆಯಲ್ಲಿ ಮೈಮರೆತು ತನ್ನ ಪಾಡಿಗೆ ತಾನು ಹಾಡಿಕೊಂಡು ಹೋಗುತ್ತಿರುತ್ತಾನೆ.

ದೃಶ್ಯ : ೩

"ನ್ಯಾಮತ ಖಾನ, ನ್ಯಾಮತ ಖಾನ....ಸದಾರಂಗರೇ ಸದಾರಂಗರೇ" ಎಂದು ಕೂಗುತ್ತ ರಫೀಕ ಅವನನ್ನು ಹಿಂಬಾಲಿಸಿ ಬರುತ್ತಾನೆ. ಅವನ ಕೂಗಿನ ಪರಿವೆಯಿಲ್ಲದೆ ನ್ಯಾಮತ ಖಾನ ಮುಂದೆ ಮುಂದೆ ಹೋಗಿಬಿಡುತ್ತಾನೆ. ರಫೀಕನಿಗೆ ಮುಖಭಂಗವಾದಂತಾಗುತ್ತದೆ. ಸರಿ, ತಾನಿದ್ದಲ್ಲಿಗೇ ಇವನು ಬರುವಂತೆ ಮಾಡುತ್ತೇನೆ ಎಂಬಂತೆ ಹಾವ ಭಾವಗಳನ್ನು ಮಾಡಿ ಹಾಡತೊಡಗುತ್ತಾನೆ.)

ರಫೀಕ—(ಶಂಕರಾ ರಾಗದಲ್ಲಿ, ನಸುವ್ಯಂಗ್ಯದೊಂದಿಗೆ)

ಆದ ಮಹಾದೇವ ಬೀನ ಬಜಾಯೆ
ಪಾಯೆ ನಿಯಾಮತಖಾನ ಸದಾರಂಗ ಸಬ
ಕರನ ದಿಖಾಯೇ....ಆದ ಮಹಾದೇವ

(ಇವನ ಗಾಯನವನ್ನು ಕೇಳಿ, ಹೊರಟಿದ್ದ ನ್ಯಾಮತ ಖಾನ ಹಿಂದಕ್ಕೆ ಬರುತ್ತಾನೆ. ಆದನ್ನು ಗಮನಿಸಿ ರಫೀಕ ಗಟ್ಟಿಯಾಗಿ ಸ್ವಗತವೆಂಬಂತೆ ಮಾತನಾಡತೊಡಗುತ್ತಾನೆ)

ಅರೆ ವಾಹ! ಅರೆ ವಾಹ, (ಅಣಕವಾಗಿ) ಆದಮಹಾದೇವ ಬೀನ ಬಜಾಯೆ ಪಾಯೆ ನಿಯಾಮತ ಖಾನ! ಈ ನಿಯಾಮತ ಖಾನರು ಫಕೀರರಂತೆ, ಮೌಲ್ವಿಗಳಂತೆ! ಆದರೆ ಕಾಫಿರರ ದೇವರಾದ ಮಹಾದೇವನ ತಾರೀಫ ಮಾಡುತ್ತಾರೆ.

ನ್ಯಾಮತ—(ಅವನ ಬಳಿಗೆ ಬಂದು) ಪಾಗಲ ಕಹೀಂಕಾ.....ಯಾರನ್ನೋ ನೀನು ಆಡಿಕೊಳ್ಳುತ್ತಿರುವುದು?

ರಫೀಕ—ನ್ಯಾಮತಖಾನರನ್ನು.

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಮತ—ನ್ಯಾಮತ ನಾನೇ.

ರಫೀಕ—ಅಲ್ಲ ಅಲ್ಲ ; ಸದಾರಂಗರನ್ನು.

ನ್ಯಾಮತ—ಸದಾರಂಗ ಎಂದರೂ ನಾನೇ.

ರಫೀಕ—ಹಾಗಾದರೆ ನಾನು ಆಡಿಕೊಂಡದ್ದು ಇವರಿಬ್ಬರನ್ನೂ ಅಲ್ಲ.

ನ್ಯಾಮತ—ಮತ್ತೆ ?

ರಫೀಕ—ನಿಮ್ಮೊಬ್ಬರನ್ನೇ !

ನ್ಯಾಮತ—ಓಹೋ ಹಾಗೇನು ?

ರಫೀಕ—ಹಾಗಲ್ಲದೇನು ? ಮುಸಲ್ಮಾನ ಫಕೀರರಾದ ನೀವು ಕಾಫಿರ ಹಿಂದುಗಳ ಈಶ್ವರನನ್ನು ಹೊಗಳಿದರೆ ? ನಮಗೆ ಕೋಪ ಬಾರದಿರುತ್ತದೆಯೆ ?

ನ್ಯಾಮತ—ಮೂರ್ಖಾ, ಸಂಗೀತಗಾರನಾದ ನನಗೆ ಸ್ವರವೇ ಆರಾಧ್ಯ ದೈವ, ಸ್ವರವೇ ಅಲ್ಲಾಹ ! ಸ್ವರ ಈಶ್ವರ !! ಸಂಗೀತದ ಸಮಾಧಿ ಸ್ಥಿತಿಯಲ್ಲಿದ್ದಾಗ ನಿರಾಕಾರ ದೇವರು ನಮ್ಮ ಮುಖದಿಂದ ಆಕಾರ ರೂಪದಲ್ಲಿ ಅವತರಿಸುತ್ತಾನೆ. ಆ ಆಕಾರಗಳೂ ಅನಂತ ವೈವಿಧ್ಯ ಪಡೆದು ನಲವತ್ತೊಂಬತ್ತು ಕೋಟಿ ತಾನಗಳಾಗಿ ಮೂಡಿಬಂದವು ಅಂದೊಮ್ಮೆ, ನಾನು ಚಿಸ್ತಿಯ ದರ್ಗಾದಲ್ಲಿ ಶಂಕರಾ ರಾಗ ಹಾಡಿದಾಗ. ಆವಾಗಲೇ ನಾನು ಈ ಖಯಾಲ ರಚನೆ ಮಾಡಿದ್ದು (ಹಾಡತೊಡಗುತ್ತಾನೆ.)

ಸಪ್ತ ಸೂರನ ತೀನ ಗ್ರಾಮ ಉನಚಾಸ ಕೋಟಿ ತಾನ
ಸದಾರಂಗ ಸಬ ಗುನಿಯನಸೋ ಗಾಯೇ ರಿಝೂಯೇ ॥

ಆದ ಮಹಾದೇವ

ರಫೀಕ—ಓಹೋ ! ಈ ನಿಮ್ಮ ಗಾಯನವನ್ನು ಕೇಳಿ ಜನರು ಮೆಚ್ಚಿದರೋ?

ನ್ಯಾಮತ—ಜನರೆಂದರೆ ಗುಣೀಜನರು, ಪಂಡಿತರು. "ಗುನಿಯನಸೋ ಗಾಯೇ ರಿಝೂಯೇ...."

ರಫೀಕ—ಇಂತಹ ಖಯಾಲನ್ನು ಮೆಚ್ಚಬೇಕಾದರೆ ಅವರೆಂತಹ ಗುಣಿಗಳೋ, ಎಂತಹ ಪಂಡಿತರೋ ! ಧೈರ್ಯವಿದ್ದರೆ ಸುಲತಾನ ಮಹಮ್ಮದಶಾಹ ರಂಗೀಲೇ ಅವರ ದರಬಾರಿನಲ್ಲಿ ಬಂದು ಹಾಡಿರಿ. ಅಲ್ಲಿರುವ ಗುಣೀಜನ

Sri Vidyabharathi Book Centre, Sringeri

CC-O. In Public Domain. Digitized by eGangotri

ರನ್ನು ಮೆಚ್ಚಿಸಿರಿ. ಅದು ನಿಮ್ಮ ನಿಜವಾದ ಸತ್ತ್ವಪರೀಕ್ಷೆ. ಅದು ಬಿಟ್ಟು ಯಾರೋ ದರಗಾದ ಉರಸಿಗೆ ಬಂದ ಯಾತ್ರಿಕರೆದುರು ಹಾಡಿ ವಾಹವಾ ಎನಿಸಿಕೊಂಡರೆ ಆದೊಂದು ದೊಡ್ಡ ಮಾತಲ್ಲ. ನೀವು ತಾನಸೇನರ ವಂಶಜರೇ ನಿಜವಾದ ಪಕ್ಷದಲ್ಲಿ ನಮ್ಮ ಸುಲತಾನರ ದರಬಾರಿನಲ್ಲಿ ಬಂದು ಹಾಡಿರಿ. ಆಗ ನಿಮಗೆ ಶಾಬಾಶ್ ಎಂದೇನು.

ನ್ಯಾಮತ—ಏನು? ಐಶಾರಾಮಿನ ಆ ಸುಲತಾನ ಮಹಮ್ಮದಶಾಹರ ದರ ಬಾರಿನಲ್ಲಿ ನಾನು ಹಾಡುವುದೇ? ಸಾಮಾನ್ಯರ ಮಟ್ಟದ ಗಜಲ ಕವಾಲಿ ಸಂಗೀತ ಬಿಟ್ಟು ನನ್ನ ಖಯಾಲ ಗಾಯನ ಕೇಳಿ ಅರ್ಥ ಮಾಡಿ ಕೊಳ್ಳುವ ಯೋಗ್ಯತೆಯಿದೆಯೆ ದರಬಾರಿನ ಅಮೀರ ಸರದಾರರಿಗೆ? ಇನ್ನು ನಿಮ್ಮ ರಂಗೀಲೇ ರಾಜಾ ಸುಲತಾನರು! ಅವರ ಪ್ರೇಯಸಿ ನೂರಬಾಯಿಯ ಐಹಿಕ ದೈಹಿಕ ಶೃಂಗಾರ ರಸದ ನೃತ್ಯ ಠುಮರಿ ದಾದರಾಗಳನ್ನು ಬಿಟ್ಟು ದೈವಿಕ ಭಕ್ತಿಯ ನನ್ನ ಶಾಸ್ತ್ರೀಯ ಗಾಯನ ವನ್ನು ಕೇಳುವರೆ ಅವರು?

ರಫೀಕ—ನೂರಬಾಯೀ? ಯಾವ ಜಮಾನಾದಲ್ಲಿದ್ದೀರಿ ನೀವು ಹಜರತ್? ನೂರಬಾಯಿ ಆಗಲೇ ಹಳೆಯ ಮಾಲಾಯಿತು. ಸುಲತಾನರ ಇತ್ತೀಚಿನ ಪ್ರೇಯಸಿ ಕೋಕಿಜೀಯೋ!

ನ್ಯಾಮತ—ಸರಿ, ಅವಳಾದರೆ ಅವಳು. ಕೋಕಿಜೀಯೋ ಅಲ್ಲವಾದರೆ ಜುಗ ಜುಗ ಜೀಯೋ.

ರಫೀಕ—ಅವಳು ನೂರಬಾಯಿಗಿಂತಲೂ ನೂರುಮಡಿ ಖೂಬಸೂರತ್; ಅವಳಿಗಿಂತಲೂ ಜೆನ್ನಾಗಿ ನಾಚಮಾಡುತ್ತಾಳೆ, ಹಾಡುತ್ತಾಳೆ.

ನ್ಯಾಮತ—ಸರಿ ಮತ್ತೆ. ಆ ವೇಶ್ಯಾ ಸ್ತ್ರೀಯ ಸಂಗೀತವಿರುವಾಗ ನನ್ನ ಶಾಸ್ತ್ರೀಯ ಸಂಗೀತ ಅವರಿಗೇತಕ್ಕೆ!

ರಫೀಕ—ಹಾಗೆನ್ನಬೇಡಿರಿ ಸರದಾರಂಗ. ನಮ್ಮ ಸುಲತಾನರು ರಸಿಕರಾದಷ್ಟೇ ಗುಣಿಗಳೂ ಹೌದು. ನಿಮ್ಮ ಎಷ್ಟೋ ಚೀಜುಗಳನ್ನು ಬೇರೆ ಗಾಯಕರು ಹಾಡಿದುದನ್ನು ಕೇಳಿ ಮೆಚ್ಚಿ ಬಹುಮಾನ ಕೊಟ್ಟು ಕಳಿಸಿದ್ದಾರೆ. ಇನ್ನು ಸ್ವತಃ ನೀವೆ ಬಂದು ದರಬಾರಿನಲ್ಲಿ ಹಾಡಿದರೆ —

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಮತ—ನೀನು ಯಾರಪ್ಪಾ ?

ರಫೀಕ—ನನ್ನ ಹೆಸರು ರಫೀಕ. ಸರದಾರ ಅನೀಜಖಾನರ ಸೇವಕ.

ನ್ಯಾಮತ—ನೋಡಿಯೋ, ಒಬ್ಬ ಸಾಮಾನ್ಯ ಸೇವಕನಾದ ನೀನು ಕೂಡ ಇದೀಗ ನನ್ನದೊಂದು ಖಯಾಲ ಹಾಡುತ್ತಿದ್ದೆ.

ರಫೀಕ—ಅದು – "ಆದ ಮಹಾದೇವ – ?" ನನ್ನ ದೋಸ್ತನೊಬ್ಬ ಅದನ್ನು ಹಾಡುತ್ತಿದ್ದುದನ್ನು ಕೇಳಿ – – –

ನ್ಯಾಮತ—ಸರಿ ಮತ್ತೆ ; ನಿನ್ನಂತ ಅನೇಕರು ನನ್ನ ಚೀಜುಗಳನ್ನು ಹಾಡುತ್ತಿದ್ದಾರೆಂದಂತಾಯಿತು. ಇದಕ್ಕಿಂತ ಬೇರೆ ಬಹುಮಾನವೇನು ಬೇಕು ಹೇಳು ಈ ಫಕೀರನಿಗೆ ?

ರಫೀಕ—ಹಾಗೆಂದರೆ ಹೇಗೆ? ದರಬಾರಿನ ಗುಣೀಜನರನ್ನು ಮೆಚ್ಚಿಸಿ ಅವರಿಂದ ವಾಹವಾ ಎನಿಸಿಕೊಂಡರೆ ಮಾತ್ರ ನಿಮ್ಮ ಯೋಗ್ಯತೆ ಗೊತ್ತಾಗುವುದು.

ನ್ಯಾಮತ—ಯಾರಿದ್ದಾರೆ ಬೇಟಾ ನನ್ನ ಯೋಗ್ಯತೆಯನ್ನು ಅಳೆಯಬಲ್ಲ ಗುಣೀಜನರು ನಿಮ್ಮ ಸುಲತಾನರ ದರಬಾರಿನಲ್ಲಿ ?

ರಫೀಕ—ಯಾಕೆ? ಸ್ವತಃ ಸುಲತಾನರೆ ; ಅಲ್ಲದೆ ಘನಾನಂದರಿದ್ದಾರೆ.

ನ್ಯಾಮತ—ಘನಾನಂದ ಎಂದರೆ ? ಆ ಮುನಶಿ ಘನಾನಂದನೆ? ಕರಡು ಗೀಚುವ ಗುಮಾಸ್ತ ?

ರಫೀಕ—ಹಾಗೆನ್ನಬೇಡಿರಿ ಮಿಯಾ ; ಅವರೊಬ್ಬರು ಛುಪೇ ರುಸ್ತುಂ. ದರಬಾರಿನಲ್ಲಿ ಮುನಶಿ ಆದರೂ ಮಹಲಿನಲ್ಲಿ ಅವರೊಬ್ಬ ದೊಡ್ಡ ಧ್ರುಪದ ಗಾಯಕರು.

ನ್ಯಾಮತ—ಏನು ಅವರು ಧ್ರುಪದಿಯಾನೆ ? ಹಾಗಾದರೆ ಬರುತ್ತೇನೆ. ನನ್ನ ಖಯಾಲ ಗಾಯನವನ್ನು ಅವರು ಕೇಳಲಿ.

ರಫೀಕ—ಹಾಗಾದರೆ ಬನ್ನಿ.

ನ್ಯಾಮಕ—ಆದರೆ ನನಗೆ ದರಬಾರಿನಲ್ಲಿ ಪ್ರವೇಶ ಸಿಗುವ ಬಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಫೀಕ—ಅದರ ಚಿಂತೆ ನಿಮಗೇಕೆ? ಅಲ್ಲಿ ನಮ್ಮ ಮಾಲಿಕ ಸರದಾರ ಅನೀಜ ಖಾನರಿರುತ್ತಾರೆ. ಅವರೊಂದಿಗೆ ಮುಲಾಕಾತ್ ಮಾಡಿಸುತ್ತೇನೆ.

ನ್ಯಾಮತ—ಹಾಗಿದ್ದರೀಗ ನೇರವಾಗಿ ದರಬಾರಿಗೇ ಹೋಗೋಣವೇ?

ರಫೀಕ—ಜೀ ಹಾಂ.

ನ್ಯಾಮತ—ಬಹುಶಃ ಅಲ್ಲೀಗ ಜುಗ ಜುಗ ಜೀಯೋಳ ನಾಚ ನಡೆದಿರಬೇಕು.

ರಫೀಕ—(ನಗುತ್ತ) ಅಲ್ಲ, ಅವಳ ಹೆಸರು ಕೋಕಿಜೀಯೊ.

(ಕೂಡಲೇ ಹಿನ್ನೆಲೆಯಲ್ಲಿ ಪಖಾವಜ ಪ್ರಧಾನವಾದ ವಾದ್ಯ ಸಂಗೀತ ಆರಂಭವಾಗುತ್ತದೆ. ಅದರೊಂದಿಗೆ ಕಥಕ್ ನೃತ್ಯದ ಗೆಜ್ಜೆಯ ಹೆಜ್ಜೆಗಳ ಲಯವಿನ್ಯಾಸವು ಕೇಳಿಬರತೊಡಗುತ್ತಿದ್ದಂತೆ ರಂಗದ ದೀಪಗಳು ಆರುವುವು. ರಫೀಕ ಸದಾರಂಗರು ನಿರ್ಗಮಿಸುವರು. ರಸ್ತೆಯ ತೆರೆ ಮೇಲೆದ್ದು ರಂಗದ ಮೇಲೆ ಬೆಳಕಾದಾಗ—

ದೃಶ್ಯ ೪

ಮಹಮ್ಮದ ಶಾಹನ ದರಬಾರು.

ಸಿಂಹಾಸನದಮೇಲೆ ಸುಲತಾನ ಕುಳಿತಿದ್ದಾನೆ.. ಅವನೆದುರಿಗೆ ನರ್ತಿಸುತ್ತಿರುವ ಕೋಕಿಜೀಯೊ ಜೋಲಿನ ಮುಕ್ತಾಯದೊಂದಿಗೆ ಒಂದು ಭಂಗಿಯಲ್ಲಿ ನಿಂತು ನೃತ್ಯವನ್ನು ಮುಗಿಸುತ್ತಾಳೆ. ದರಬಾರಿನಲ್ಲಿ ಖಾನ ಆಮಿರರಾರೂ ಪ್ರೇಕ್ಷಕರಿಗೆ ಕಾಣುವಂತಿಲ್ಲ. ರಂಗದ ಒಂದು ಪಾರ್ಶ್ವದೊಳಗೆ ಅವರೆಲ್ಲ ಇರುವರೆಂದು ಕಲ್ಪಿಸಿಕೊಳ್ಳಬಹುದು. ನೃತ್ಯ ಮುಗಿದ ಒಡನೆ ಸುಲತಾನನೊಂದಿಗೆ ದನಿಗೂಡಿಸಿ ಅವರೆಲ್ಲ ವಾಹವಾ, ಸುಭಾನಲ್ಲಾಹ, ಜೀಯೋ ಕೋಕಿಜೀಯೊ ಇತ್ಯಾದಿ ಉದ್ಗಾರಗಳಿಂದ ತಮ್ಮ ಮೆಚ್ಚುಗೆ ಸೂಚಿಸುತ್ತಾರೆ. ಕೋಕಿಜೀಯೊ ಸುಲತಾನರಿಗೂ ಸರದಾರ ಆಮಿರರಿಗೂ ನಮ್ರಳಾಗಿ ಮುಜುರೆ ಮಾಡುತ್ತಾಳೆ.)

ಮಹಮ್ಮದಶಾಹ—ಶಾಬಾಶ್ ಕೋಕಿಜೀಯೋ ಶಾಬಾಶ್; ತೆಗೆದುಕೋ ಈ ಮುತ್ತಿನ ಹಾರವನ್ನು. (ತನ್ನ ಕೊರಳೊಳಗಿನ ಹಾರವನ್ನು ತೆಗೆದು ನೀಡುತ್ತಾನೆ. ಕೋಕಿಜೀಯೋ ಸ್ವೀಕರಿಸಿ ಸಲಾಂ ಮಾಡಿ ಹಿಂದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಿಯುತ್ತಾಳೆ) ಬಾ ಹೀಗೆ ಬುಲ್ ಬುಲ್, ಸುರಾಹಿಯಿಂದ ಮಧುವನ್ನು ಬಗ್ಗಿಸಿ ಮೃದು ಮಧುರವಾದ ನಿನ್ನ ಕೈಗಳಿಂದಲೇ ಈ ಸುಲತಾನ ಮಹಮ್ಮದಶಾಹನಿಗೆ ಕುಡಿಸು. (ಕೊಕಿಜೀಯೋ ಹಾಗೆ ಮಾಡುತ್ತಾಳೆ. ಸುಲತಾನ ಬಟ್ಟಲಿನ ಮದ್ಯವನ್ನು ಹೀರುತ್ತಾನೆ) ವಾಹ ವಾಹ ; ನೀನು ಕೈಮುಟ್ಟಿ ಕುಡಿಸುವದಾದರೆ ಸುರೆಯೇ ಬೇಕೆಂದೇನೂ ಇಲ್ಲ, ನೀರನ್ನು ಕೊಟ್ಟರೂ ಅಮಲೇರುವುದು. ಹೋಗಿನ್ನು, ಜನಾನ ಖಾನೆಯಲ್ಲಿ ವಿಶ್ರಮಿಸಿಕೋ. (ಕೊಕೀಜೀಯೊ ಹೊರಡಬೇಕೆನ್ನುತ್ತಿರುವಷ್ಟರಲ್ಲಿ) ನಿನಗೆ ಇನ್ನು ಮೇಲೆ ಸಂಗೀತ ಕಲಿಸುವುದು ನಿಮ್ಮ ಹಳೆಯ ಉಸ್ತಾದರಿಗೆ ಸಾಧ್ಯವಾಗಲಿಕ್ಕಿಲ್ಲವೆಂದು ಕಾಣುತ್ತದೆ. ನನ್ನ ಬಂಡವಲ ತೀರಿತೆಂದು ಅವರೇ ಹೇಳಿದರು. ಆದ್ದರಿಂದ ನಿನಗೋಸ್ಕರ ನಮ್ಮ ದರಬಾರಿಗೆ ನ್ಯಾಮತಖಾನ ಸದಾರಂಗರನ್ನು ಕರೆಸುವ ಇರಾದೆಯಲ್ಲಿದ್ದೇವೆ. (ಸರದಾರರು ಕುಳಿತಿರಬಹುದಾದ ಪಕ್ಕದತ್ತ ತಿರುಗಿ) ಅನೀಜಖಾನ ! (ಅನೀಜ ಪ್ರವೇಶಿಸಿ ಸುಲತಾನನಿಗೆ ಸಲಾಂ ಮಾಡುತ್ತಾನೆ)

ಅನೀಜ—ಹುಕ್ಮ ಕೀಜಿಯೇ ಆಲಂಪನಾಹ.

ಮಹಮ್ಮದ—ನ್ಯಾಮತ ಖಾನರನ್ನು ಕರೆತರಬೇಕೆಂದು ನಿನಗೆ ಹುಕುಂ ಮಾಡಿರಲಿಲ್ಲವೇ ?

ಅನೀಜ—ಜೀ ಹುಜೂರ. ನನಗೆ ಅಸಾಧ್ಯವಾಗಬಹುದಾದುದನ್ನು ನನ್ನ ಸೇವಕ ರಫೀಕ ಉಪಾಯವಾಗಿ ಸಾಧಿಸಿ ದರಬಾರಿಗೇ ಅವರನ್ನು ಕರೆದು ಕೊಂಡು ಬಂದಿದ್ದಾನೆ.

ಮಹಮ್ಮದ—ಮಾಶಾ ಅಲ್ಲಾಹ ! ಅವರನ್ನು ಕೂಡಲೇ ಬರಮಾಡು.

ಅನೀಜ—ಜೋ ಹುಕ್ಮ. (ಒಳಗೆ ಹೋಗಿ ಸದಾರಂಗನನ್ನು ಕರೆತರುತ್ತಾನೆ. ಅವನು ಬಂದು ಸುಲತಾನನಿಗೆ ಸಲಾಂ ಮಾಡಿ ನಿಲ್ಲುತ್ತಾನೆ ; ಅನೀಜ ನಿರ್ಗಮಿಸುತ್ತಾನೆ.)

ಮಹಮ್ಮದ—ನ್ಯಾಮತಖಾನ !

ನ್ಯಾಮತ—ಜಹಾಪನಾಹ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಮ್ಮದ—ನಮ್ಮ ಪೂರ್ವಿಕರಾದ ಅಕಬರ ಬಾದಶಾಹರ ದರಬಾರಿನಲ್ಲಿ ನಿಮ್ಮ ನಾನಾಸಾಹೆಬ ತಾನಸೇನ ಆಸ್ಥಾನ ವಿದ್ವಾಂಸರಾಗಿದ್ದರು. ಈಗ ಈ ಸುಲತಾನ ಮಹಮ್ಮದಶಾಹನ ದರಬಾರು ಕೂಡ ಅದೇ ಉನ್ನತ ಮಟ್ಟವನ್ನು ಮುಟ್ಟಬೇಕೆಂಬುದು ನಮ್ಮ ಇರಾದೆ. ಅದಕ್ಕಾಗಿ ನೀವಿನ್ನು ದಿಲ್ಲಿಯಲ್ಲಿಯೇ ಉಳಿದು ನಮ್ಮ ದರಬಾರ ಗಾಯಕರಾಗ ಬೇಕೆಂದು ಹುಕ್ಮ ಮಾಡುತ್ತೇವೆ. ನಿಮ್ಮನ್ನು ಇಲ್ಲಿಗೆ ಕರೆತರಲು ದಿನ ನಿತ್ಯ ಅಂಬಾರಿ ಹೊತ್ತ ಆನೆಯನ್ನು ಕಳಿಸುತ್ತೇವೆ.

ನ್ಯಾಮತ—ಮಾಫಿ ಇರಲಿ ಜಹಾಪನಾಹ. ನಾನೊಬ್ಬ ಫಕೀರ. ನನಗೇಕೆ ನಿಮ್ಮ ದರಬಾರಿನ ರಾಜವೈಭವ? ಸಂತ ನಿಜಾಮುದ್ದೀನ ಚಿಸ್ತಿಯ ದರಗಾಹ ಬಿಟ್ಟು ನಿಮ್ಮ ದರಬಾರಿನಲ್ಲಿ ನೆಲೆ ನಿಲ್ಲಲು ಸಾಧ್ಯವಿಲ್ಲ. ಆದರೂ ಔರಂಗಜೇಬ ಬಾದಶಾಹರ ಮರಿಮಕ್ಕಳಾದ ನೀವು ಸಂಗೀತ ಪ್ರೇಮಿಯಾಗಿರುವುದೇ ಒಂದು ಸಂತೋಷದ ಸಂಗತಿ. ಅದಕ್ಕಾಗಿ ಆಗಾಗ ನಿಮ್ಮ ದರಬಾರಿಗೆ ಬಂದು ಹಾಡಿ ಹೋಗುತ್ತೇನೆ. ಇದಕ್ಕಿಂತ ಹೆಚ್ಚಿಗೇನನ್ನೂ ಸುಲತಾನರು ಹುಕ್ಮ ಮಾಡಬಾರದೆಂದು ನನ್ನ ಅರಜಿ.

ಮಹಮ್ಮದ—ಆದರೆ ನ್ಯಾಮತ, ನಮ್ಮ ದರಬಾರಿನ ಕಲಾವೈಭವವನ್ನು ಅಕಬರ ಬಾದಶಾಹರ ಕಾಲದ ಮಟ್ಟಕ್ಕೆ ಒಯ್ಯಬೇಕೆಂಬ ನಮ್ಮ ಇಚ್ಛೆ?

ನ್ಯಾಮತ—ಜಹಾಪನಾಹ, ಆ ದರಬಾರೆಲ್ಲಿ, ಇದೆಲ್ಲಿ! ನಮ್ಮ ಪೂಜ್ಯ ಪಿತಾ ಮಹರಾದ ತಾನಸೇನರ ಧ್ರುಪದ ಗಾಯನದಿಂದಾಗಿ ಎಲ್ಲೆಲ್ಲಿಯೂ ದೈವ ಭಕ್ತಿ ರಾಜಭಕ್ತಿ ಹೊಳೆಯಾಗಿ ಹರಿಯುತ್ತಿದ್ದುವು. ಕಲಾರಸಿಕರಾದ ಅಕಬರ ಬಾದಶಾಹರು ಸಂಗೀತವನ್ನು ಒಂದು ಕಲೆಯಾಗಿ ಪೋಷಿಸಿದ್ದರು, ನೀವದನ್ನು ಒಂದು ವಿಲಾಸಸಾಧನವಾಗಿ ಬಳಸುತ್ತಿದ್ದೀರಿ. ನಿಮ್ಮಂತೆ ನಿಮ್ಮ ಪ್ರಜೆಗಳು. ಬೀದಿ ಬೀದಿಗಳಲ್ಲಿ ಕುಡಿತ ಕುಣಿತಗಳ ದೃಶ್ಯಗಳು ಕಾಣುತ್ತಿವೆ. ಕೀಳು ಮಟ್ಟದ ಹೊಲಸು ಶೃಂಗಾರದ ಕವಿತೆಗಳೇ ಎಲ್ಲೆಲ್ಲಿಯೂ ಕಿವಿಗೆ ಬೀಳುತ್ತಿವೆ. ಹೀಗಾಗಿ ಅಪರೂಪಕ್ಕಾಗಿಯಾದರೂ ದೆಹಲಿ ನಗರವನ್ನು ಪ್ರವೇಶಿಸಲು ನನ್ನ ಮನಸ್ಸು ಹಿಂಜರಿಯುತ್ತಿದೆ. ಹೀಗಿರುವಾಗ ದರಬಾರ ಗಾಯಕನಾಗಿ ಜನಾನಖಾನೆಯ ನಿಮ್ಮ ಪ್ರೇಯಸಿಯರಿಗೆ ಸಂಗೀತ ಹೇಳಿಕೊಡುವ ಕೆಲಸ ನನ್ನಿಂದ ಸಾಧ್ಯವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಮ್ಮದ—ಶಾಬಾಶ್ ನ್ಯಾಮತಖಾನ, ಶಾಬಾಶ್. ನಿನ್ನ ಸ್ವಾಭಿಮಾನಕ್ಕೆ ಶಾಬಾಶ್. ಆದರೆ ಯೋಚಿಸು ಸದಾರಂಗ. ನೀನೀಗ ಹೇಳಿದಂತೆ ಜನ ಸಾಮಾನ್ಯರೆಲ್ಲ ಕೇಳು ಶೃಂಗಾರದ – ಶೃಂಗಾರದಲ್ಲಿ ಕೇಳೆಂಬುದೇನು ಬಂತು – ಶೃಂಗಾರದ ಹಾಡುಗಳಲ್ಲಿ ನಿರತರಾಗಿದ್ದಾರೆ. ಅವರಾರಿಗೂ ನಿನ್ನ ಶ್ರೇಷ್ಠ ಮಟ್ಟದ ಶೃಂಗಾರಭಕ್ತಿಯ ಧ್ರುಪದ, ಖಯಾಲ ಗಾಯನ ಬೇಡ. ಹಾಗಾದರೆ ನಿನ್ನ ಘರಾಣೆಯ ಸಂಗೀತ – ಸ್ವಾಮಿ ಹರಿದಾಸ ರಿಂದ ತಾನಸೇನರಿಗೆ, ಅವರಿಂದ ತಲೆತಲಾಂತರವಾಗಿ ನಿನಗೆ ಬಂದಿರುವ ಸಂಗೀತ–ನಿನ್ನೊಂದಿಗೆ ಯಾವುದಾದರೊಂದು ದರಗಾದಲ್ಲಿ ಸಮಾಧಿ ಹೊಂದಬೇಕೆ ?

ನ್ಯಾಮತ—ಚಿಂತೆಯಿಲ್ಲ ; ಪರ್ಶಿಯಾ ದೇಶದ ಸುರೆಯನ್ನು ಸುರಿದುಕೊಂಡಿದ್ದರೂ ಸುಲತಾನರು ಇನ್ನೂ ಸತರ್ಕವಾಗಿಯೇ ಮಾತನಾಡುತ್ತಿದ್ದೀರಿ.

ಮಹಮ್ಮದ—(ನಗುತ್ತ) ಫಕೀರನಾದ ನಿನಗೆ ಸುರೆಯ ಸೊಗಸೇನು ಗೊತ್ತು ಸದಾರಂಗ ! (ಗಂಭೀರನಾಗಿ) ನನ್ನ ಮಾತು ಕೇಳು. ನನ್ನ ಜನಾನಾಕ್ಕೆ ಸಂಗೀತ ಹೇಳಿಕೊಡು. ನ್ಯಾಮತಖಾನ ಸದಾರಂಗನ ಹೆಸರು ಅವರ ಮುಖೇನ ಶಾಶ್ವತವಾಗಿ ಉಳಿಯಲಿ. ಅದರೊಂದಿಗೆ ಈ ಸುಲತಾನ ಮಹಮ್ಮದಶಾಹನ ಹೆಸರು ಕೂಡಾ.

ನ್ಯಾಮತ—ನಿಮ್ಮ ಹೆಸರು, ನನ್ನಿಂದಾಗಿ ಶಾಶ್ವತವಾಗುವುದೇ ಜಹಾಪನಾಹ ?.

ಮಹಮ್ಮದ—(ಸಿಂಹಾಸನದಿಂದಿಳಿದು ಬಂದು ಸದಾರಂಗನ ಹೆಗಲ ಮೇಲೆ ಕೈ ಹಾಕಿ ಕರೆದುಕೊಂಡು ಮುಂದಕ್ಕೆ ಬರುತ್ತಾನೆ) ನನ್ನ ಹೆಸರು ತನ್ನಿಂದ ತಾನೇ ಶಾಶ್ವತವಾಗುಳಿಯುವುದು ಸದಾರಂಗ....ಒಂದು ಅರ್ಥದಲ್ಲಿ.... ಕುಡುಕನೆಂದು, ದುಂದುಗಾರನೆಂದು, ಕಾಮುಕ, ವ್ಯಭಿಚಾರಿಯೆಂದು.... ಆದರೆ (ವ್ಯಸನದಿಂದ) ನಾನು ಯಾಕೆ ಹೀಗಾದೆ ? ಯಾಕೆ ಸದಾರಂಗ, ಯಾಕೆ ಈ ಮಟ್ಟಕ್ಕಿಳಿದೆ ನಾನು ?

ನ್ಯಾಮತ—ಏರಿದವ ಇಳಿಯುತ್ತಾನೆ, ಇಳಿದವ ಏರುತ್ತಾನೆ. ಸಂನ್ಯಾಸಿ ಸಂಗೀತಗಾರನಿಗೆ ಹೊಳೆಯುವುದಿಷ್ಟೆ ಸುಲತಾನರೆ. ಸ್ವರ ಸಾಧನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡುವಾಗ ನಾನು ಮಂದ್ರ ಸಪ್ತಕದಲ್ಲಿ ಕೆಳಗಿಳಿದಷ್ಟೂ ನನ್ನ ಧ್ವನಿ ತಾರ ಸಪ್ತಕದಲ್ಲಿ ಮೇಲಿನ ಸ್ವರಗಳ ಮಟ್ಟಕ್ಕೇರುತ್ತದೆ. ನೀವು ಹಿಂದು ಸ್ಥಾನದ ಬಾದಶಾಹರಾಗಿ ದೆಹಲಿಯ ತಖ್ತೆ ತಾವೂಸವನ್ನೇರಿದಿರಿ. ಆ ಮಯೂರ ಸಿಂಹಾಸನದ ಎತ್ತರವೇ ನಿಮ್ಮನ್ನು ನೈತಿಕ ಮಟ್ಟದಲ್ಲಿ ಕೆಳ ಗಿಳಿಸಿದ್ದು. ಅಶಾಶ್ವತವಾದ ಐಹಿಕ ಐಶ್ವರ್ಯವನ್ನು ನೆಚ್ಚಿಕೊಂಡವರ ಅವಸ್ಥೆಯೆಲ್ಲ ಹೀಗೆಯೇ ಸುಲತಾನರೆ !

ಮುಹಮ್ಮದ—ನಿನ್ನ ಮಾತು ನಿಜವಾದರೂ ಎಲ್ಲರಿಗೂ ಅನ್ವಯಿಸುವುದಿಲ್ಲ ಸದಾರಂಗ. ನಮ್ಮ ಪೂರ್ವಜರಾದ ಅಕಬರ, ಶಹಾಜಹಾನ, ಔರಂಗ ಜೇಬ ಬಾದಶಹರು ದೆಹಲಿಯನ್ನಾಳಲಿಲ್ಲವೆ? ಅವರೇಕೆ ನನ್ನಂತಾಗ ಲಿಲ್ಲ ?

ನ್ಯಾಮತ—(ತಿಳಿಯದೆ) ಏಕೆ ?

ಮುಹಮ್ಮದ—ಅವರ ಐಶ್ವರ್ಯ ನನ್ನದರಷ್ಟು ಅಶಾಶ್ವತವಾಗಿ ಇರಲಿಲ್ಲ.... (ನೆನೆದುಕೊಳ್ಳುತ್ತ) ಅವರೆಲ್ಲ ಸಿಂಹಾಸನದ ಉತ್ತರಾಧಿಕಾರಿಗಳಾಗಿ ಹಕ್ಕು ದಾರರಾಗಿಬಂದವರು. ಆದರೆ ನಾನು ? ಔರಂಗಜೇಬರ ಮರಿಮಗ ನಾದರೂ ಹಕ್ಕುದಾರನಾಗಿರದೆ ದೂರದಲ್ಲೆಲ್ಲೋ ಅಜ್ಞಾತವಾಸದಲ್ಲಿ ಕೊಳೆಯುತ್ತಿದ್ದವ. ದಿಲ್ಲಿ ಅರಾಜಕವಾಗಿ ಸಯ್ಯದ ಬಂಧುಗಳ ಕೈಯಲ್ಲಿ ಅಧಿಕಾರ ಸಿಕ್ಕ ಆ ಸಮಯದಲ್ಲಿ ಹೆಸರಿಗೆ ಮಾತ್ರ ಸುಲತಾನನಾಗಿ ಅವರು ಕುಣಿಸಿದಂತೆ ಕುಣಿಯುವ ಬೊಂಬೆಯೊಂದು ಬೇಕಾಗಿತ್ತವರಿಗೆ. ಆದಕ್ಕಾಗಿ ನನ್ನನ್ನು ಹುಡುಕಿ ಹಿಡಿದುಕೊಂಡು ಬಂದರು. ಅಧಿಕಾರ ವಿಲ್ಲದೆ ಅಧಿಕಾರಿಯಾಗಿರುವುದು ಬಹು ಕಷ್ಟ ನ್ಯಾಮತಖಾನ; ಅದಕ್ಕಿಂತ ಕುದುರೆಯ ಕಾಸ್ತಾರನಾಗಿರುವುದು ಪರಮ ಸುಖ. ನಾನೊಬ್ಬ ಬಾದಶಾಹ. ಆದರೆ ಎಂತಹ ಬಾದಶಾಹ ? ಸಯ್ಯದ ಬಂಧುಗಳು ಆಡುವ ಚದುರಂಗದಾಟದ ಬಾದಶಾಹ....ನನ್ನ ಕೈಯಲ್ಲೇ ನಿದೆ ! ರಾಜ್ಯದಾಡಳಿತಕ್ಕೆ ಸಂಬಂಧಿಸಿದ ವಿಚಾರವೊಂದೂ ನನ್ನ ವರೆಗೆ ಬರುವುದೇ ಇಲ್ಲ. ದುಂದು ವೆಚ್ಚಕ್ಕೆ ಬೇಕಾದಷ್ಟು ಹಣ ಖರ್ಚು ಮಾಡುವುದಕ್ಕೆ ನನಗೆ ಅಧಿಕಾರ ಕೊಟ್ಟಿದ್ದಾರೆ. ಪರಾಬಿಗೆ, ನಾಚ ಗಾನಾ

CC-O. In Public Domain. Sri Vidyabharathi Book Centre, Shringeri

CC-O. In Public Domain. Digitized by eGangotri

ಬಜಾನಾಗಳಿಗೆ ನಾನೆಷ್ಟು ಹಣ ಸುರಿದರೂ ಕೇಳುವವರಿಲ್ಲ. ರಾತ್ರಿ ನಾನು ಎದ್ದು ನಡೆಯಲು ಕೂಡ ಸಾಧ್ಯವಾಗದಷ್ಟರ ಮಟ್ಟಿಗೆ ಕುಡಿದು ಕುಸಿದಾಗ ದಾಸಿಯರಿಬ್ಬರು ನನ್ನ ರಟ್ಟೆಗಳನ್ನು ಹಿಡಿದು ಕರೆದುಕೊಂಡು ಹೋಗಿ ಶಯನಾಗಾರಕ್ಕೆ ತಲುಪಿಸುತ್ತಾರೆ. ಆಗ ಅವರಿಬ್ಬರಿಗೂ ಕೈತುಂಬ ಮುತ್ತುರತ್ನಗಳ ಆಭರಣಗಳನ್ನು ತೆಗೆದುಕೊಡುತ್ತೇನೆ.

ನ್ಯಾಮತ—ಆ ಸ್ಥಿತಿಯಲ್ಲಿ ಜನಾನಖಾನೆಯಲ್ಲಿ ಯಾವ ಕೋಣೆಗೆ ಹೋಗ ಬೇಕೆಂಬುದನ್ನು ದಾಸಿಯರೇ ನಿರ್ಧರಿಸಬೇಕೇನೋ ?

ಮಹಮ್ಮದ—(ಅರ್ಥಗರ್ಭಿತವಾಗಿ ನೋಡಿ) ಚಿಂತೆಯಿಲ್ಲ. ಫಕೀರರು ರಸಿಕರು! ಎಷ್ಟೆಂದರೂ ಸಂಗೀತಗಾರರಲ್ಲವೆ; ಸದಾರಂಗ – ಎಂದ ಮೇಲೆ —

ನ್ಯಾಮತ—(ಗಲ್ಲಗಳನ್ನು ಬಡಿದುಕೊಳ್ಳುತ್ತ) ತೋಬಾ ತೋಬಾ! ಸುಲತಾನರು ಮಾಫ ಮಾಡಬೇಕು. ಏನೋ ಮಸ್ಖರೀ ಮಾಡಿದೆ. ನಾನು ಹೆಸರಿಗೆ ಮಾತ್ರ ಸದಾರಂಗ; ಆದರೆ ನೀವು ಆಚರಣೆಯಲ್ಲಿ ಕೂಡಾ ಸದಾರಂಗೀಲೇ ಪಿಯಾ!

ಮಹಮ್ಮದ—(ಹುಸಿ ಗಾಂಭೀರ್ಯದಿಂದ) ನ್ಯಾಮತ ಖಾನ, ಹಿಂದೂಗಳಲ್ಲಿ ಏಕಪತ್ನೀವ್ರತ ಎಂದು ಹೇಳುತ್ತಾರೆ ಗೊತ್ತೇನು ?

ನ್ಯಾಮತ—ಹಾಂ ?

ಮಹಮ್ಮದ—ನಾನು ಏಕಪತ್ನೀವ್ರತಸ್ಥ !

ನ್ಯಾಮತ—ಏನು ? ಜನಾನಖಾನೆಯಲ್ಲಿ ನೂರಾರು ಜನ ಸ್ತ್ರೀಯರನ್ನಿಟ್ಟುಕೊಂಡು—

ಮಹಮ್ಮದ—ನೂರಾರಲ್ಲ ಸದಾರಂಗ, ಸಾವಿರಾರು !

ನ್ಯಾಮತ—ಆದರೂ ನೀವು ಏಕಪತ್ನೀವ್ರತಸ್ಥರು !

ಮಹಮ್ಮದ—ಹೌದು. ಒಂದು ದಿನಕ್ಕೆ ಒಬ್ಬಳೇ ! (ಸದಾರಂಗ ನಗತೊಡಗುತ್ತಾನೆ, ಅವನೊಂದಿಗೆ ಸೇರಿ ಸುಲತಾನನೂ ನಗುತ್ತಾನೆ; ಅನಂತರ ಖಿನ್ನನಾಗಿ ನಿಲ್ಲುತ್ತಾನೆ) ಸಂತೋಷದಲ್ಲಿ ಎಲ್ಲರೂ ನಗುತ್ತಾರೆ ಸದಾರಂಗ.

SRI Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ನೋವಿನಲ್ಲಿಯೂ ನಕ್ಕೆ ನಾನು. ಆದ್ದರಿಂದ ನೀನು ಫಕೀರ ನಾದರೆ ನಾನು ಸಂತ, ವಲಿ!

ನ್ಯಾಮತ—(ಮರುಕದಿಂದ) ಒಪ್ಪಿಕೊಳ್ಳುತ್ತೀನೆ ಜಹಾಂಪನಾಹ.

ಮಹಮ್ಮದ—ಜಹಾಂಪನಾಹ! ಈ ಬಿರುದು ನನಗೆಲ್ಲಿಯವರೆಗೆ? ಸಯ್ಯದ ಬಂಧುಗಳ ಮನಸ್ಸಿದಲ್ಲಿ ಬೇರೊಬ್ಬನನ್ನು ಸಿಂಹಾಸನಕ್ಕೆ ತರಬೇಕೆಂಬ ಬಯಕೆ ಮೂಡುವ ವರೆಗೆ; ಇಲ್ಲವೆ, ಆವರ ಆಡಳಿತದಲ್ಲಿ ಸೈನ್ಯ ವ್ಯವಸ್ಥೆ ಅಸ್ತವ್ಯಸ್ತಗೊಂಡಿರುವಾಗ ಈ ಹಿಂದೂಸ್ತಾನದ ಮೇಲೆ ಹೊರಗಿನವರು ದಾಳಿ ಮಾಡುವ ವರೆಗೆ. ಆಂತರಿಕ ಶತ್ರುಗಳು ಗುಟ್ಟಾಗಿ ಪರ್ಶಿಯಾದ ನಾದಿರಶಾಹನಿಗೆ ಪತ್ರ ಬರೆಯುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಆದರೆ ಆವರನ್ನೆಲ್ಲ ಹಿಡಿತರಿಸಿ ಕಾಯ್ದೆಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿಸುವ ಅಧಿಕಾರವಿದೆಯೆ ನನಗೆ? ಇಲ್ಲ ಸದಾರಂಗ, ಇಲ್ಲ. ಅದಕ್ಕಾಗಿ ನನ್ನನ್ನು ನಾನು ಶರಾಬಿನಲ್ಲಿ ಮುಳುಗಿಸಿಕೊಳ್ಳುತ್ತಿದ್ದೇನೆ.... ನಾನೊಬ್ಬ ಅಜ್ಞಾತ ವ್ಯಕ್ತಿಯಾಗಿದ್ದೆ. ಹಾಗೆಯೇ ಸತ್ತುಹೋಗಿದ್ದರೆ ಯಾರಿಗೂ ಏನೂ ಎನ್ನಿಸುತ್ತಿರಲಿಲ್ಲ. ಆದರೆ ಸುಲತಾನನಾಗಿ ಏನೊಂದೂ ಒಳ್ಳೆಯದನ್ನು ಮಾಡದೆ ಕ್ಷುಲ್ಲಕನಾಗಿ ಸಾಯುವ ಇಚ್ಛೆ ನನಗಿಲ್ಲ. ಆದ್ದರಿಂದ ನಿನ್ನ ಸಂಗೀತದ ಮೂಲಕ ನಾನು ಅಮರನಾಗಬೇಕೆಂದಿದ್ದೇನೆ. ಈ ಬಡವನ ಇದೊಂದಾಸೆಯನ್ನು ಈಡೇರಿಸಿಕೊಡು ಸದಾರಂಗ. ಕೈಯ್ಯೊಡ್ಡಿ ಬೇಡಿಕೊಳ್ಳುತ್ತಿದ್ದೇನೆ. ನಿನ್ನ ಚೀಜುಗಳಲ್ಲಿ ನನ್ನ ಹೆಸರನ್ನೂ ಸೇರಿಸಿ ನಿನಗೆ ಆಶ್ರಯದಾತನಾದ ಸುಲತಾನನೆಂಬ ಅಮರ ಪದವಿಯನ್ನು ನನಗೆ ದಯಪಾಲಿಸು. ನನ್ನ ರಾಜ್ಯ, ಕೋಶ, ನಾಳೆಯೇ ಹಾಳಾದರೂ ನನಗೆ ಚಿಂತೆಯಿಲ್ಲ.

ನ್ಯಾಮತ—ಸುಲತಾನರು ಇಷ್ಟು ದೀನರಾಗಿ ನನ್ನನ್ನು ಬೇಡಬಾರದು. ಆಗಲಿ; ನಿಮ್ಮ ದರಬಾರಿನ ಗವಯ್ಯಾ ಆಗಿ ನೌಕರಿಗೆ ನಿಲ್ಲುವುದು ಸಾಧ್ಯವಾಗದಿದ್ದರೂ ಮೊದಲೇ ಮಾತುಕೊಟ್ಟಂತೆ ಆಗಾಗ ಬಂದು ನಿಮಗೆ ನನ್ನ ಗಾಯನ ಕೇಳಿಸುತ್ತೀನೆ. ನಿಮ್ಮ—ನನ್ನ ಹೆಸರುಗಳನ್ನಳವಡಿಸಿದ ಚೀಜುಗಳನ್ನು ಹಾಡುತ್ತೀನೆ. ಅವನ್ನು ಕೇಳಿ ಬೇಕಾದರೆ ನಿಮ್ಮ ಜನಾನಾದವರು ಕಲಿತುಕೊಳ್ಳಲಿ.

CC-O. Vidyabharathi Book Centre, Sringeri

CC-O. In Public Domain. Digitized by eGangotri

ಮಹಮ್ಮದ—(ಮುಜುರೆ ಮಾಡುತ್ತ) ಬಡೀ ಮೆಹರಬಾನೀ ! ಅಂತಹದೊಂದು ಕೃತಿಯನ್ನು ಈಗಲೇ ರಚನೆ ಮಾಡಿ ನಮ್ಮ ದರಬಾರನ್ನು ಖುಶಿಪಡಿಸ ಬಹುದಲ್ಲ ?

ನ್ಯಾಮತ—(ಗಂಭೀರನಾಗಿ) ಅಚ್ಛೇ ಬಾತ.

ಮಹಮ್ಮದ—(ಸಡಗರದಿಂದ ಹೋಗಿ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತ) ಪ್ಯಾರೀ ಕೋಕಿಜೀಯೋ, ತಂಬೂರಿ ತೆಗೆದುಕೋ. ನಿಮ್ಮ ಉಸ್ತಾದರ ಗಾಯನವನ್ನು ಗಮನವಿಟ್ಟು ಕೇಳಿ ಮನನ ಮಾಡಿಕೋ. ತಶರೀಫ್ ಲಾಯಿಯೇ ಸದಾರಂಗಜೀ.

(ಸದಾರಂಗ ಬಂದು ಕುಳ್ಳಿರುತ್ತಾನೆ. ಅವನ ಪಕ್ಕದಲ್ಲಿ ಕುಳಿತು ಕೊಕಿಜೀಯೋ ತಂಬೂರಿ ನುಡಿಸುತ್ತಾಳೆ)

ನ್ಯಾಮತ—(ಹಾಡುತ್ತಾನೆ : ಖಯಾಲ ಕಾಮೋದ ; ತೀನತಾಲ)

ಕಾರೇ ಜಾನೇ ನ ದೂಂಗಿ ಏರೀ ಮಾಯಿ
ಅಪನೇ ಬಾಲಮಕೋ ನೈನನಮೇ ಕರ
ರಾಖೀ ಪಲಕನ ವೌಂದ ವೌಂದ ॥ ಕಾರೇ ॥
ಚಮಕ ಬೀಜರೀ ಮೇಹಾ ಬರಸೇ
ಸದಾರಂಗೀಲೇ ಮಹಮದಶಾ
ಮೇಹಾ ಬರಸೇ ಬೂಂದ ಬೂಂದ ॥ ಕಾರೇ ॥

(ಸದಾರಂಗನ ಗಾಯನ ಮುಗಿದ ಮೇಲೆ ಸುಲತಾನ ಸ್ವತಃ ಎದ್ದು ಬಂದು ಅವನ ಕೊರಳಿಗೆ ಹೊನ್ನ ಕಂಠಿಕೆಯನ್ನೂ ಕೈಗೆ ರನ್ನಗಡಗವನ್ನೂ ತೊಡಿಸುತ್ತಾನೆ. ಅವನೆದ್ದು ನಿಂತು ಸುಲತಾನರಿಗೆ ಸಲಾಂ ಮಾಡುತ್ತಾನೆ.

ಸುಲತಾನ ಅವನಿಗಿಂತಲೂ ಹೆಚ್ಚು ವಿನಯದಿಂದ ಪ್ರತಿ ಸಲಾಂ ಮಾಡಿ ವಿದಾಯ ಹೇಳಿ ಹೊರಟು ಹೋಗುತ್ತಾನೆ)

ನ್ಯಾಮತ—ಬೇಟಾ ಕೊಕೀಜೀಯೋ ಈ ದರಬಾರಿನ ಮುನಶೀ ಯಾರು ?

ಕೊಕೀಜೀಯೋ—(ಸರದಾರರು ಕುಳಿತಿರಬಹುದಾದ ಪಾರ್ಶ್ವದೊಳಕ್ಕೆ ದೃಷ್ಟಿ ಹಾಯಿಸಿ ಕಾಣಿಗೆ ಕರೆಯುತ್ತಾಳೆ) ಮುನಶೀಜೀ.....ಮುನಶೀಜೀ.....

Sri Vidyabharathi Book Centre, Sringeri

CC-O. In Public Domain. Digitized by eGangotri

(ಘನಾನಂದ ಬರುತ್ತಾನೆ) ನಮ್ಮ ಉಸ್ತಾದರು ನಿಮ್ಮನ್ನು ಕರೆಯುತ್ತಿದ್ದಾರೆ.

ಘನಾನಂದ—(ಹೋಗಿ ಸದಾರಂಗನ ಎರಡೂ ಕೈಗಳನ್ನು ಹಿಡಿದುಕೊಂಡು ಅಭಿನಂದಿಸುತ್ತ) ವಾಹ....ಸದಾರಂಗಜೀ ವಾಹ, ನಿಮ್ಮ ಸಂಗೀತದ ತಾರೀಫ ಮಾಡುವುದು ಕೂಡ ನಮ್ಮ ಯೋಗ್ಯತೆಗೆ ನಿಲುಕದ ಮಾತು.

ನ್ಯಾಮತ—ಮುನಶೀಜಿ, ನೀವು ಬ್ರಾಹ್ಮಣರಲ್ಲವೆ ? ಮುಸಲ್ಮಾನನೊಬ್ಬನಿಂದ ದಾನ ಸ್ವೀಕರಿಸಲು ನಿಮ್ಮ ಧರ್ಮ ಅಡ್ಡಿ ಬರುತ್ತದೆಯೇ ?

ಘನಾನಂದ—ಹಾಗೇನೂ ಇಲ್ಲವಲ್ಲ ; ಆದರೆ....ಈಗ—ಯಾರು—ಯಾರಿಗೆ ....ದಾನ—

ನ್ಯಾಮತ—(ತನ್ನ ಕೈಯ ಕಡಗವನ್ನು ತೆಗೆದು ಅವನ ಕೈಗಿಡುತ್ತ) ಸಂನ್ಯಾಸಿಯೊಬ್ಬ ಸಂಸಾರಿ ಬ್ರಾಹ್ಮಣನಿಗೆ ಸುವರ್ಣದಾನ ಮಾಡುತ್ತಿದ್ದಾನೆ.

ಘನಾನಂದ—(ತನ್ನ ಕೈಗೆ ತೊಡಿಸಿದ ಕಡಗವನ್ನು ತೆಗೆಯಲು ಪ್ರಯತ್ನಿಸುತ್ತಿರಲು ಸದಾರಂಗ ಅವನ ಮುಂಗೈ ಹಿಡಿದು ತಡೆಯುತ್ತಾನೆ) ಇದು ಕೂಡದು ಸದಾರಂಗರೇ, ಸುಲ್ತಾನರು ಶ್ರೇಷ್ಠ ಖಯಾಲ ಗಾಯಕನಿಗೆ ಬಹುಮಾನವಾಗಿ ಕೊಟ್ಟ ತೋಡಾ ಇದು. ಇದನ್ನು ನಾನು ದಾನವಾಗಿ ಪಡೆಯುವುದು ಅನುಚಿತ.

ನ್ಯಾಮತ—ಹಾಗಿದ್ದರೆ ದಾನವಾಗಿ ಬೇಡ; ಒಬ್ಬ ಖಯಾಲ ಗಾಯಕ ಧ್ರುಪದ ಗಾಯಕನೊಬ್ಬನಿಗೆ ಕೊಟ್ಟ ಇನಾಮ್ ಎಂದು ಸ್ವೀಕರಿಸಿರಿ.

ಘನಾನಂದ—ಇಷ್ಟು ದೊಡ್ಡ ಬಹುಮಾನವನ್ನು ಕೊಟ್ಟು ನನ್ನನ್ನು ಲಜ್ಜಿತನನ್ನಾಗಿ ಮಾಡುತ್ತಿದ್ದೀರಿ. ನಾನೆಷ್ಟೆಂದರೂ ಧ್ರುಪದಿಯಾ. ಈ ಕಾಲದಲ್ಲಿ–ಖಯಾಲಿನ ಹೊಸ ನೀರು ಬಂದು ಧ್ರುಪದಿನ ಹಳೆಯ ನೀರನ್ನು ಕೊಚ್ಚಿಕೊಂಡು ಹೋಗುತ್ತಿರುವ ಈ ಕಾಲದಲ್ಲಿ – ನಮ್ಮಂಥವರನ್ನು ಯಾರು ಕೇಳುತ್ತಾರೆ !

ನ್ಯಾಮತ—ಹಾಗೆನ್ನಬೇಡಿರಿ ಘನಾನಂದ....(ಅವನ ಹೆಗಲ ಮೇಲೆ ಕೈಹಾಕಿ ಹಿರಿಯತನದಿಂದ ಪ್ರೋತ್ಸಾಹಿಸುತ್ತ ರಂಗದ ಮುಂಬದಿಗೆ ಕರೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಬರುತ್ತಾನೆ. ಅವರ ಬೆನ್ನ ಹಿಂದೆ ರಂಗದ ಮಧ್ಯದ ತೆರೆಗಳು ಕೂಡಿಕೊಳ್ಳುವವು)

ದೃಶ್ಯ ೫

ನ್ಯಾಯಮತ—ಧ್ರುಪದಿನ ಮಹತ್ತ್ವ ಇಂದೇಕೆ, ಎಂದೆಂದಿಗೂ ಕಡಿಮೆಯಾಗುವುದಿಲ್ಲ, ನೆನಪಿಡಿರಿ. ಏಕೆಂದರೆ ನಮ್ಮ ಖಯಾಲ ಗಾಯನ ನಿಂತಿರುವುದೇ ನಿಮ್ಮ ಧ್ರುಪದಿನ ಆಧಾರದ ಮೇಲೆ.

ಘನಾನಂದ—ಹಾಗೆ ಹೇಳುವುದು ನಿಮ್ಮ ದೊಡ್ಡ ಮನಸ್ಸು. ಧ್ರುಪದಿಗೆ ಅಂತಹ ಮಹತ್ತ್ವವಿದ್ದಿದ್ದರೆ ನನ್ನಂತಹವನಿಗೆ ಮುನಶೀಯಾಗಿ ಉಪ ಜೀವಿಸುವ ಹೊತ್ತು ಬರುತ್ತಿದ್ದಿತೆ?

ನ್ಯಾಯಮತ—ಅದು ಅವರವರ ಅದೃಷ್ಟ; ಅದಕ್ಕೇನು ಮಾಡುವುದು! ಆದರೆ, ಮುನಶೀಯಾದ ಮಾತ್ರಕ್ಕೆ ನಿಮ್ಮ ಗಾಯನದ ಯೋಗ್ಯತೆಯೇನೂ ಕಡಿಮೆಯಾಗಲಿಲ್ಲ. ಅದರ ತಾರೀಫನ್ನು ನಾನು ಅನೇಕರ ಬಾಯಿಂದ ಕೇಳಿದ್ದೇನೆ. ಅಲ್ಲದೆ, ಯಾವುದಕ್ಕೂ ಕಾಲ ಕೂಡಿ ಬರಬೇಕು. ಎಂದಾದರೊಂದು ದಿನ ನೀವೊಬ್ಬರು ದರಬಾರಿನ ಗವಯ್ಯಾ ಆಗಿ ನೇಮಕ ಗೊಳ್ಳಬಹುದು.... (ಈ ಮಾತನ್ನು ಆಡುವ ಹೊತ್ತಿಗೆ ರಸ್ತೆಯ ಒಂದು ಬದಿಯಲ್ಲಿ ಅನೀಜಖಾನ ಪ್ರವೇಶಿಸಿ ಇವರಿಬ್ಬರನ್ನು ಕಂಡು ಅಲ್ಲಿಯೇ ನಿಲ್ಲುತ್ತಾನೆ. ಸದಾರಂಗನ ಮಾತನ್ನು ಕೇಳಿಸಿಕೊಂಡವನೆ ಏನೋ ಹೊಸ ವಿಚಾರ ಹೊಳೆದವನಂತೆ ತಲೆದೂಗಿ ಹಿಂದಕ್ಕೆ ಹೊರಟುಹೋಗುತ್ತಾನೆ)....ನಿಮಗೆ ಈಗಲಾದರೂ ಏನು ಕಡಮೆಯಾಗಿದೆ? ಶ್ರೇಷ್ಠ ಸಂಗೀತಗಾರರಲ್ಲದೆ ನೀವು ಉದ್ದಾಮ ಕವಿಗಳೆಂದೂ ಕೇಳಿದ್ದೇನೆ. ನಿಮ್ಮ ಕಬಿತ್ತ ದೋಹಾಗಳೊಂದಿಗೆ ಧ್ರುಪದ ಧಮಾರ ಚೀಜುಗಳನ್ನೂ ರಚನೆ ಮಾಡಿರಿ. ಅವುಗಳನ್ನು ಹಾಡಿರಿ, ಶಿಷ್ಯರಿಗೆ ಕಲಿಸಿರಿ. ನಿಮಗಾ ಅಧಿಕಾರವಿದೆ. ದಿಲ್ಲೀಶ್ವರನ ದರಬಾರಲ್ಲದಿದ್ದರೂ ಜಗದೀಶ್ವರನ ದರಬಾರಿನ ಗವಯ್ಯಾ ನೀವು!

ಘನಾನಂದ—ಜಗದೀಶ್ವರನ ದರಬಾರ?

Sri Vidyabharati Book Centre, Sringeri

CC-O. In Public Domain. Digitized by eGangotri

ನ್ಯಾಮತ—ನಾವೆಲ್ಲ ಇರುವುದು ಅವನ ದರಬಾರಿನಲ್ಲಿಯೇ ಅಲ್ಲವೆ ? ಇಲ್ಲಿ, ಆಲ್ಲಿ, ಎಲ್ಲಿ ಹಾಡಿದರೂ ಅವನಿಗೋಸ್ಕರವೇ. ಕೇಳಿ ಆನಂದಿಸುವವನು ಅವನೇ !

ಘನಾನಂದ—ನಿಮ್ಮ ಮಾತು ನಿಜ.

ನ್ಯಾಮತ—ನಿಜವೆಂದೊಪ್ಪುತ್ತೀರೋ ? ಹಾಗಾದರೆ ನೀವೊಂದು ಕೆಲಸ ಮಾಡಬೇಕು.

ಘನಾನಂದ—ಏನು ?

ನ್ಯಾಮತ—ಖಯಾಲ ಬಗೆಗಿರುವ ನಿಮ್ಮ ತಿರಸ್ಕಾರವನ್ನು ಬಿಟ್ಟುಬಿಡ ಬೇಕು.

ಘನಾನಂದ —ತಿರಸ್ಕಾರವೆ ?

ನ್ಯಾಮತ—ನಿಮಗೆ ಧ್ರುಪದಿಯಾಗಳಿಗೆ ಖಯಾಲೆಂದರೆ ಅಷ್ಟಕ್ಕಷ್ಟೆ. ಆದು ಬಂದು ಸಂಗೀತ ಅವನತಿಗಳಿಯಿತೆಂದು ನಿಮ್ಮ ಭಾವನೆ. ಘನಾನಂದ, ಎರಡೂ ಆ ಭಗವಂತನ ಲೀಲೆಗಳೇ : ನಿಮ್ಮದು ಶಿವನ ತಾಂಡವ, ನಮ್ಮದು ಶಿವೆಯ ಲಾಸ್ಯ. ಯಾವುದು ಹೆಚ್ಚು ಯಾವುದು ಕಡಿಮೆ ?

ಘನಾನಂದ—ಆದರೆ ನಮ್ಮದು ದೇಶೀಯ ಸಂಗೀತ. ನಿಮ್ಮದು ಪರದೇಶಿ. ಪರ್ಶಿಯಾದಿಂದ ಬಂದದ್ದು.

ನ್ಯಾಮತ—(ನಕ್ಕು ಹುಡುಗ ಬುದ್ಧಿ ! ನೀವೊಳ್ಳೆಯ ಗಾಯಕರು ಮಾತ್ರ ವೆಂದು ತೋರುತ್ತಿದೆ. ನಮ್ಮ ಸಂಗೀತದ ಪೂರ್ವಾಪರ ಗೊತ್ತಿಲ್ಲ. ಹೇಳಿರಿ, ಧ್ರುಪದಿಗೆ ಮೂಲಾಧಾರವಾವುದು ?

ಘನಾನಂದ—ಹಿಂದುಸ್ತಾನದ ಜಾನಪದ ಸಂಗೀತ.

ನ್ಯಾಮತ—ಅದಕ್ಕೆ ಶಾಸ್ತ್ರೀಯ ಸಂಗೀತದ ಸ್ವರೂಪ ಕೊಟ್ಟವನು ಯಾರು ?

ಘನಾನಂದ—ರಾಜಾ ಮಾನಸಿಂಗ ತೋಮರ.

ನ್ಯಾಮತ—ಯಾವುದರ ಮಾದರಿಯ ಮೇಲೆ ?

ಘನಾನಂದ—ಮಾದರಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಮತ—ದಖನ್ನಿನ ಕರ್ನಾಟಕ ಸಂಗೀತದ ಹೊಳವಿನಲ್ಲಿ !

ಘನಾನಂದ—ಕರ್ನಾಟಕ ಸಂಗೀತ ?

ನ್ಯಾಮತ—ಆ ಪದ್ಧತಿಯಲ್ಲಿ ರಾಗ ತಾನ ಪಲವಿ ಎಂದು ಹಾಡುತ್ತಾರೆ. ಆದರ ಉತ್ತರ ಹಿಂದೂಸ್ತಾನಿ ಸ್ವರೂಪವೇ ಧ್ರುಪದ.

ಘನಾನಂದ—(ಕುತೂಹಲದಿಂದ) ಓ, ಹಾಗೇನು ?

ನ್ಯಾಮತ – ಮತ್ತೆ ನಮ್ಮ ಖಯಾಲ ಸಂಗೀತಕ್ಕೂ ಮೂಲಸ್ರೋತ ಅದೇ : ಕರ್ನಾಟಕ ಸಂಗೀತ.

ಘನಾನಂದ—ಕವಾಲಿ ಅಲ್ಲವೆ ?

ನ್ಯಾಮತ—ಕವಾಲಿ ತಾಯಿ, ಕರ್ನಾಟಕ ತಂದೆ.

ಘನಾನಂದ—ಇದೇನೋ ಸ್ವಾರಸ್ಯವಾಗಿದೆ.

ನ್ಯಾಮತ—ನಿಜ. ಆ ಕತೆ ತುಂಬಾ ಸ್ವಾರಸ್ಯವಾಗಿದೆ.

ಘನಾನಂದ—ಕತೆ ?

ನ್ಯಾಮತ—ಅಲ್ಲಾವುದ್ದೀನ ಖಿಲಜಿಯ ಸೇನಾಪತಿ ಮಲಿಕ ಕಾಫುರ ದಖನ್ನಿಗೆ ದಂಡಯಾತ್ರೆಗೆ ಹೋಗಿರಲಿಲ್ಲವೆ ? ಆಲ್ಲಿಂದ ಹಿಂದಿರುಗಿ ಬರುವಾಗ ಗೋಪಾಲ ನಾಯಕನೆಂಬ ಕರ್ನಾಟಕ ಸಂಗೀತಗಾರನೊಬ್ಬ ನನ್ನು ಸೆರೆಹಿಡಿದುಕೊಂಡು ತಂದು ತನ್ನ ಅರಸನೆದುರಿಗೆ ನಿಲ್ಲಿಸಿದ. ಅಲ್ಲಾವುದ್ದೀನ ಖಿಲಜಿ ಖಟ್ಟಾ ಮುಸಲ್ಮಾನ. ಸಂಗೀತದ್ವೇಷಿ. ಏಕೆಂದರೆ ಇಸ್ಲಾಮ ಧರ್ಮದಲ್ಲಿ ಸಂಗೀತವು ಸುರಾಪಾನದಷ್ಟೇ ನಿಷಿದ್ಧ ವಾದುದು.

ಘನಾನಂದ— ಆಹುದೆ ?

ನ್ಯಾಮತ—ಹೂಂ ; ಆದರೆ ಗೋಪಾಲನಾಯಕ ಖಿಲಜಿಯೊಡನೆ ವಾದಿಸಿದ. ಸಂಗೀತ ಆತ್ಮೋನ್ನತಿಗೆ ಸೋಪಾನ, ಮೋಕ್ಷ ಮಾರ್ಗದ ಕೈದೀವಿಗೆ, ಭಗವಂತನನ್ನು ಸಾಕಾತ್ಕರಿಸಿಕೊಳ್ಳುವ ಸಾಧನ ಎಂಬ ಹಿಂದೂ ಧರ್ಮಶಾಸ್ತ್ರಗಳ ತತ್ತ್ವಗಳನ್ನವನ ಮನಸ್ಸಿನ ಮೇಲೆ ಬಿಂಬಿಸಿ ನಂಬಿಸ ಲೆಂದು ಖಿಲಜಿಯರಮನೆಯಲ್ಲಿ ಹಾಡಿ ತೋರಿಸಿದ ಗೋಪಾಲನಾಯಕ.

Sri Vidyabharati Book Centre, Sringeri

CC-O. In Public Domain. Digitized by eGangotri

ಘನಾನಂದ—ಕುಳಿತು ಕೇಳಿದನೆ ವಿಲಜಿ?

ನ್ಯಾಮತ—ನಾಯಕನ ಗಾಯನ ಅಷ್ಟು ಮಧುರ ಮೋಹಕವಾಗಿತ್ತು. ಆಗ ವಿಲಜಿಯ ಮಂತ್ರಿ-ಸೇನಾಪತಿ ಅಮೀರ ಖುಸ್ರೂ ಅಲ್ಲಿಯೇ ಇದ್ದ. ಅವನು ಪರ್ಶಿಯನ್ ಕವಿ ಮತ್ತು ಕವಾಲಿ ಸಂಗೀತಗಾರ. ಅವನು ಗೋಪಾಲ ನಾಯಕನ ಗಾಯನವನ್ನು ಕೇಳಿ ಇದೇನು ಮಹಾ? ನನಗೂ ಬರುತ್ತದೆ ಎಂದು ಹೇಳಿ ನಾಯಕನು ಹಾಡಿದುದನ್ನೆಲ್ಲವನ್ನೂ ಯಥಾವತ್ತಾಗಿ ಹಾಡಿ ತೋರಿಸಿದ.

ಘನಾನಂದ—(ಆಶ್ಚರ್ಯದಿಂದ) ಕರ್ನಾಟಕ ಸಂಗೀತವನ್ನೆ?

ನ್ಯಾಮತ—ಹೂಂ; ಗೋಪಾಲನಾಯಕನಿಗೂ ನಿಮ್ಮಷ್ಟೇ ಆಶ್ಚರ್ಯವಾಯಿತು. ನೀನು ಈ ಸಂಗೀತವನ್ನೆಲ್ಲಿ ಕಲಿತೆ ಎಂದು ಕೇಳಿದ. ನಿನ್ನ ಗುರು ಯಾರು ಎಂದ. ಅದಕ್ಕೆ ಉತ್ತರವಾಗಿ ಅವನ ಹೆಸರು ಗೋಪಾಲ ನಾಯಕ ಎಂದ ಅಮೀರ ಖುಸ್ರೂ.

ಘನಾನಂದ—ಎಂದರೆ? ಅಂತಹ ಏಕಸಂಧಿಗ್ರಾಹಿಯೇ ಅಮೀರ ಖುಸ್ರೂ?

ನ್ಯಾಮತ—ಹೌದು. ನಾಯಕನ ಗಾಯನವನ್ನು ಅಲ್ಲಿಯೇ ಕೇಳಿ ಕಲಿತು ಆಗಲೇ ಹಾಡಿ ತೋರಿಸಿದ. ವಿಲಜಿ ಅದನ್ನು ಮೆಚ್ಚಿಕೊಂಡು ನೀವಿಬ್ಬರೂ ದೊಡ್ಡ ಸಂಗೀತಗಾರರು; ಆದ್ದರಿಂದ ಖುಸ್ರುವಿನ ಕವಾಲಿ ಸಂಗೀತ, ನಾಯಕನ ಕರ್ನಾಟಕೀ ಸಂಗೀತ ಇವೆರಡೂ ಹಾಲು ಜೇನಾಗಿ ಸೇರಿ ಈ ಹಿಂದುಸ್ತಾನದಲ್ಲಿ ಹೊಸದೊಂದು ಸಂಗೀತ ಪರಂಪರೆ ಹುಟ್ಟಿ ಬೆಳೆಯುವಂತಾಗಲಿ: ಆದಕ್ಕಾಗಿ ನೀವಿಬ್ಬರೂ ಪ್ರಯತ್ನಿಸಿರಿ ಎಂದಾಜ್ಞಾಪಿಸಿದ. ಆಗ ಹುಟ್ಟಿತು ನಮ್ಮ ಖಯಾಲ ಗಾಯನ.

ಘನಾನಂದ—ಓ, ಹಾಗಾದರೆ ನಿಮಗೂ ನಮಗೂ ಮೂಲಾಧಾರ ರಾಗ-ತಾನ-ಪಲ್ಲವಿ!

ನ್ಯಾಮತ—ಹೌದು, ರಾಗ-ತಾನ-ಪಲವಿ.

ಘನಾನಂದ—(ಆದನ್ನು ತದ್ದುವವನಂತೆ) ಪಲ್ಲವಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಮತ—ಹಾಂ ಹಾಂ, ಪಲವಿ.

ಘನಾನಂದ—ಪಲವಿ ಅಲ್ಲ ನ್ಯಾಮತಜ್ಞಾನರೇ, ಅದು ಪಲ್ಲವಿ.

ನ್ಯಾಮತ—ನಹೀಂ ನಹೀಂ ; ವಹ ಹೈ ಪಲವಿ.

ಘನಾನಂದ—(ಕೆಣಕಲೆಂದು) ಹೌದು ಪಲವಿ ! ಅಲ್ಲ, ಪಲಾವಿ. ಸಾಹೇಬರಿಗೆ ಕೋಳಿ ಪಲಾವಿನ ನೆನಪಾಯಿತೇನೊ !

ನ್ಯಾಮತ—(ನಗುತ್ತ) ಅರೆ ಬನ್ಮನ ಕೇ ಬಚ್ಚೇ ಸುನೋ. ನೀವು ದ್ರುಪದ ಹೇಗೆ ಹಾಡುತ್ತೀರಿ ?

ಘನಾನಂದ—ಹೇಗೆಂದರೆ ? ಹಾಡಿತೋರಿಸಲೇನು ? ಮೊದಲು ಆಲಾಪ.... (ಸೋಹನಿ ರಾಗದಲ್ಲಿ ನೋಂ ತೋಂ ಆಲಾಪ ಮಾಡಿ ತೋರಿಸುತ್ತಾನೆ)

ನ್ಯಾಮತ—ಇದು ರಾಗ.

ಘನಾನಂದ—ಆಮೇಲೆ ಲಯಕಾರಿ. (ಲಯದಲ್ಲಿ ನೋಂ ತೋರಿ ಹಾಡುತ್ತಾನೆ.)

ನ್ಯಾಮತ—ಇದು ತಾನ.

ಘನಾನಂದ—ಅನಂತರ ಚೀಜು : "ನಾದ ಶಿವಶಕ್ತಿ ನಾದ ಪರಮೇಶ್ವರ ನಾರದ ತುಂಬುರು ಸರಸ್ವತೀಕೋ ವಂದನ...." (ಹಾಡುತ್ತ ಹಾಡುತ್ತ ಪದಲಯ ವಿನ್ಯಾಸ ಮಾಡುತ್ತಾನೆ.)

ನ್ಯಾಮತ—ಈಗ ನೀವು ಮಾಡಿದುದೇನು ?

ಘನಾನಂದ—ಪದ ಲಯ ವಿನ್ಯಾಸ.

ನ್ಯಾಮತ—ಏನು ?

ಘನಾನಂದ—ಪದ ಲಯ ವಿನ್ಯಾಸ.

ನ್ಯಾಮತ—ಏನು, ಏನೆಂದಿರಿ ?

ಘನಾನಂದ—(ಚೇಸರದಿಂದ, ಬಿಡಿಸಿ ಹೇಳುತ್ತ) ಪದ–ಲಯ–ವಿನ್ಯಾಸ !

ನ್ಯಾಮತ—(ಬೆರಳೆಣಿಸುತ್ತ ಪುನರುಚ್ಚರಿಸುತ್ತಾನೆ) ಪದ, ಲಯ, ವಿನ್ಯಾಸ ಪ–ಲ–ವಿ !

ಘನಾನಂದ—(ಒಮ್ಮೆಲೆ ಪಟಾಯಿಸಿ) ಯಹ ಭಾತ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ಯಾಮತ—ಹಾಂ ಮೀಂಯಾ, ಹಾಂ! ಆವ್ಹೋ ಗಲೇ ಮಿಲೇಂಗೇ. (ಆಲಂಗಿಸಿಕೊಳ್ಳುವರು) ಇನ್ನು ಖಯಾಲ ಗಾಯನ ಕೇಳಿ ಕಿವಿ ಮುಚ್ಚಿಕೊಳ್ಳುವುದಿಲ್ಲವಲ್ಲವೆ?

ಘನಾನಂದ—ಉಂಟೇ ಎಲ್ಲಾದರೂ? ನೀವಿಂದು ದರಬಾರಿನಲ್ಲಿ ಕರ್ಣಾನಂದಕರವಾಗಿ ಹಾಡಿದುದನ್ನು ತದೇಕಚಿತ್ತನಾಗಿ ಕೇಳಿದೆನಲ್ಲವೇ?

ನ್ಯಾಮತ—ಛೆ, ಅದೆಂತಹ ಗಾಯನ! ಅದು ಸಭೆಗೋಸ್ಕರ ಹಾಡಿದುದು; ಸುಲತಾನನಿಗೋಸ್ಕರ ಹಾಡಿದುದು. ನಿಮ್ಮಂತಹ ಸೂರಿಗಳಿಗಾಗಿ, ಗುಣೀಜನರಿಗಾಗಿ ಹಾಡಿ ಕೇಳಿಸಬೇಕಾದ ಖಾಸ ಜೀಜಗಳಿವೆ. ಆಲ್ಲದೆ, ನಿಮ್ಮ ಗಾಯನವನ್ನೂ ಕೇಳಬೇಕಾಗಿದೆ. ಎಲ್ಲಿ? ನಿಮ್ಮ ಮನೆಗೆ ಹೋಗೋಣವೆ?

ಘನಾನಂದ—(ತಬ್ಬಿಬ್ಬಾಗಿ) ನನ್ನ ಮನೆ.... (ತಡವರಿಸುತ್ತ) ಯಾವುದು ಅಲ್ಲ–ಎಂದರೆ–ನಾನೀಗ ಮನೆಗೆ ಹೋಗುತ್ತಿಲ್ಲ. ಬೇರೆಲ್ಲಿಗೋ ಹೋಗಬೇಕಾದ ಕೆಲಸವಿದೆ.... ಇನ್ನೊಂದು ದಿನ ಖಂಡಿತ ಕರೆದುಕೊಂಡು ಹೋಗುತ್ತೇನೆ (ಲಗುಬಗೆಯಿಂದ) ಬರುತ್ತೇನೆ.... ಖುದಾ ಹಾಫಿಜ! (ಅವಸರವಸರವಾಗಿ ಹೊರಟುಹೋದುದನ್ನು ನೋಡಿ ಸದಾರಂಗ ಚಕಿತನಾಗಿ ನಿಲ್ಲುತ್ತಾನೆ. ಅನಂತರ ಏನೋ ರಸಿಕವಿಚಾರ ಹೊಳೆದು ಮುಗುಳ್ನಗುತ್ತ ತಲೆದೂಗುತ್ತಿರುವಷ್ಟರಲ್ಲಿ ರಂಗದ ದೀಪಗಳು ಮಂದವಾಗುತ್ತವೆ. ಆದರೊಂದಿಗೆಯೇ ಹಿನ್ನಲೆಯಲ್ಲಿ ಸುಜಾನಳ ಪಿಲೂ ಠುಮರೀ ಗಾಯನ ಆರಂಭವಾದುದು ಕೇಳಿಬರುವುದು. ಕ್ರಮೇಣ ರಂಗಮಧ್ಯದ ತೆರೆಗಳು ಸರಿಯುತ್ತಿದ್ದಂತೆ ಬೆಳಕು ಮೂಡಿದಾಗ—

ದೃಶ್ಯ : ೬

ಸುಜಾನಳ ಮನೆ. ಒಬ್ಬಳೇ ಕುಳಿತು ತಂಬೂರಿ ಮೀಟಿಕೊಂಡು ಹಾಡುತ್ತಿದ್ದಾಳೆ....)

ಸುಜಾನ—ನದಿಯಾ ಕಿನಾರೇ ಮೋರಾ ಗಾಂವ
ಸುನಲೇ ಹೋ ಪ್ಯಾರೆ ಶ್ಯಾಮ ॥ನದಿಯಾ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕದಂಬ ಕೀ ಛೈಯಾ ಮೇರೋ ಧಾಮ
ಲಲಿತಾ ಮೇರೋ ನಾಮ
ತುಮ ಆವೋ ಘನಶ್ಯಾಮ
ನದಿಯಾ ಕಿನಾರೇ ಮೋರಾ ಗಾಂವ ॥

(ವಾಹ, ಬಹೋತ ಅಚ್ಛಾ ಎನ್ನುತ್ತ ಘನಾನಂದ ಪ್ರವೇಶಿಸುತ್ತಾನೆ. ಸುಜಾನ ಮೇಲೆದ್ದು ಅವನ ಪಾದ ಮುಟ್ಟಿ ಕಣ್ಣಿಗೊತ್ತಿಕೊಂಡು ಪಾದಧೂಲಿಯನ್ನು ಬೈತಲೆಗೆ ಹಚ್ಚಿಕೊಳ್ಳುತ್ತಾಳೆ. ಅವನು ಭುಜ ಹಿಡಿದೆಬ್ಬಿಸಿ ಹೆಗಲ ಮೇಲೆ ಕೈಹಾಕಿ ನೇಹದಿಂದ ಅವಳ ಮುಖ ನೋಡುತ್ತ ನಿಲ್ಲುತ್ತಾನೆ. ಅವಳು ಹಾಡಿದ್ದ ಠುಮರಿಯನ್ನು ಮೆಲಕ್ಕು ಹಾಕುವವನಂತೆ ಮೆಲ್ಲಗೆ ಹಾಡುತ್ತಾನೆ....)

ಘನಾನಂದ—ಲಲಿತಾ ಮೇರೋ ನಾಮ
ತುಮ ಆವೋ ಘನಶ್ಯಾಮ
ನದಿಯಾ ಕಿನಾರೇ ಮೋರಾ ಗಾಂವ....

ವಾಹ! ಲಲಿತಾ ಮೇರೋ ನಾಮ.... ಆಗಯಾ ದೇಖೋ ತೇರಾ ಘನಶ್ಯಾಮ! ಘನಾನಂದ ಘನಶ್ಯಾಮನಿಗೆ ನೀನೆ ಲಲಿತಾ! (ಒಲವು ದುಂಬಿದ ದನಿಯಲ್ಲಿ) ಅಲ್ಲವೇ ರಾಣೀ ಸುಜಾನ?

ಸುಜಾನ—ಆಹುದು ನಾಥ!

ಘನಾನಂದ—ನಾಥ! (ಹಿಗ್ಗಿನಿಂದ) ಆರೆ ವಾಹ! ಈ ಪದವನ್ನೆಲ್ಲಿ ಕಲಿತು ಕೊಂಡೆ?

ಸುಜಾನ—ಯಾಕೆ? ಜಗನ್ನಾಥ ಪಂಡಿತನನ್ನು ಲವಂಗಿ ನಾಥ ಎಂದೇ ಕರೆಯುತ್ತಿದ್ದಿರಬೇಕಲ್ಲವೆ?

ಘನಾನಂದ—ಆಂ? ಇರಬೇಕು.

ಸುಜಾನ—ಆದರೆ ನೀವೂ ಜಗನ್ನಾಥನಾಗಲು ಹೊರಟೀರಿ ಮತ್ತೆ!

ಘನಾನಂದ—ಎಂದರೆ?

ಸುಜಾನ—ಕೇವಲ ನನಗೆ ಮಾತ್ರ ನಾಥ.

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಾನಂದ—(ಸಂತೋಷದಿಂದ, ಗಲ್ಲ ನೇವರಿಸುತ್ತ) ಆಹಾ ಪ್ಯಾರೀ !

ಸುಜಾನ—ನಿಮ್ಮ ಪತ್ನಿಯಾಗುವ ಭಾಗ್ಯವಿಲ್ಲದಿದ್ದರೇನಾಯಿತು ; ಉಪಪತ್ನಿಯಾಗಿರುವುದರಲ್ಲಿಯೇ ನನಗೆ ಸಂತೋಷ.

ಘನಾನಂದ—(ಕನಲಿ) ಸುಜಾನ ! ಹೇಳಲಿಲ್ಲವೆ ಹಾಗೆಂದೂ ಎಂದುಕೊಳ್ಳಬೇಡ ಎಂದು ? ನೀನು ನನ್ನ ಧರ್ಮಪತ್ನಿಯಲ್ಲದಿದ್ದರೇನಾಯಿತು ; ಚತುರ್ವಿಧ ಪುರುಷಾರ್ಥಗಳಲ್ಲಿ ಕೊನೆಯ ಹಂತವನ್ನು ಸಾಧಿಸಿಕೊಡುವ ಮೋಕ್ಷಪತ್ನಿ ನೀನು ಈ ಘನಾನಂದನಿಗೆ–ಯಾಜ್ಞವಲ್ಕ್ಯನಿಗೆ ಗಾರ್ಗಿಯಿದ್ದಂತೆ. (ವ್ಯಾಸಪೀಠದ ಮೇಲೆ ಕುಳಿತು ಅವಳ ಕೈಹಿಡಿದು ಪಕ್ಕದಲ್ಲಿ ಕುಳ್ಳಿರಿಸಿಕೊಳ್ಳುತ್ತಾನೆ.)

ಸುಜಾನ—ಧನ್ಯಳಾದೆ ನಾಥ. ಅದಕ್ಕಾಗಿ ನಿಮ್ಮ ಕಾವ್ಯ–ಸಂಗೀತಗಳಲ್ಲಿ ಸಹಚರಿಯಾಗಬೇಕೆಂಬ ಇಚ್ಛೆ ನನಗೆ. ಹೇಳಿರಿ, ನನಗೆ ಸದಾರಂಗರಿಂದ ಯಾವಾಗ ಖಯಾಲ ಗಾಯನ ಹೇಳಿಸುತ್ತೀರಿ ?

ಘನಾನಂದ—ಯಾಕೆ ? ನನ್ನ ಧ್ರುಪದ ಗಾಯಕೀ ನಿನಗೆ ಬೇಡವಾಯಿತ್ತೇನು?

ಸುಜಾನ—(ಮುನಿಸಿನಿಂದ) ಹೌದು. ಬೇಡವಾಯಿತು.

ಘನಾನಂದ—ಏನು ?

ಸುಜಾನ—ಧ್ರುಪದವೂ ಬೇಡ ; ಖಯಾಲೂ ಬೇಡ.

ಘನಾನಂದ—ಸುಜಾನ !

ಸುಜಾನ—ನನಗೆ ನೀವು ಬೇಕು.

ಘನಾನಂದ—(ನಲ್ಮೆಯಿಂದ) ಪ್ಯಾರೀ ಸುಜಾನ !

ಸುಜಾನ—ನಾಥ, ನಿಮ್ಮ ಕವಿತ್ವದ ಕೋಮಲ ಪದಪಂಕ್ತಿಗಳಿಗೆ ಧ್ರುಪದಿನ ಗಂಡು ಶೈಲಿ ಸರಿಹೊಂದಲಾರದು. ಆದಕ್ಕಾಗಿ ಖಯಾಲ ಕಲಿತು ಆದರ ಲಲಿತ ಮಧುರ ವಿನ್ಯಾಸಕ್ಕೆ ನಿಮ್ಮ ದೋಹಾಗಳನ್ನು ಹೊಂದಿಸಿ ಹಾಡಬೇಕೆಂದು ನನ್ನ ಮನೀಷೆ. ಆ ಉದ್ದೇಶದಿಂದ ಕೇಳಿದೆ ನಿಮ್ಮನ್ನು ನ್ಯಾಮತಖಾನ ಸದಾರಂಗರಲ್ಲಿಗೆ ನನ್ನನ್ನು ಸಂಗೀತ ಕಲಿಯಲು ಕರೆದುಕೊಂಡು ಹೋಗಿರೆಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಾನಂದ—ಓ ಹಾಗಲ್ಲವೆ ? ಹಾಗಾದರೆ ಕೇಳು ಸುಜಾನ. ನಿನ್ನ ಕಿಸ್ಮತ್ ಖುಲಾಯಿಸಿದೆ. ಸದಾರಂಗ ಇನ್ನು ದಿಲ್ಲಿಯಲ್ಲೇ ಇರುತ್ತಾರೆ.

ಸುಜಾನ—ಮಾಶಾ ಅಲ್ಲಾಹ ! ಹಾಗಾದರೆ ಸುಲತಾನ ಮಹಮ್ಮದಶಾಹರ ದರಬಾರಿನ ಗಾಯಕರಾಗಲು ಒಪ್ಪಿಕೊಂಡರು ಸದಾರಂಗ!

ಘನಾನಂದ—ಇಲ್ಲ

ಸುಜಾನ—(ನಿರಾಸೆಯಿಂದ) ಆಂ ? ಇಲ್ಲವೆ ?

ಘನಾನಂದ—ಇಲ್ಲ. ಆದರೂ ಆಗಾಗ ಬಂದು ದರಬಾರಿನಲ್ಲಿ ಹಾಡಲು ಒಪ್ಪಿಕೊಂಡಿದ್ದಾರೆ. ಕೋಕಿಜಿಯೋಳಿಗೆ ಅಲ್ಲದೆ ಜನಾನಾದ ಇತರ ಸ್ತ್ರೀಯರಿಗೆ ಗಾಯನ ಕಲಿಸಲೂ ಸಮ್ಮತಿಸಿದ್ದಾರೆ.

ಸುಜಾನ—ಅಯ್ಯೋ, ನನಗಾ ಭಾಗ್ಯವಿಲ್ಲವೇ ?

ಘನಾನಂದ—(ಸಿಡಿದೆದ್ದು) ಸುಜಾನ !

ಸುಜಾನ—ಸದಾರಂಗರ ಶಿಷ್ಯಳಾಗುವ ಭಾಗ್ಯ !

ಘನಾನಂದ—(ಸಮಾಧಾನಗೊಂಡು) ಓ, ಹಾಗೆ.

ಸುಜಾನ—ಮತ್ತೆ ? ನೀವು ಹೇಗೆಂದು ತಿಳಿದಿದ್ದಿರಿ ?

ಘನಾನಂದ—(ತಡವರಿಸುತ್ತ) ಹೇಗೂ.... ಇಲ್ಲ....ಹೋಗಲಿ ಬಿಡು. ಸದಾರಂಗರ ಗಾಯನ ಬೇಕಲ್ಲವೆ ನಿನಗೆ ? ಇಗೊ, ತಂಬೂರಿ ತೆಗೆದುಕೊ. ಇಂದೇ ದರಬಾರಿನಲ್ಲಿ ಸುಲತಾನರ ಆಜ್ಞೆಯಂತೆ ನ್ಯಾಮತಖಾನರು ರಚನೆ ಮಾಡಿ ಹಾಡಿದ ಖಯಾಲ ಹೇಳಿಕೊಡುತ್ತೇನೆ. (ಇಬ್ಬರೂ ಹಾಡುತ್ತಾರೆ)

(ರಾಗ: ಮೀಂಯಾ ಕೀ ಮಲ್ಹಾರ; ತೀನ ತಾಲ)

ಬೋಲರೇ ಪಪೀಹರಾ ಆಬ ಘನ ಗರಜೇ
ಆಂ|| ರೂಮ ಝೂಮಕರ ಆಯೀ ಬದರಿಯಾ
ಬರಸನ ಲಾಗೀ ಸದಾರಂಗೀಲೇ
ಮಹಮ್ಮದಶಾ ದಾಮನೀ ಚಾಂದ ಚಾಂದ
ಮೋರಾ ಜಿಯರಾ ಲರಜೇ || ಬೋಲರೇ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಸುಭಾನಲ್ಲಾಹ ! ಏನು ಸುಂದರವಾದ ಚೀಜ್ ಇದು ! ಇಂತಹ ಕೃತಿಯನ್ನು ರಚಿಸಿದ ಸದಾರಂಗರನ್ನು ಸ್ವತಃ ಕಣ್ತುಂಬ ನೋಡುವ ಸುಯೋಗವೆಂದಾದರೂ ಸಿಕ್ಕೀತೇ ನನಗೆ ?

ಘನಾನಂದ—ಅವರನ್ನು ? ಆವರನ್ನು ನೀನೇಕೆ ನೋಡಬೇಕು ಸುಜಾನ, ಅವರ ಸಂಗೀತವೆಲ್ಲ ಹಂತ ಹಂತವಾಗಿ ನಿನ್ನ ಮನೆಯಲ್ಲಿ ಬಂದು ಬೀಳ ಲಿರುವಾಗ ?

ಸುಜಾನ—(ನಕ್ಕು) ಪಾಪ; ಆ ಬೈರಾಗಿ ಫಕೀರರ ವಿಷಯದಲ್ಲಿಯೂ ನಿಮಗೆ ಮತ್ಸರವೆ ?

ಘನಾನಂದ—(ತಬ್ಬಿಬ್ಬಾಗಿ) ಅಲ್ಲ....ಆದರೆ ಅವರು ಹಾಡುವುದು ದರಬಾರಿನಲ್ಲಿ ಮಾತ್ರ—

ಸುಜಾನ—ಹಾಗಿದ್ದರೆ ನನ್ನನ್ನು ದರಬಾರಿಗೆ ಕರೆದುಕೊಂಡು ಹೋಗಿರಿ.

ಘನಾನಂದ—ನಿನ್ನನ್ನು ? ದರಬಾರಿಗೆ ?

ಸುಜಾನ—ಯಾಕೆ ? ಧೈರ್ಯವಿಲ್ಲ ! ಅಲ್ಲವೆ ?

ಘನಾನಂದ—ಹಾಗಲ್ಲ....

ಸುಜಾನ—ತಿಳಿಯಿತು ತಿಳಿಯಿತು. ಇಷ್ಟೇ ನಿಮ್ಮ ಸ್ವರೂಪ. ದಿಲ್‌ಕೇ ರಾನೀ, ಸತೀ ಸುಜಾನ, ಮೋಕ್ಷಪತ್ನಿ–ಎಲ್ಲ ಈ ಮಹಲಿನ ಒಳಗಡೆಯಲ್ಲಿ. ದರ ಬಾರಿಗೆ ಕರೆದುಕೊಂಡುಹೋಗಿ ಅಮೀರ–ಸರದಾರರೆಲ್ಲರೆದುರಿಗೆ: ನೋಡಿ, ನನ್ನ ಪತ್ನಿ ಎಂತಹ ಸುಂದರಿ; ನಾನೆಷ್ಟು ಅದೃಷ್ಟಶಾಲಿ ! ಎನ್ನುವಂತೆ ಧೈರ್ಯದಿಂದ ತಲೆಯೆತ್ತಿ ನಡೆದಾಡುವ ಸಾಹಸವುಂಟೇ ನಿಮ್ಮಲ್ಲಿ ? (ವ್ಯಂಗ್ಯ) ನಾನೊಬ್ಬ ನಿಷ್ಠಾವಂತ ಸದ್ಬ್ರಾಹ್ಮಣ, ಏಕಪತ್ನೀವ್ರತಸ್ಥ – ಶ್ರೀರಾಮಚಂದ್ರ–ಎಂದು ತೋರಿಸಿಕೊಳ್ಳಬೇಕಾಗಿದೆ ನಿಮಗೆ !

ಘನಾನಂದ—ಏನು ಹೇಳುವೆ ಸುಜಾನ ? ನಿನಗಾಗಿ ನಾನು ಸಮಾಜದ ಕೋಪ ತಿರಸ್ಕಾರ ಬಹಿಷ್ಕಾರ ಎಲ್ಲವನ್ನೂ ಎದುರಿಸಿ ನಿಂತಿಲ್ಲವೆ ?

ಸುಜಾನ—ಹಾಗಾದರೆ ಆ ಧೈರ್ಯ ಈಗೆಲ್ಲಿ ಹೋಯಿತು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಾನಂದ—ಸಮಾಜದ ಮಾತು ಬೇರೆ–ದರಬಾರಿನ ಮಾತು ಬೇರೆ.

ಸುಜಾನ—ಯಾಕೆ? ನೀವು ದರಬಾರಿನ ಮುಖ್ಯ ಮುನಶಿ ಅಲ್ಲವೆ? ನಿಮ್ಮ ಪತ್ನಿಯನ್ನು ನಿಮ್ಮ ಜೊತೆಗೆ ಕರೆದುಕೊಂಡುಹೋಗುವ ಅಧಿಕಾರ ನಿಮಗಿಲ್ಲವೆ?

ಘನಾನಂದ—ಇದು ಅಧಿಕಾರದ ಪ್ರಶ್ನೆಯಲ್ಲ ಪ್ಯಾರೀ–

ಸುಜಾನ—ಹಾಗಾದರೆ ಮತ್ತೇನು?

ಘನಾನಂದ—ನೀನು ದರಬಾರಿಗೆ ಬರುವುದು ಕ್ಷೇಮಕರವಲ್ಲ.

ಸುಜಾನ—ಊಹುಂ, ಅದೆಲ್ಲ ಕೇಳುವುದಿಲ್ಲ. ನೀವು ನನ್ನನ್ನು ಕರೆದುಕೊಂಡು ಹೋಗಲೇಬೇಕು.

(ಬಾಗಿಲು ತಟ್ಟಿದ ಶಬ್ದ — 'ಸುಜಾನ' ಎಂಬ ಕರೆ)

ಘನಾನಂದ—ಯಾರದು?

ಸುಜಾನ—(ಹೋಗಿ ನೋಡಿ) ಓ, ದರಬಾರಿನ ದೂತ.

ದೂತ—(ಪ್ರವೇಶಿಸಿ ಸಲಾಂ ಮಾಡಿ) ಘನಾನಂದರು ಈ ಕೂಡಲೆ ದರಬಾರಿಗೆ ಬರಬೇಕು.

ಘನಾನಂದ—ಹಾಗೇನು? ತಮ್ಮ ಹುಕುಮ್—ಪಾಲಿಸಲೇಬೇಕೇನೋ!

ದೂತ—ಅಲ್ಲ; ಇದು ಸುಲತಾನ ಮಹಮ್ಮದಶಾಹ ರಂಗೀಲೇ ಅವರು ಮಾಡಿದ ಹುಕುಂ. ನಾನು ಜಾರಿ ಮಾಡಿದ ಚಾರ ಮಾತ್ರ.

ಘನಾನಂದ—ಅದೇಕೆ ಈ ಅವೇಳೆಯಲ್ಲಿ ನನ್ನನ್ನು ಕರೆಯಕಳಿಸಿದ್ದಾರೆ ಸುಲತಾನರು? ದರಬಾರಿನ ಸಮಯದಲ್ಲಿ ಮಾತ್ರ ನಾನವರ ಗುಲಾಮ. ಮಿಕ್ಕೆಲ್ಲ ವೇಳೆಯಲ್ಲಿ ನಾನು ಸ್ವತಂತ್ರ. ಈ ಮಹಲಿನ ಸಂಗೀತ ಪ್ರಪಂಚದಲ್ಲಿ ನಾನೇ ಸಾಮ್ರಾಟ, ಸುಜಾನಳೀ ಸಾಮ್ರಾಜ್ಞಿ! ನೀನಿನ್ನು ಹೊರಡು; ಸುಲತಾನರಿಗೆ ಹೀಗೆಂದೇ ತಿಳಿಸು.

ದೂತ—ಮುನಶಿಯರು ನನ್ನ ತಪ್ಪನ್ನು ಮಾಫ ಮಾಡಬೇಕು. ಮೆಹರ ಬಾನೀ ಮಾಡಿ ಈ ಕೂಡಲೇ ಹೊರಟು ಬರಬೇಕು. (ಅಭಿಮಾನದಿಂದ) ಈ ಮಹಲಿನ ಸಂಗೀತ ಸಾಮ್ರಾಟರಾದ ನಿಮ್ಮನ್ನು ತಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ದರಬಾರಿನ ಸಂಗೀತ ಸಾಮ್ರಾಟರನ್ನಾಗಿಸುವ ಇರಾದೆಯಲ್ಲಿದ್ದಾರೆ ಸುಲತಾನರು !

ಘನಾನಂದ—ಹಾಗೆಂದರೆ ?

ದೂತ—ನ್ಯಾಮತಖಾನ ಸದಾರಂಗರು ದರಬಾರಿನ ಗಾಯಕರಾಗಲು ನಿರಾಕರಿಸಿದ ಮೇಲೆ ಯಾರನ್ನು ನಿಯಮಿಸಿಕೊಳ್ಳುವುದೆಂದು ಸುಲತಾನರು ಆಲೋಚಿಸುತ್ತಿದ್ದರು. ಆಗ ಸರದಾರ ಅನೀಜಖಾನರು ನಿಮ್ಮ ಹೆಸರನ್ನು ಸೂಚಿಸಿದರು.

ಸುಜಾನ—ಅನೀಜ ?

ದೂತ—ಹಾಂ ಹಾಂ ; ಘನಾನಂದರೊಬ್ಬ ದೊಡ್ಡ ಧ್ರುಪದ ಗಾಯಕರು ಆದ್ದರಿಂದ ಅವರನ್ನೇ ದರಬಾರ ಗವಯ್ಯಾ ಆಗಿ ನೇಮಿಸಬಹುದೆಂದು ಅನೀಜಖಾನರು ಶಿಫಾರಸು ಮಾಡಿದರು.

ಘನಾನಂದ—ಆದಕ್ಕೆ ಸುಲತಾನರು ಒಪ್ಪಿದರೋ ?

ದೂತ—ಒಪ್ಪಿದಂತೆಯೇ ; ಆದರೆ ಆದಕ್ಕೆ ಮುನ್ನ ಒಮ್ಮೆ ನಿಮ್ಮನ್ನು ದರಬಾರಿನಲ್ಲಿ ಹಾಡಿಸಿ ಕೇಳಬೇಕೆಂದರು.

ಘನಾನಂದ—ನಿಮ್ಮ ಸುಲತಾನರಿಗೆ ಹೇಳು. ನನ್ನ ಸ್ಫೂರ್ತಿದೇವತೆ ಸುಜಾನ ಎದುರಿನಲ್ಲಿ ಕುಳಿತರೆ ಮಾತ್ರ ನನಗೆ ಹಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಇವಳಿಗೆ ದರಬಾರಿನಲ್ಲಿ ಪ್ರವೇಶ ಕೊಟ್ಟರೆ ಮಾತ್ರ ನಾನು ಹಾಡಲೊಪ್ಪುತ್ತೇನೆ.

ದೂತ—ಘನಾನಂದ !

ಸುಜಾನ—(ಬಳಿಗೆ ಬಂದು ಎದುರಿಗೆ ನಿಂತು ಅಭಿಮಾನದಿಂದ ಭುಜಗಳಮೇಲೆ ಕೈಗಳನ್ನಿರಿಸಿ) ಇದೀಗ ಧೈರ್ಯಶಾಲಿ ಗಂಡಸಿನ ನಡವಳಿಕೆ !

(ಅಂಕದ ಪರದೆಯಿಳಿಯುವುದು)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ : ೭

(ಸುಲತಾನ ಮಹಮ್ಮದಶಾಹನ ದರಬಾರು. ಬಲಪಕ್ಕಕ್ಕೆ ಸಮೀಪವಾಗಿ ಎಡ ಪಕ್ಕಕ್ಕಭಿಮುಖವಾಗಿ ಎಂದರೆ ಪ್ರೇಕ್ಷಕರ ಕಡೆಗೆ ಎಡ ದೋಳಾಗುವಂತೆ ಸಿಂಹಾಸನವನ್ನಿರಿಸಲಾಗಿದೆ. ಸುಲತಾನ ಕುಳಿತಿದ್ದಾನೆ, ಅನೀಜಖಾನ ಅವನ ಪಕ್ಕದಲ್ಲಿ ನಿಂತುಕೊಂಡು ಏನೋ ಗುಟ್ಟಿನ ವಿಚಾರವನ್ನು ತಿಳಿಸುತ್ತಿದ್ದಾನೆ. ಎಡ ಪಾರ್ಶ್ವದ ಬಳಿ ರಂಗದ ಮುಂಬದಿಯ ಮೂಲೆಯಲ್ಲಿ ನಿಂತು ರಫೀಕ ಮತ್ತು ದೂತ ಮಾತನಾಡುತ್ತಾರೆ)

ರಫೀಕ—ಅಂತೂ ಕೊನೆಗೊಮ್ಮೆ ದರಬಾರಿಗೆ ಬಂದ ಘನಾನಂದ.

ದೂತ—ಮುನಶಿಯಾಗಿದ್ದಾಗ ದಿನ ನಿತ್ಯ ಎಲ್ಲರಿಗಿಂತ ಮುಂಚೆ ಬಂದು ತಲೆ ತಗ್ಗಿಸಿಕೊಂಡು ಕಾಗದ ಗೀಚುತ್ತ ಕುಳಿತಿರುತ್ತಿದ್ದ. ಆದರೆ ಇಂದು ಮಾತ್ರ ಸಂಗೀತಗಾರನಾಗಿ ಬಾರೆಂದ ಮಾತ್ರಕ್ಕೆ ಇಷ್ಟೊಂದು ತಡವಾಗಿ ಬರುವುದೆ ?

ರಫೀಕ—ದರಬಾರಿನ ಸರದಾರ—ಅಮೀರರ ಮಾತಂತಿರಲಿ, ಶಾಹೆನಶಾಹ ಸುಲತಾನರನ್ನೇ ಇಷ್ಟು ಹೊತ್ತು ಕಾಯಿಸಬೇಕಾದರೆ ಇವನ ಘಮಂಡ ಎಷ್ಟಿರಬೇಕು ನೋಡು !

ದೂತ—ಎಲ್ಲ ಆ ಸುಜಾನಳಿಗಾಗಿ.

ರಫೀಕ—ಎಂದರೆ ?

ದೂತ—ಅವಳೆದುರಿಗೆ ತಾನು ದೊಡ್ಡ ಧೈರ್ಯಶಾಲಿ, ಯಾರಿಗೂ ದಾದ ಮಾಡುವವನಲ್ಲ; ಸ್ವತಃ ಸುಲತಾನರಿಗೂ ಸೊಪ್ಪು ಹಾಕುವವನಲ್ಲ ಎಂದು ತೋರಿಸಿಕೊಳ್ಳಬೇಕಾಗಿದೆ ಅವನಿಗೆ. ಅವಳಿಂದ ಶಾಬಾಶಗಿರಿ ಪಡೆಯುವುದಕ್ಕಾಗಿ ಎಷ್ಟೆಲ್ಲ ಉದ್ಧಟತನ ತೋರಿಸುತ್ತಾನೆ ! ಒಂದು ದಿನ ಅದರ ಫಲ ಸಿಗುತ್ತದೆ.

CC-O. Vidyabharathi Book Centre, Sringeri

CC-O. In Public Domain. Digitized by eGangotri

ರಫೀಕ—ಆದರೆ ಇವನಿಷ್ಟು ತಡಮಾಡಿದರೂ ಸುಲತಾನರಿಗೆ ಮಾತ್ರ ಕೋಪವೇ ಬಂದಿಲ್ಲ.

ದೂತ—ಬಂದಿತ್ತು ; ಆದರೆ ಸುಜಾನಳ ಮುಖ ಕಂಡಾಕ್ಷಣ ಇಳಿದು ಹೋಯ್ತು. (ಇಬ್ಬರೂ ನಗುತ್ತಾರೆ. ಅಷ್ಟರಲ್ಲಿ ಘನಾನಂದಸುಜಾನರು ಪ್ರವೇಶಿಸುತ್ತಾರೆ.)

ರಫೀಕ—ಬಂದಳಲ್ಲ ಸುಜಾನ ! ಇವಳನ್ನು ಕಂಡರೆ ಯಾರ ಕೋಪ ಇಳಿಯಲಿಕ್ಕಿಲ್ಲ ! ಕ್ಯಾ ಲಚಕ್, ಕ್ಯಾ ಠುಮಕ್, ಕ್ಯಾ ಅದಾಂಯೇ ; ಹಾಯ್ ಹಾಯ್ !

(ಘನಾನಂದ ಸುಲತಾನನ ಬಳಿಗೆ ಹೋಗಿ ಮುಜುರೆ ಮಾಡಿ ಬರುತ್ತಾನೆ. ಸುಜಾನ ದೂರದಲ್ಲಿ ನಿಂತಲ್ಲಿಂದಲೇ ಸಲಾಂ ಮಾಡುತ್ತಾಳೆ. ದರಬಾರಿನ ಕಚೇರಿಗೆಂದು ಇಬ್ಬರೂ ವಿಶೇಷವಾದ ಉಡುಗೆ ತೊಡುಗೆಗಳನ್ನು ಧರಿಸಿದ್ದಾರೆ. ಸುಜಾನ ಗುಲಾಲು ಬಣ್ಣದ ಸೀರೆಯುಟ್ಟು ತಲೆಯ ಮೇಲೆ ಸೆರಗು ಹೊದೆದು ಕಂಕುಮವನ್ನಿಟ್ಟುಕೊಂಡಿದ್ದಾಳೆ. ಕ್ಷಣಕಾಲ ಆಲೋಚಿಸಿ ಘನಾನಂದ ಸಿಂಹಾಸನದ ಎದುರಿನಲ್ಲಿರುವ ವ್ಯಾಸಪೀಠದ ಮೇಲೆ ಸುಲತಾನನ ಕಡೆಗೆ ಬೆನ್ನುಮಾಡಿ ಕುಳಿತುಕೊಳ್ಳುತ್ತಾನೆ. ಸುಜಾನಳು ಅದು ಅನುಚಿತವೆಂದೂ ಆ ಕಡೆಗೆ ತಿರುಗಿ ಕುಳಿತುಕೊಳ್ಳಬೇಕೆಂದೂ ಸನ್ನೆ ಮಾಡುತ್ತಾಳೆ. ಅದನ್ನು ಲೆಕ್ಕಿಸದೆ, ಯಾರೇನು ಮಾಡುತ್ತಾರೆ, ಇರಲಿ ಬಾ, ಎಂಬಂತೆ ಹಾವ ಭಾವ ಮಾಡಿ ಘನಾನಂದ ಅವಳನ್ನು ತನ್ನೆದುರಿಗೆ, ಎಂದರೆ ಸಿಂಹಾಸನಕ್ಕೆ ಅಭಿಮುಖವಾಗಿ ಕುಳ್ಳಿರಿಸಿಕೊಳ್ಳುತ್ತಾನೆ. ಸೇವಕಿಯೊಬ್ಬಳು ತಂಬೂರಿಯನ್ನು ತಂದು ಮುಂದಿಡುತ್ತಾಳೆ. ಬೇಸರಗೊಂಡ ಸುಲತಾನ ಎದ್ದು ಮುಂದಕ್ಕೆ ಬರುತ್ತಾನೆ, ಅವನೊಂದಿಗೆ ಅನೀಜ.)

ಮಹಮ್ಮದ—ತಡವಾಗಿ ಬಂದದ್ದಾಯಿತು ; ಇನ್ನು ಶ್ರುತಿ ಮಾಡಿಕೊಳ್ಳುವುದಕ್ಕೆ ಇನ್ನೆಷ್ಟು ವೇಳೆ ಹಿಡಿಯುವುದೋ ! ಈ ಸಂಗೀತಗಾರರಿಗೆ ಸಮಯದ ಮಹತ್ತ್ವ ಯಾವಾಗ ತಿಳಿಯುವುದೋ !

ಅನೀಜ—ಇದನ್ನೆಲ್ಲ ಹೇಗಾದರೂ ಸಹಿಸಿಕೊಳ್ಳಬಹುದು ಆಲಂಪನಾಹ— ಆದರೆ ಆ ಉದ್ಧಟತನವನ್ನು ನೋಡಿದಿರಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಮ್ಮದ—ಯಾವುದು ?

ಅನೀಜ—ಅದೋ ಅಲ್ಲಿ ನೋಡಿ : ಶಾಹನಶಾಹ ಸುಲತಾನರಾದ ತಮ್ಮ ಸಿಂಹಾಸನಕ್ಕೆ ಬೆನ್ನು ಹಾಕಿ ಕುಳಿತಿದ್ದಾನೆ ಘನಾನಂದ. ತುಂಬಿದ ದರಬಾರಿನಲ್ಲಿ ತಮಗೀರೀತಿ ಅಪಮಾನ ಮಾಡಬಹುದೆ ?

ಮಹಮ್ಮದ—(ಆತ್ಮನೋಡಿ) ವಾಹ ! ವಾಹರೆ ವಾಹ !

ಅನೀಜ—ಏನು, ಈ ಉದ್ಧಟತನವನ್ನು ಮೆಚ್ಚಿದಿರಾ ಸುಲತಾನರು ?

ಮಹಮ್ಮದ—ಸುಜಾನಳ ಮುಖ ನೋಡಿ ಮೆಚ್ಚಿ ವಾಹವಾ ಎಂದೆ ಅನೀಜ! ಘನಾನಂದ ಸಿಂಹಾಸನದ ಕಡೆಗೆ ಬೆನ್ನು ಮಾಡಿ ಕುಳಿತುದೇ ಅನುಕೂಲ ವಾಯಿತು. ಇಲ್ಲವಾದರೆ ಇವನ ಸಂಗೀತದುದ್ದಕ್ಕೂ ಆವಳ ಹಸೀನ್ ಚೆಹರಾ ನೋಡುತ್ತ ಖುಶಿ ಪಡುವ ಮೋಕಾ ಎಲ್ಲಿ ಸಿಗುತ್ತಿತ್ತು ?

ಅನೀಜ—ಜಹಾಂಪನಾಹರ ಮಾತು ನಿಜ. (ಸ್ವಗತ) ನನ್ನ ಉದ್ದೇಶ ಅನಾಯಾಸವಾಗಿ ಈಡೇರಿತು.

ಘನಾನಂದ—(ಸುಲತಾನನನ್ನು ಉದ್ದೇಶಿಸಿ) ಆಲಂಪನಾಹ, ಇಜಾಜತ ಹೋ ತೋ—

ಮಹಮ್ಮದ—(ಹೋಗಿ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತ) ಹೂಂ ಗಾಯನ ಆರಂಭವಾಗಲಿ.

(ಯಮನ್ ರಾಗದಲ್ಲಿ ನೋವ್ ತೋವ್ ಆಲಾಪ ಮಾಡಿ ಘನಾನಂದ ಧ್ರುಪದ ಹಾಡಲು ಪ್ರಾರಂಭಿಸುತ್ತಾನೆ. ತಂಬೂರಿ ನುಡಿಸುತ್ತ ಸುಜಾನ ಗಾಯನದಲ್ಲಿ ಸಾಥ ಮಾಡುತ್ತಿದ್ದಾಳೆ)

ಘನಾನಂದ—(ಧ್ರುಪದ ಯಮನ್, ಜಾತಾಲ)

ಶ್ರೀ ರಾಧಿಕಾರಸಿಕ ಲಾಲ ದೇತ ತಾಲ ತಾನ ಗಾವೆ
ಮೃದಂಗ ಬಜಾವೆ ಘಿಡ ಘಿಡ ಘಿಡ ಘಿಡ
ಘಿಡ ಘಿಡ ಘಿಡ ಘಿಡ ಘಿಡ ಘಿಡ ಶ್ರೀ
॥ ರಾಧಿಕಾ ॥

Sri Vidyabharati Foundation, Bangalore

CC-O. In Public Domain. Digitized by eGangotri

(ಅಂತರಾ)

ಬಾಜತ ಪರನಗತ ಗದಿಗನಧಾ ಗದಿಗನಧಾ
ಧಿತ್ಲಾಂ ಧಿತ್ಲಾಂ ತಾಧಿಲಾಂಗ ತಾಧಿಲಾಂಗ
ಧಿರಕಿಟತಕ ಧಿರಕಿಟತಕ ಧಾತಿ ಧಾತಿ ಧಾ ಶ್ರೀ ॥ರಾಧಿಕಾ॥

(ಸಂಚಾರಿ)

ಸುಘರ ಸುಜಾನ ಶ್ಯಾಮ ಸಕಲಬಿಧ ಪ್ರಶಂಸಿತ
ಬಲೆಜು ಬಲೆಜು ಬ್ಯಖ ಬಾನ ದುಲಾರೇ ಪ್ಯಾರೇಶ್ರೀ ॥ರಾಧಿಕಾ॥

(ಆಭೋಗ)

ದೇತ ಉರಹಾರ ಲೇತ ಉರಲಿಸಟಾಯೇ ಲಾಲ
ಪ್ರೇಮ ಆನಂದ ಜುಗಲ ರೂಪಕೇ ಲೇತ ಬಲಿಹಾರಿ ಶ್ರೀ ॥ರಾಧಿಕಾ॥

(ಗಾಯನ ಮುಗಿದ ಮೇಲೆ ಸುಲತಾನರಾದಿಯಾಗಿ ಸಭಿಕರೆಲ್ಲರ ವಾಹವಾ ಕಾರಗಳು. ಘನಾನಂದ ಮೇಲಕ್ಕೆದ್ದು ರಂಗದ ಮುಂಬದಿಗೆ ಬಂದು ಜೆವರೊರೆಸಿಕೊಳ್ಳುತ್ತ ನಿಲ್ಲುತ್ತಾನೆ. ಸುಜಾನ ಬಳಿಗೆ ಬಂದು ನಲ್ಮೆಯಿಂದ ಭುಜದ ಮೇಲೆ ಕೈಯಿರಿಸುತ್ತಾಳೆ. ತುಂಬಿದಭಿಮಾನದಿಂದ ಆನಂದ ಅವಳತ್ತ ನೋಡುತ್ತಾನೆ. ಸುಜಾನ ಸೆರಗಿನಿಂದ ಅವನ ಜೆವರಿದ ಹಣೆಯನ್ನೊರಸುತ್ತಾಳೆ. ಪ್ರತಿಯಾಗಿ ಅವನು ಅವಳ ಸೇವೆಯನ್ನು ಸ್ವೀಕರಿಸಿದಂತೆ ಅವಳ ಭುಜ ತಟ್ಟುತ್ತಾ ಇನ್ನೊಂದು ಕೈಯಿಂದ ಮಿಸೆ ಹುರಿಮಾಡಿಕೊಳ್ಳುತ್ತಾನೆ.)

ಘನಾನಂದ—ಸುಜಾನ, ಈಗೇನನ್ನುತ್ತೀಯಾ ?

ಸುಜಾನ—ಇಷ್ಟು ಹೊತ್ತೂ ನಾನು ಭೂಮಿಯ ಮೇಲೇ ಇರಲಿಲ್ಲ. ಮೋಡಗಳ ಮೇಲೆ ತೇಲಾಡಿ ಕಾಮನಬಿಲ್ಲಿನ ಮೇಲೇರಿ ಇಳಿದು ಬಂದೆ. ಜೀಯೋ–ಜುಗ ಜುಗ ಜೀಯೋ ಘನಾನಂದಜೀ !

ಘನಾನಂದ—ನಿನ್ನ ತಾರೀಫ್ ಇರಲಿ ಸುಜಾನ ; ದರಬಾರನ್ನು ನೋಡಬೇಕೆಂಬ ನಿನ್ನ ಬಹು ದಿನದ ಬಯಕೆ ಈಡೇರಿತಲ್ಲವೆ – ಇದಕ್ಕೇನು ಹೇಳುವೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಬಾರ ಬಾರ ಶುಕ್ರ ಆದಾ ಕರತೀ ಹೂಂ ನಾಥ. ಇಂದು ನೀವು ಧೈರ್ಯ ಮಾಡದಿದ್ದರೆ–

ಘನಾನಂದ—ಧೈರ್ಯವೇನು ; ಯಾವುದಕ್ಕೂ ಕಾಲ ಕೂಡಿ ಬರಬೇಕು ಪ್ಯಾರೀ. ಯೋಗಾಯೋಗದಿಂದಾಗಿ ಇಂದೇ ನನಗೆ ದರಬಾರಿನಲ್ಲಿ ಹಾಡಲು ಕರೆ ಬಂದಿತು. ಹೀಗಾಗಿ ಹೂವೆತ್ತಿದಂತೆ ನಿನ್ನ ಮನದಿಚ್ಛೆ ಪೂರಯಿಸಿತು.

ಸುಜಾನ—ನಿಜ. (ಆರ್ಥಗರ್ಭಿತವಾಗಿ) ನನ್ನ ಮನದಿಚ್ಛೆ ಪೂರಯಿಸಿತು.

ಘನಾನಂದ—ಇನ್ನು ಬೇಕಾದರೆ ದಿನ ನಿತ್ಯ ನೀನು ದರಬಾರಿನಲ್ಲಿ ಕಾಣಿಸಿಕೊಳ್ಳಬಹುದು.

ಸುಜಾನ—ನನ್ನ ಎಣಿಕೆಯೂ ಅದೇ.

ಘನಾನಂದ—ಅದೇ – ನಾನು ದರಬಾರ ಗವಯ್ಯಾ ಆಗಿ ನೇಮಕಗೊಂಡ ಮೇಲೆ–

ಮಹಮ್ಮದ—ಘನಾನಂದ, ಬಾ ಹೀಗೆ.

ಘನಾನಂದ—ನೀನೂ ಬಾ ಸುಜಾನ. ಅವರು ಕೊಡುವ ಬಹುಮಾನವನ್ನು ಜೊತೆಯಾಗಿಯೇ ಸ್ವೀಕರಿಸೋಣ.

ಸುಜಾನ—ಆಗಲಿ. (ಇಬ್ಬರೂ ಹೋಗಿ ಸುಲತಾನನಿಗೆ ಸಲಾಮು ಮಾಡಿ ನಿಲ್ಲುವರು.)

ಘನಾನಂದ—ಆದಾಬ ಅರಜ ಹೈ ಖುದಾವಂದ್ – ಆದಾಬ ಅರಜ್....ನನ್ನ ಸಂಗೀತದಿಂದ ತಮ್ಮ ಮನಸ್ಸು ಪ್ರಸನ್ನಗೊಂಡಿದೆಯೆಂಬುದು ತಮ್ಮ ಮುಖದ ಮೇಲೆಯೇ ಕಾಣುತ್ತಿದೆ.

ಮಹಮ್ಮದ—ನಿನ್ನ ಸಂಗೀತ ಲಾಜವಾಬ್ ಘನಾನಂದ ; ಹಾಗೆಯೇ ಸುಜಾನಳ ಸೌಂದರ್ಯವೂ ಲಾಜವಾಬ್ !

ಘನಾನಂದ :—(ಗಡುಸಾಗಿ) ಆಲಂಪನಾಹ, ತಾವು ಹೀಗೆಲ್ಲ ಮಾತನಾಡ ಕೂಡದು—

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಮ್ಮದ—(ರೇಗಿ, ಕೂಗಿ) ಖಾಮೋಶ್ ! ದರಬಾರಿನಲ್ಲಿ ನನಗೆ ಬೆನ್ನು ಹಾಕಿ ಕುಳಿತು ಹಾಡಿ ಅವಮಾನಗೊಳಿಸಿದುದಲ್ಲದೆ ಈಗ ಹೀಗೆ ಉದ್ಧಟತನದಿಂದ ಮಾತನಾಡುವೆಯಾ ? ತೆಗೆದುಕೋ ಈ ಹಣದ ಥೈಲಿಯನ್ನು. (ಹಣದ ಚೀಲವನ್ನೆಸೆಯುತ್ತಾನೆ. ಅದು ಘನಾನಂದನ ಪಾದದೆಡೆ ಬೀಳುತ್ತದೆ) ಇದು ನಿನ್ನ ಸಂಗೀತಕ್ಕೆ ಸಂಭಾವನೆ .... ಇನ್ನು ದರಬಾರಿನಲ್ಲಿ ಈ ಸುಲತಾನ ಮಹಮ್ಮದ ಶಾಹನನ್ನು, ಅವಮಾನಗೊಳಿಸಿದ್ದಕ್ಕಾಗಿ ನಿನಗೆ ಸಂಭಾವನೆ.... ಗಡೀಪಾರು !!

ಘನಾನಂದ—ಆಲಂಪನಾಹ—

ಮಹಮ್ಮದ—ನಾಳಿನ ಸಾಯಂಕಾಲದೊಳಗಾಗಿ ನೀನು ದೆಹಲಿ ಶಹರಿನ ಗಡಿದಾಟಿ ಹೋಗಿರಬೇಕು. ಈ ಆಜ್ಞೆಯನ್ನು ಮೀರಿದರೆ ದೇಹಾಂತ ಶಿಕ್ಷೆ.

ಘನಾನಂದ—ಓ ಸುಜಾನ !

ಮಹಮ್ಮದ—ಸುಜಾನಳ ಚಿಂತೆ ನಿನಗೆ ಬೇಡ. ನೀನು ದೆಹಲಿಯನ್ನು ತೊರೆದು ದೇಶಾಂತರ ಹೊರಟುಹೋದ ಮೇಲೆ ಅವಳು ಅನಾಥಳಾಗದಂತೆ ನಾವವಳನ್ನು ನಮ್ಮ ಜನಾನಖಾನೆಗೆ ಸೇರಿಸಿಕೊಳ್ಳುತ್ತೇವೆ.

ಘನಾನಂದ—ಹೇ ರಾಮ !

ಮಹಮ್ಮದ—ಯಾರಲ್ಲಿ ? ಇವನನ್ನು ಎಳೆದುಕೊಂಡು ಹೋಗಿರಿ.

ಘನಾನಂದ—ಸುಜಾನ....ಸುಜಾನ ! ಸುಜಾನ.... (ಪ್ರೇಕ್ಷಕನಾಗಿ ಕುಳಿತಿದ್ದ ದೂತ ಎದ್ದು ಹೋಗಿ ಘನಾನಂದನನ್ನು ಎಳೆದುಕೊಂಡು ನಡೆಯಲು ಅನೀಜನೂ ಅವರೊಂದಿಗೆ ಹೋಗುತ್ತಾನೆ.)

ಮಹಮ್ಮದ—(ರಸಿಕತೆಯಿಂದ) ಸುಜಾನ !

ಸುಜಾನ—(ನಲ್ಮೆಯಿಂದ) ಆಲಂಪನಾಹ ! (ಬಳಿಗೆ ಬಂದು ವಿನಯದಿಂದ ಮುಜುರೆ ಮಾಡುವಳು. ಆಡ್ಯತೆಯಿಂದ ಗಡ್ಡ ನೀವಿಕೊಳ್ಳುತ್ತ ಮಹಮ್ಮದಶಾಹ ಅವಳತ್ತ ನೋಡುತ್ತಿರುವಂತೆಯೇ ದೀಪಗಳು ಮಂದವಾಗುತ್ತ ರಸ್ತೆಯ ತೆರೆಯಿಳಿಯುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ : ೮

ರಫೀಕ ಹಾಡುತ್ತ ಹೊರಟಿದ್ದಾನೆ.

"ಮಥುರಾ ನ ಜಾವೇ ಮೋರಾ ಕಾನ್ಹಾ !

ಮಥುರಾ ನ ಮನೇ ಕರೋ ಗೋಪೀಯೋ...."

ಪೂರ್ವೀ ರಾಗ, ತೀನ ತಾಲದಲ್ಲಿ ಹಾಡಲು ಯತ್ನಿಸುತ್ತಾನೆ, ಆದರೆ ಅಲ್ಲಲ್ಲಿ ತಪ್ಪುತ್ತಿದೆ. ಅಲ್ಲದೆ,—)

ರಫೀಕ :— ಅರ್ಥವೇ ಆಗುವುದಿಲ್ಲ ಈ ಚೀಜಿನದು. ಅದೇನು ಹಾಳು ಬ್ರಿಜ ಭಾಷೆಯೋ ಇದು: ಮಥುರಾ ನ ಜಾವೇ ಮೋರಾ ಕಾನಾ — (ತನ್ನ ಕಿವಿ ಹಿಡಿದುಕೊಂಡು) ಆರೆ? ಕಾನ ಮಥುರಾ ಕೈಸೇ ಜಾಯೆಗಾ? ಕಿವಿ ಮಥುರೆಗೆ ಹೇಗೆ ಹೋಗುವುದು? ಮನೇಕರೋ ಗೋಪೀ ಓ....ಗೋಪಿ ತಡೆದು ನಿಲ್ಲಿಸಬೇಕಂತೆ, ಕಿವಿಯನ್ನು !! ಎಲೇ ಕಿವಿಯೇ ಹೋಗಬೇಡ— (ಹೇಳುತ್ತ ಅಭಿನಯಿಸುತ್ತ ಒಂದು ಪಕ್ಕಕ್ಕೆ ನಡೆಯುತ್ತಾನೆ.) ಮಥುರೆಗೆ ಹೋಗಬೇಡ ಕಿವಿಯೆ— (ಯಾರನ್ನೋ ಕಂಡು ನಿಂತು ಒಂದು ಹೆಜ್ಜೆ ಹಿಂದಕ್ಕೆ ಸರಿಯುತ್ತಾನೆ) ಕಿವಿಯೇ ಅಲ್ಲ, ಕವಿಯೆ ! (ಘನಾನಂದ ಪ್ರವೇಶಿಸುತ್ತಾನೆ)

ಘನಾನಂದ—ಯಾರಪ್ಪಾ ನನ್ನನ್ನು ತಡೆಯುವವರು ?

ರಫೀಕ—ಇಲ್ಲ ಬಿಡಿ; ಯಾರೂ ಇಲ್ಲ. ಸುಮ್ಮನೆ ನನ್ನಷ್ಟಕ್ಕೆ ನಾನು ಹಾಡಿ ಕೊಳ್ಳುತ್ತಿದ್ದೆ....ಆದರೆ ಬರುತ್ತಿಲ್ಲ, ಚೀಜಿನ ಅರ್ಥವೂ ಆಗುತ್ತಿಲ್ಲ.

ಘನಾನಂದ—ಎಲ್ಲಿ, ಯಾವ ಚೀಜದು ಹಾಡು ?

ರಫೀಕ—(ಹಾಡುತ್ತಾನೆ—ಕೆಟ್ಟದಾಗಿ) ಮಥುರಾ ನ ಜಾವೇ ಮೋರಾ ಕಾನಾ-

ಘನಾನಂದ—ಹಾಗಲ್ಲ: ಹೀಗೆ – (ಸರಿಯಾಗಿ ಹಾಡಿ ತೋರಿಸುತ್ತಾನೆ.

ರಫೀಕ—ಹಾಂ, ಹೀಗೆ ಹಾಡಬೇಕು. ಇನ್ನು ಇದರ ಅರ್ಥವೇನು ?

ಘನಾನಂದ—(ತನ್ನಷ್ಟಕ್ಕೆಂಬಂತೆ) ನನ್ನ ಕೃಷ್ಣ ಮಥುರೆಗೆ ಹೊರಟಿದ್ದಾನೆ. ಅಯ್ಯೋ ಗೋಪಿಯರೇ ಅವನನ್ನು ಹೋಗಗೊಡಬೇಡಿರಿ, ತಡೆದು ನಿಲ್ಲಿಸಿರಿ. (ಹಾಡಿದಂತೆ) ಅದಲ್ಲದೆ ಅನ್ಯತಾಗತಿಯಿಲ್ಲವೂ ಇಲ್ಲ.

Sri Vidyaprasanna Book Centre, Bangalore

CC-O. In Public Domain. Digitized by eGangotri

ರಫೀಕ— ನೀವಿನ್ನು ಮಥುರೆಗೆ ಹೋಗುವಿರಾ?

ಘನಾನಂದ—ಆಹುದು.

ರಫೀಕ—ನಿಮ್ಮನ್ನು ತಡೆ ಎನ್ನುವ ಗೋಪಿ ಯಾರೂ ಇಲ್ಲವೆ?

ಘನಾನಂದ—ಇಲ್ಲ; ನಡೆ ಎನ್ನುವ ಮುಂಗೋಪಿ ಸುಲತಾನ ಮಾತ್ರ ಇದ್ದಾನೆ.

ರಫೀಕ—(ಗಾಬರಿಯಿಂದ) ಹಾಗೆನ್ನಬೇಡಿರಿ ಘನಾನಂದಜೀ, ಯಾರಾದರೂ ಕೇಳಿಸಿಕೊಂಡಾರು.

ಘನಾನಂದ—ಕೇಳಿಸಿಕೊಂಡರೇನು? ಸುಲತಾನನಿಗೆ ಹೇಳುವರು; ಅವನು ನನಗೆ ದೇಹಾಂತ ಶಿಕ್ಷೆ ಕೊಡುವ: ಅಷ್ಟೇ – ಅಲ್ಲವೆ?

ರಫೀಕ—ತೋಬಾ ತೋಬಾ; ನಿಮಗೆ ಯಾವ ಅಪಾಯವೂ ಆಗದಂತೆ ದಿಲ್ಲಿಯಿಂದ ನಿಮ್ಮನ್ನು ನೀವೆಲ್ಲಿಗೆ ಹೋಗಬೇಕೆಂದರಲ್ಲಿಗೆ ಸಲಾಮತಿನಿಂದ ಕಳಿಸುವದಕ್ಕಾಗಿ ಕುದುರೆಯ ಗಾಡಿಯ ಇಂತಜಾಮು ಮಾಡಲು ನನಗೆ ಹೇಳಿದ್ದಾರೆ ನಮ್ಮ ಮಾಲಿಕರು.

ಘನಾನಂದ—ಯಾರು, ಅನೀಜಖಾನನೆ? ನನ್ನ ಸುರಕ್ಷಿತತೆಯ ಬಗೆಗೆ ಅವನಿಗೇಕೆ ಆಸ್ಥೆ? ನನ್ನನ್ನು ಕೊಲ್ಲಲೆಂದು ಖಡ್ಗ ಹಿಡಿದು ಬಂದಿದ್ದ ನೊಂದು ದಿನ!

ರಫೀಕ—ನಿಮಗೆ ಎಂದೂ ಕೇಡಾಗದಂತೆ ನೋಡಿಕೊಳ್ಳುತ್ತೇನೆ ಎಂದು ನಿಮ್ಮ ಬೀಬಿಗೆ ಅವರು ಮಾತು ಕೊಟ್ಟಿದ್ದಾರೆ.

ಘನಾನಂದ—(ಕನಲಿ) ನನ್ನ ಬೀಬಿಗೆ....ಇವನು ಮಾತು ಕೊಡುವುದೆ?

ರಫೀಕ—ಹೌದು. ಕಲಾವತೀ ದೇವೀಜಿ ನಮ್ಮ ಸರದಾರ ಅನೀಜಖಾನರ ರಾಖೀ ಬೆಹೆನ್; ಸುಜಾನಳ ಪಂಜೆಯಿಂದ ನಿಮ್ಮನ್ನು ಪಾರು ಮಾಡುವುದಕ್ಕಾಗಿಯೇ ನಮ್ಮ ಮಾಲಿಕರು ದರಬಾರಿನಲ್ಲಿ ನಿಮ್ಮ ಗಾಯನದ ಇಂತಜಾಮು ಮಾಡಿಸಿದರು. ಆದರಿಂದ ಅನಾಯಾಸವಾಗಿ ಸುಜಾನಳು ಸುಲತಾನರ ಕಣ್ಣಿಗೆ ಬಿದ್ದಳು.

ಘನಾನಂದ—(ಎಲ್ಲ ಒಮ್ಮೆಲೆ ಸ್ಪಷ್ಟವಾಗಿ) ಓಹೋ: ಇದೆಲ್ಲ ಷಡ್ಯಂತ್ರ ಕಲಾವತಿಯದೊ? ಇದಕ್ಕಾಗಿ ಅನೀಜಖಾನನ ನೆರವನ್ನು ಪಡೆದಳೋ:

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನಗಳಿಂದ ತಿರಸ್ಕರಿಸಲ್ಪಟ್ಟ ಭಗ್ನಪ್ರಣಯಿಯ ನೆರವನ್ನು ! ಇವಳವನಿಗೆ ರಾಖೀ ಸಹೋದರಿ ! ರಾಖೀ ಸಹೋದರಿಯೋ ರಖೀ ಸಹೋದರಿಯೋ....ಬಲ್ಲವರಾರು ! ಸ್ತ್ರಿಯಶ್ಚರಿತ್ರಂ ದೇವೋ ನ ಜಾನಾತಿ ಕುತೋ ಮನುಷ್ಯಃ ! ....ಅನೀಜ... ಕಲಾವತಿ.... ! ..... ನಮ್ಮನ್ನಗಲಿಸಲು ಇವರಿಬ್ಬರು ಒಂದಾದರೋ ? ಆಗಲಿ. ಸುಜಾನ ಘನಾನಂದರ ಪ್ರೇಮ ಬಂಧನ ಜನ್ಮಜನ್ಮಾಂತರದ್ದೆಂದು ಇವರಿಗೆ ತೋರಿಸಿ ಕೊಡುತ್ತೇನೆ....(ರಫೀಕನಿಗೆ) ಮಿಂಯಾ, ನಿನಗೆ ಇದೀಗ ಆ ಖಯಾಲ ಹೇಳಿಕೊಟ್ಟಿ. ಹಾಗೆಯೇ ಒಂದು ಗಜಲ ಕಲಿಸಿಕೊಡ ಕೊಡುತ್ತೇನೆ, ಆಗಬಹುದೆ ?

ರಫೀಕ—ಓಹೋ, ನಿಮ್ಮ ಶಾಗಿರ್ದ ಆಗುವ ಮೋಕಾ ಸಿಕ್ಕರೆ ಬೇಡವೆನ್ನುತ್ತೇನೆಯೆ ನಾನು ?

ಘನಾನಂದ—ಸರಿ. (ಆಲೋಚಿಸಿ ಕವಿತೆ ರಚಿಸಿ ಹೇಳಿಕೊಡತೊಡಗುತ್ತಾನೆ, ರಫೀಕ ಪುನರುಚ್ಚರಿಸುತ್ತಾನೆ.)

ಮಥುರೆಗೆ ಪೋಗುವಾ ಬಾರೆ ಸಖಿ
ನೀನು ಜೊತೆಗಿರೆ ನಾನೇ ಪರಮ ಸುಖಿ ||
ಮದನ ಮೋಹನನಾ ದರುಶನಕೆಂದು
ಆ ಮೋಹ ಮದನಾ ತೊರೆಯೇ ನೀನಿಂದು ||
ಕೆಂಪು ಕೋಟೆಯ ಬಳಿಯುದ್ಯಾನದಲ್ಲಿ
ಮಧ್ಯ ರಾತ್ರಿಗೆ ಬಾ ನಾನಿಹೆನಲ್ಲಿ ||
ಪೋಗುವಾ ದಿಲ್ಲಿಯಿಂದೆಲ್ಲಿಗೆ ನಾವು
ಪ್ರೇಮ ರಾಜ್ಯವು ಮಥುರೆಯು ನಮ್ಮ ತಾವು ||

ರಫೀಕ—ಸರಿ. ಒಳ್ಳೆಯ ಸುಂದರವಾದ ಗಜಲು. ಎಲ್ಲಿ ಬೇಕೆಂದರಲ್ಲಿ ಹಾಡುತ್ತ ಹೋಗುತ್ತೇನೆ.

ಘನಾನಂದ—ಅಯ್ಯೋ, ಹಾಗೆ ಮಾತ್ರ ಮಾಡಬೇಡ ; ಇನ್ನಾರೂ ಇದನ್ನು ಕೇಳಬಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಫೀಕ—ಇದೇನು ಹೇಳುತ್ತಿದ್ದೀರಿ ಘನಾನಂದಜೀ? ಇಂತಹ ಲಾಜವಾಬ ಗಜಲನ್ನು –

ಘನಾನಂದ—ಇದು ಲಾಜವಾಬ ಆಗಿರಬಹುದು; ಆದರೆ ನನಗಿದಕ್ಕೆ ಜವಾಬು ಬೇಕು.

ರಫೀಕ—ಯಾರಿಂದ ?

ಘನಾನಂದ—ಸುಜಾನಳಿಂದ.

ರಫೀಕ—(ಬೆದರಿ) ಅವಳೆದುರು ಹೋಗಿ ಹಾಡಬೇಕೇ ಇದನ್ನು ?

ಘನಾನಂದ—ಅನೀಜಖಾನರ ಸೇವಕನಾದ ನಿನಗೆ ಸುಲತಾನರ ದರಬಾರಿನಲ್ಲಿ, ದಿವಾನಖಾನೆಯಲ್ಲಿ, ಜನಾನ ಖಾನೆಯಲ್ಲಿ—ಎಲ್ಲಿ ಬೇಕೆಂದರಲ್ಲಿ ಪ್ರವೇಶವುಂಟು. ಸುಜಾನಳನ್ನು ಗುಟ್ಟಾಗಿ ಭೆಟ್ಟಿಯಾಗಿ ಈ ಗಜಲನ್ನವಳ ಮುಂದೆ ಹಾಡಿ ಅವಳು ಪ್ರತಿಯಾಗಿ ಹಾಡುವ ಜವಾಬ ಗಜಲನ್ನು ನನಗೆ ಬಂದು ಹೇಳುವೆಯಾ ?

ರಫೀಕ—ಹೂಂ, ಇದು ಗೊತ್ತಾದರೆ ಸುಲತಾನರು ನನ್ನ ತಲೆಯನ್ನೇ ತೆಗೆಸಿಬಿಡಲಿ; ಇಲ್ಲವೆ ಸರದಾರ ಅನೀಜಖಾನರು ನನ್ನನ್ನು ಕೆಲಸದಿಂದ ಕಿತ್ತೊಗೆಯಲಿ.

ಘನಾನಂದ—ಗಜಲಿನ ಅರ್ಥ ಸುಜಾನಳಿಗಲ್ಲದೆ ಬೇರಾರಿಗೂ ಗೊತ್ತಾಗ, ವುದೇ ಇಲ್ಲ; ನೀನು ಹೆದರಬೇಡ. ಆಲ್ಲದೆ, ಇಗೋ, ಈಗಲೇ ನಿನಗೀ ಇನಾಮು !

(ಹಿಂದೊಮ್ಮೆ ಸದಾರಂಗ ತನ್ನ ಕೈಗೆ ತೊಡಿಸಿದ್ದ ಕಂಕಣವನ್ನು ತೆಗೆದು ರಫೀಕನ ಕೈಗಿಡುತ್ತಾನೆ. ಅವನ ಕಂಗಳಲ್ಲಿ ಆಸೆ ಮೂಡುತ್ತದೆ.) ಹೋಗು, ಸಂಜೆಯಾಗುತ್ತ ಬಂದಿತು. ಆವಳಿಂದ ಕೂಡಲೇ ಜವಾಬು ಹೇಳಿಸಿಕೊಂಡು ಬಾ.

ರಫೀಕ—ಬಹೋತ ಅಚ್ಛಾ ಸಾಹಬ್. ಆದರೆ ನಿಮ್ಮನ್ನೆಲ್ಲಿ ನೋಡುವುದು ? ಸುಜಾನಳು ಜನಾನಖಾನೆಯಲ್ಲಿದ್ದಾಳೆ, ಅವಳ ಮನೆಗೆ ಬೀಗ. ಇನ್ನು ಕಲಾವತೀದೇವೀಜೀ ಎಂದೋ ತವರುಮನೆಗೆ ಹೊರಟು ಹೋದರು. ಹೀಗಾಗಿ ನಿಮ್ಮ ಮನೆಗೂ ಬೀಗ.

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಾನಂದ—ನಾನೀಗಲೇ ಹೋಗಿ ಕೆಂಪುಕೋಟೆಯ ಬಳಿಯ ಉದ್ಯಾನದಲ್ಲಿ ಕುಳಿತಿರುತ್ತೇನೆ. ನೀನಲ್ಲಿಗೆ ಬಾ. (ಹೋಗುತ್ತಾನೆ. ಕೆಲ ಹೊತ್ತು ಏನನ್ನೋ ಆಲೋಚಿಸಿ ರಫೀಕ ಇನ್ನೊಂದು ದಿಕ್ಕಿನಲ್ಲಿ ನಿಷ್ಕ್ರಮಿಸುತ್ತಾನೆ. ಮಧ್ಯದ ತೆರೆಗಳು ಸರಿದು ಜೆಂದಿರನ ಬೆಳಕಿನಲ್ಲಿ ಉದ್ಯಾನದ ದೃಶ್ಯ ಕಾಣುವುದು.

ದೃಶ್ಯ ೯

ಘನಾನಂದ ಅತ್ತಿತ್ತ ಆಡ್ಯಾಡುತ್ತಿದ್ದಾನೆ. ಮೊಗಲ ಸುಲತಾನಾ ವೇಷದಲ್ಲಿರುವ ಸುಜಾನ ಪ್ರವೇಶಿಸುತ್ತಾಳೆ. ಅವಳನ್ನು ಕಂಡೊಡನೆ ಘನಾನಂದ ಓಡಿ ಬಂದು ಅವಳ ಕೈಗಳೆರಡನ್ನೂ ಹಿಡಿದುಕೊಳ್ಳುತ್ತಾನೆ)

ಘನಾನಂದ—ಸುಜಾನ!

ಸುಜಾನ—ಶ್ ಶ್....ಮೆಲ್ಲಗೆ ಮಾತನಾಡಿರಿ. ಇಲ್ಲಿಗೇಕೆ ಬಂದಿರಿ ಘನಾನಂದ? ಇಂದೇ ಸಾಯಂಕಾಲದೊಳಗಾಗಿ ನೀವು ದೆಹಲಿಯ ಗಡಿಯಿಂದಾಚೆಗೆ ಹೋಗಬೇಕಿತ್ತು. ಆ ಆಜ್ಞೆಯನ್ನು ಮೀರಿ ಮರಣ ದಂಡನೆಯನ್ನು ತಂದುಕೊಳ್ಳಬೇಕೆಂದಿರುವಿರೇನು? ಅದೂ ಸಾಲದೆ ಮಧ್ಯರಾತ್ರಿಯಲ್ಲಿ ಈ ಜನಾನಖಾನೆಯ ಆವರಣದಲ್ಲಿ ನನ್ನನ್ನು ನೋಡಲು ಗುಟ್ಟಾಗಿ ಬಂದಿರುವಿರಲ್ಲ; ನಿಮಗೇನು ಜೀವ ಬೇಡಾಗಿದೆಯೆ?

ಘನಾನಂದ—ಅದನ್ನು ಹೇಳಬೇಕೇ ಸುಜಾನ? ನೀನಿಲ್ಲದ ಬಾಳಿಗಿಂತ ಮರಣವೇ ಮೇಲಲ್ಲವೆ? ಅಂ? ಇದೇನು ಸುಜಾನ? ನಾ ತಂದುಕೊಟ್ಟ ನಿನ್ನ ಆ ಗುಲಾಲು ಬಣ್ಣದ ಸೀರೆಯುಟ್ಟು ಬಾರದೆ ಇದೇನು ಈ ಸಲ್ವಾರ್ — ಖಮೀಜ ತೊಟ್ಟು ಬಂದಿರುವೆ? ನನಗಿದು ಇಷ್ಟವಿಲ್ಲ ವೆಂಬುದು ಗೊತ್ತಿಲ್ಲವೆ?

ಸುಜಾನ—(ನಕ್ಕು) ಆದರೆ ಈ ವೇಶಾಕು ಸುಲತಾನರಿಗೆ ತುಂಬ ಇಷ್ಟ.

ಘನಾನಂದ—ಅಂ? ಸುಲತಾನರಿಗೆ! ಓ, ಈಗಾಗಲೇ ಆವರ ಇಷ್ಟಾನಿಷ್ಟ ಗಳಿಗೆ ಹೊಂದಿಕೊಂಡುಬಿಟ್ಟಿಯೊ? ಸರಿ — ಈಗೆಲ್ಲವೂ ಅರ್ಥವಾಗುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ತಪ್ಪು ತಿಳಿಯಬೇಡಿರಿ ಘನಾನಂದ. ಒಬ್ಬ ನಿಸ್ಸಹಾಯಕಳಾದ ಬಾಲೆ ಇನ್ನೇನು ತಾನೆ ಮಾಡಿಯಾಳು ! ಈಗ ನಿಮ್ಮನ್ನಿಲ್ಲಿ ನೋಡು. ವುದಕ್ಕೆ ಕೂಡ ಎಷ್ಟೊಂದು ಗುಟ್ಟಾಗಿ ಬರಬೇಕಾಯಿತು ; ಬಾರದಿದ್ದರೆ ಜೀವಕ್ಕೇನು ಅಪಾಯ ಮಾಡಿಕೊಳ್ಳುವಿರೋ ಎಂಬ ಭಯದಿಂದ ಬಂದೆ. ಸಾಕೆನ್ನು — ಕೂಡಲೇ ಹೊರಟುಹೋಗಿರಿ ಘನಾನಂದ. ಇಲ್ಲವಾದರೆ ಇಬ್ಬರ ಜೀವಕ್ಕೂ ಗಂಡಾಂತರ !

ಘನಾನಂದ—ನನ್ನ ಜೀವಕ್ಕಿಂತ ನಿನ್ನ ಜೀವದ್ದೇ ನಿನಗೆ ಹೆಚ್ಚಿನ ಚಿಂತೆ ಯೆಂಬಂತೆ ತೋರುತ್ತಿದೆಯಲ್ಲ ಸುಜಾನ.

ಸುಜಾನ— ಹಾಗೇನಿಲ್ಲ. ನೀವಿಲ್ಲಿಂದ ಸುರಕ್ಷಿತವಾಗಿ ಹೊರಟು ಹೋಗ ಬೇಕೆಂಬುದೇ ನನ್ನ ಚಿಂತೆ. ನೀವೆಷ್ಟೆಂದರೂ ನನ್ನ ಪೂಜ್ಯ ಗುರುಗಳು.... ನಿಮ್ಮಿಂದಾಗಿ ಧ್ರುಪದ ಗಾಯನ ಪರಂಪರೆ ಉಳಿಯಬೇಕು. ನೀವು ಶತಾಯುಷಿಗಳಾಗಬೇಕು. ಚಿರಾಯುವಾಗಬೇಕು.

ಘನಾನಂದ—(ವ್ಯಂಗವಾಗಿ) ಶಿಷ್ಯಳ ಈ ಆಶೀರ್ವಾದಕ್ಕಾಗಿ ಗುರು ಕೃತಜ್ಞ. ನಾನಿನ್ನು ಬರುತ್ತೇನೆ. ಸುಜಾನ, ನಿನ್ನನ್ನು ದರಬಾರಿಗೆ ಕರೆದು ಕೊಂಡು ಬಂದ ದಿನ ನಾನೆಂದೆನಲ್ಲ : ಹೂವೆತ್ತಿದಂತೆ ನಿನ್ನ ಕೆಲಸ ವಾಯಿತೆಂದು ; ಅಂದು ನಾನೆತ್ತಿದುದು ಹೂವಲ್ಲ ಹಾವೆಂದು ಈಗ ಅರಿತುಕೊಂಡೆ. ನಿನ್ನನ್ನು ಮಹಮ್ಮದಶಾಹನ ಕಣ್ಣಿಗೆ ಬೀಳದಂತೆ ನೋಡಿಕೊಳ್ಳದೆ ನಾನಾಗಿ ಅವನ ಆಸ್ಥಾನಕ್ಕೆ ಕರೆದುಕೊಂಡು ಹೋದುದು ನನ್ನದೇ ತಪ್ಪಾಯಿತು.

ಅನೀಜ—(ಪ್ರವೇಶಿಸುತ್ತ) ಅದು ನಿನ್ನ ಮೂರ್ಖತನ ಘನಾನಂದ !

ಸುಜಾನ—ಅಂ ? ಅನೀಜ !

ಅನೀಜ—ನೀನು ಹೇಗಿದ್ದರೂ ದರಬಾರಿನ ಮುಖ್ಯಮುನಶಿ, ಎಂದಾದರೊಂದು ದಿನ ನಿನ್ನ ಮುಖಾಂತರ ಸುಲತಾನರ ಸಮ್ಮುಖಕ್ಕೆ ಪ್ರವೇಶ ದೊರಕಿಸ ಬಹುದೆಂಬ ಕಾರಣಕ್ಕಾಗಿ ನಿನ್ನ ಸ್ನೇಹ ಮಾಡಿದ್ದಳಿವಳು. ಅದನ್ನರಿ ಯದೆ ಹೋದ ಮೂರ್ಖ ನೀನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಅನೀಜ !

ಅನೀಜ—ಬಾ ಘನಾನಂದ, ನಿನ್ನನ್ನು ಇವಳ ಕೈಯಿಂದ ಪಾರುಮಾಡಿ ಒಡೆದು ಹೋದ ನಿನ್ನ ಸಂಸಾರವನ್ನು ಒಂದುಗೂಡಿಸುತ್ತೇನೆಂದು ನನ್ನ ತಂಗಿಗೆ ಮಾತು ಕೊಟ್ಟಿದ್ದೆ. ಅದು ಸಾಧ್ಯವಾಗಲಿಲ್ಲ. ಕೊನೆಯ ಪಕ್ಷ ನಿನ್ನ ಪ್ರಾಣಕ್ಕೇನಾದರೂ ಆಪತ್ತೊದಗದಂತೆ ಸುರಕ್ಷಿತವಾಗಿ ನಿನ್ನನ್ನು ದೆಹಲಿಯಿಂದಾಚೆಗೆ ಕಳಿಸಲು ವ್ಯವಸ್ಥೆ ಮಾಡಿದ್ದೇನೆ. ಹೊರಡಿನ್ನು : ನಿನಗಾಗಿ ಕುದುರೆ ಗಾಡಿಯೊಂದನ್ನು ತರಿಸಿದ್ದೇನೆ. ಇನ್ನು ಬಾ — ನನ್ನ ಮಾತು ಕೇಳು ಘನಾನಂದ.

ಘನಾನಂದ—ಬರಲೆ ಸುಜಾನ ? ಮಥುರೆಗೆ ಹೋಗಿ ಬೃಂದಾವನದಲ್ಲಿ ಕುಳಿತು ನಿನ್ನ ವಿರಹವನ್ನು ಮರೆಯಲು ಪ್ರಯತ್ನಿಸುತ್ತೇನೆ....ಏನು ಗತಿಯಿದು ನನಗೆ ದೇವರೇ ; ಹಿಂದೊಮ್ಮೆ ಸುಜಾನಳನ್ನಪ್ಪಿಕೊಂಡಾಗ ಇವಳ ಕೊರಳ ಹಾರದ ಮುತ್ತುಗಳೇ ನಮ್ಮ ನಡುವಿನ ಪರ್ವತ ಗಳೇನೋ ಎನ್ನಿಸುತ್ತಿದ್ದುವು : ಅಷ್ಟು ಮಾತ್ರದ ಅಗಲಿಕೆಯನ್ನೂ ಸಹಿಸಲಾಗುತ್ತಿರಲಿಲ್ಲ. ಆದರೆ ಇನ್ನು — ಮಥುರೆಗೆ ಹೋದ ಮೇಲೆ ನಮ್ಮಿಬ್ಬರ ಮಧ್ಯೆ ನಿಜವಾದ ಪರ್ವತಗಳೇ ಆಡ್ಡ ನಿಲ್ಲುವುವು !

ಸುಜಾನ— ವಾರೆ ವಾಹ ; ಸುಂದರವಾದ ಕವಿತೆ ! ಇದನ್ನೇ ಹಾಡುತ್ತ ಹೋಗಿ....(ವ್ಯಂಗ್ಯವಾಗಿ, " ಆಗ ಕೊರಳ ಹಾರವೇ ಪರ್ವತವೆನಿಸು ತ್ತಿತ್ತು....." ,

ಘನಾನಂದ—.....ತಬ್ ಹಾರ ಪಹಾರಸೇ ಲಾಗತಹೇ —

ಸುಜಾನ—"ಈಗ ನಿಜವಾದ ಪರ್ವತವೇ ನಿಮ್ಮಿಬ್ಬರ ನಡುವೆ"—

ಘನಾನಂದ—ಅಬ ಆನಿಕೇ ಬೀಚ ಪಹಾರ ಪರೇ —

ಸುಜಾನ—(ನಗುತ್ತ) ಸುಂದರವಾಗಿದೆ. ಇದನ್ನೇ ಹಾಡುತ್ತ ಹೋಗಿ — (ನಗುತ್ತ ಹೊರಟು ಹೋಗುವಳು)

ಅನೀಜ—ಹೊರಡಿನ್ನು ಘನಾನಂದ — ಗಾಡಿ ಸಿದ್ಧವಾಗಿದೆ.

ಘನಾನಂದ—ಆಗಲಿ....ನಿನ್ನ ರಾಖೀ ಸಹೋದರಿಯ ಯೋಗಕ್ಷೇಮ ನೋಡಿಕೋ ಅನೀಜ, ನಾನಿನ್ನು ಮಥುರೆಗೆ ತೆರಳುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೀಜ—ಕಲಾವತಿಗೆ ಬಿದಾಯ ಹೇಳುವುದಿಲ್ಲವೆ ಆನಂದ ? ನಿನ್ನ ಭಾವನ ಮನೆಗೆ ಹೋಗೋಣ.

ಘನಾನಂದ—ಬೇಡ ಅನೀಜ....ನಿನ್ನೊಂದಿಗೆ ಸೇರಿ ನನ್ನ ಬೆನ್ನ ಹಿಂದೆ ಇಷ್ಟೆಲ್ಲ ಷಡ್ಯಂತ್ರ ರಚಿಸಿದ ಆವಳ ಮುಖವನ್ನು ಕೂಡ ನೋಡಲು ನನಗಿಚ್ಛೆಯಿಲ್ಲ.

ಅನೀಜ—ಅವಳು ನನ್ನ ಸಹೋದರಿ ಘನಾನಂದ, ನನ್ನನ್ನು ನಂಬು—

ಘನಾನಂದ—ಹಾಗಿದ್ದರೆ – ಅವಳು ಸಾಧ್ವಿಯಾಗಿದ್ದರೆ– ಇಷ್ಟೆಲ್ಲ ಅಧೋಗತಿಗಿಳಿದ ನಾನು ಆವಳಿಗೆ ಮುಖ ತೋರಿಸಲಾರೆ.... (ತನ್ನೊಳಗೆ) ಕಲಾವತಿಯನ್ನಿಷ್ಟು ಸುಲಭವಾಗಿ ತೊರೆದುಬಿಟ್ಟೆ ..... (ಮಾತನಾಡುತ್ತ ಮುಂದಕ್ಕೆ ಬರುತ್ತಾನೆ) ಆದರೆ ಸುಜಾನಳನ್ನಗಲುವುದಕ್ಕೆ ನನಗೇಕೆ ಇನಿತೊಂದು ವ್ಯಥೆಯಾಗುತ್ತಿದೆ ? (ಆವನ ಬೆನ್ನ ಹಿಂದೆ ರಸ್ತೆಯ ಪರದೆಯಿಳಿಯುತ್ತದೆ)

ದೃಶ್ಯ ೧೦

ಘನಾನಂದ—ನಿಜ, ಅವಳು ಹೇಳಿದಂತೆ....ಅದು ಸುಂದರವಾದ ಪದ್ಯ.... ಅದನ್ನೇ ಹಾಡುತ್ತ ಹೋಗುವೆ. ಅದರ ಮೂಲಕ ನಾನು ಚಿರಾಯುವಾಗಬೇಕು. ನನ್ನ ಪ್ರೇಮ ಅಮರವೆಂಬುದನ್ನು ಲೋಕಕ್ಕೆ ತೋರಿಸಿಕೊಡಬೇಕು.... (ದೂರದಲ್ಲೆಲ್ಲೋ ನೋಡುತ್ತಿದ್ದಂತೆ ಹಿನ್ನೆಲೆಯಲ್ಲಿ ಕುದುರೆ ಗಾಡಿಯ ಸದ್ದು ಆರಂಭವಾಗುತ್ತದೆ. ಆದರ ಲಯಕ್ಕೆ ಹೊಂದಿಸಿ ಹಾಡುತ್ತ ಒಂದೊಂದೇ ಹೆಜ್ಜೆಯಿಡುತ್ತ ನಿಷ್ಕ್ರಮಿಸತೊಡುಗತ್ತಾನೆ)

ಘನ ಆನಂದ ಮೀತ ಸುಜಾನ ಬಿನಾ
ಸಬಹೀ ಸುಖ ಸಾಜ ಸಮಾಜ ಟರೇ
ತಬ ಹಾರ ಪಹಾರಸೇ ಲಾಗತಹೇ
ಅಬ ಆನೀಕೇ ಬೀಚ ಪಹಾರ ಪರೇ ||

(ಘನಾನಂದ ಹೊರಟು ಹೋದ ಮೇಲೆ ಕುದುರೆಗಾಡಿಯ ಸದ್ದು ದೂರ ದೂರ ಹೋದಂತೆ ಕ್ಷೀಣಿಸುತ್ತಾ ಕೊನೆಗೆ ಕೇಳಿಸದಂತಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದಕ್ಕನುಗುಣವಾಗಿ ರಂಗದ ದೀಪಗಳು ಮಂದವಾಗಿ ಕೊನೆಗೆ ಕತ್ತಲಾಗುವುದು. ಹಿನ್ನೆಲೆಯಲ್ಲಿ ಕಥಕ್ ನೃತ್ಯದ ಹೆಜ್ಜೆಯ ಗೆಜ್ಜೆಗಳ ಸದ್ದು ಕೇಳಿ ಬರುತ್ತಿದ್ದಂತೆಯೇ ಬೆಳಕು ಮೂಡುವದು.

ದೃಶ್ಯ ೧೧

ಸುಲತಾನನ ಮಹಲಿನಲ್ಲಿ ಒಂದು ದಿವಾನಖಾನೆ. ಪೀಠವೊಂದರಲ್ಲಿ ಮಹಮ್ಮದಶಾಹ ಕುಳಿತಿದ್ದಾನೆ. ಕೈಯಲ್ಲಿ ಮದ್ಯದ ಬಟ್ಟಲು. ಅವನೆದುರಿನಲ್ಲಿ ಸುಜಾನ ನರ್ತನ ಮಾಡುತ್ತಿದ್ದಾಳೆ. ಸುಲತಾನ ವಾಹವಾ ಹೇಳುತ್ತ ಮಧ್ಯೆ ಮಧ್ಯೆ ಕುಡಿಯುತ್ತ ಆನಂದದಲ್ಲಿ ಮುಳುಗಿದ್ದಾನೆ. ಆಗ ಒಮ್ಮಿಂದೊಮ್ಮೆಲೆ ಅನೀಜ ಪ್ರವೇಶಿಸುತ್ತಾನೆ)

ಅನೀಜ—(ಗದರುತ್ತ) ಸುಜಾನ! ನಿಲ್ಲಿಸು ನಿನ್ನ ನೃತ್ಯವನ್ನು. (ಸುಜಾನ ಹಾಗೆ ಮಾಡುತ್ತಾಳೆ)

ಮಹಮ್ಮದ— (ಒಮ್ಮೆಲೇ ಎಚ್ಚೆತ್ತವನಂತೆ) ಏನಾಯ್ತು ? (ರೇಗಿ) ಅನೀಜ ಏನಿದು ನಿನ್ನ ಉದ್ಧಟತನ...! ನಿನ್ನನ್ನು ಯಾರು ಇಲ್ಲಿಗೆ ಕರೆಸಿದರು ? ಕಬಾಬ ಮೇ ಹಡ್ಡೀ ಕಂಬಖ್ತ್ !

ಅನೀಜ—ಜಹಾಂಪನಾಹ, ಮಾಫಿ ಇರಲಿ. ತಾವೀಗ ಎದ್ದು ಖಡ್ಗ ಹಿಡಿದು ವೈರಿಯ ಮೇಲೆ ಏರಿ ಹೋಗಬೇಕಾದ ಪ್ರಸಂಗ ಬಂದಿದೆ. ಹೀಗಿರುವಾಗ ನೀವಿನ್ನೂ ನಾಚಗಾನಾ ಬಜಾನಾಗಳಲ್ಲಿ ಮುಳುಗಿರುವಿರಲ್ಲ !

ಮಹಮ್ಮದ—ಖಡ್ಗ ಹಿಡಿಯಬೇಕು ? ಯಾಕೆ ಏನಾಯ್ತು !

ಅನೀಜ—ಪರ್ಶಿಯಾದ ನಾದಿರಶಾಹನ ಫೌಜು ಹಿಂದೂಸ್ಥಾನದ ಮೇಲೆ ದಾಳಿ ಮಾಡಲು ಬಂದಿದೆ.

ಮಹಮ್ಮದ—ಇದಕ್ಕೆ ನೀನೇಕೆ ಇಷ್ಟು ಗಾಬರಿಯಾಗಿದ್ದೀಯಾ ? ಅವನು ಬರಬಹುದೆಂದು ನನಗೆ ಮೊದಲೇ ಗೊತ್ತಿತ್ತು. ನಮ್ಮ ಹಿತಶತ್ರುಗಳೇ ಅವನಿಗೆ ಕಾಗದ ಬರೆದು ಕರೆಸಿಕೊಂಡಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೀಜ—ಆದರೆ ನಾದಿಕಶಾಹನ ಫೌಜನ್ನು ಎದುರಿಸಲು ನಮ್ಮ ಸೈನಿಕರು ಅಸಮರ್ಥರಾಗಿದ್ದಾರೆ. ಅವರು ಕೂಡಾ ಇಷ್ಟು ಕಾಲವೂ ಸಂಗೀತ, ನೃತ್ಯ, ಶೃಂಗಾರಿಕ ಕವಿತೆ, ಕುಡಿತ ಜೂಜಾಟಗಳಲ್ಲಿ ಮೈ ಮರೆತಿದ್ದ ಕಾರಣ ಶಸ್ತ್ರ ಹಿಡಿಯುವುದನ್ನೇ ಮರೆತಿದ್ದಾರೆ. ಅವರ ಖಡ್ಗಗಳಿಗೂ ತುಕ್ಕು ಹಿಡಿದಿದೆ.

ಮಹಮ್ಮದ—ಅದಕ್ಕೆ ನಾನೇನು ಮಾಡಬೇಕು?

ಅನೀಜ—ಸುಲತಾನರು ಸ್ವತಃ ಬಂದು ಸೈನಿಕರ ಮಧ್ಯೆ ಓಡಾಡಿ ಅವರನ್ನು ಹುರಿದುಂಬಿಸಿ ಯುದ್ಧಕ್ಕೆ ಸಿದ್ಧರನ್ನಾಗಿ ಮಾಡಬೇಕು.

ಮಹಮ್ಮದ—ಬಹೋತ ಅಚ್ಛಾ. ಹಾಗೇ ಮಾಡೋಣ. ನೀನಿನ್ನು ಹೊರಡು.

ಅನೀಜ—ಜಹಾಂಪನಾಹ ಅವರು ನನ್ನೊಂದಿಗೇ ಹೊರಡಬೇಕು. ಶತ್ರುವಿನ ಸೈನ್ಯ ರಾಜಧಾನಿಯ ಸಮೀಪಕ್ಕೆ ಬರುತ್ತಲಿದೆ.

ಮಹಮ್ಮದ—ಆನೇದೋ, ಅಭೀ ದಿಲ್ಲಿ ದೂರ ಹೈ ! (ಕುಡಿತದಮಲಿನಲ್ಲಿ ಪೀಠದ ಒಂದು ಮಗ್ಗಲಿಗೆ ಒರಗುವನು. ಹೊರಗಿನಿಂದ ಜನರ ಹಾಹಾಕಾರ ಕೇಳಿಬರುವುದು. ಹೊರಗೆ ಹಚ್ಚಿದ ಉರಿಯ ಛವಿ ಜ್ವಾಲೆಗಳು ಕಾಣಿಸಿಕೊಳ್ಳುವುವು. ಏನಾಯಿತೆಂದು ನೋಡಿ ಬಂದು ಅನೀಜ ಸುಲತಾನನ್ನು ಅಲ್ಲಾಡಿಸಿ ಎಬ್ಬಿಸತೊಡಗುವನು.)

ಅನೀಜ—ಆಲಂಪನಾಹ, ಆಲಂಪನಾಹ ! ದುಶ್ಮನನ ಫೌಜು ದಿಲ್ಲಿಯೊಳಕ್ಕೆ ನುಗ್ಗಿದೆ. ಪರ್ಶಿಯನ ಸೈನಿಕರು ನಾಗರಿಕರನ್ನು ಕೊಲೆ ಮಾಡುತ್ತ, ಮನೆಗಳನ್ನು ಲೂಟಿ ಮಾಡುತ್ತ ಮಹಲುಗಳಿಗೆ ಬೆಂಕಿಯಿಡುತ್ತ, ಬರುತ್ತಿದ್ದಾರೆ.

ಮಹಮ್ಮದ—(ಎಚ್ಚೆತ್ತು) ಅಂ ? ಎಲ್ಲಿ ? ಏನಾಯ್ತು ? ವೈರಿಗಳು ಒಳಗೇ ನುಗ್ಗಿದರೆ ? ನಾನೀಗಲೇ ಅವರ ಸತ್ಯಾನಾಶ ಮಾಡುತ್ತೇನೆ (ಖಡ್ಗ ಹಿರಿಯಲು ಶತ ಪ್ರಯತ್ನ ಮಾಡುತ್ತಾನೆ : ತುಕ್ಕು ಹಿಡಿದ ಅದು ಹೊರಬರುವುದೇ ಇಲ್ಲ. ಅಷ್ಟರಲ್ಲಿ ದೀಪಗಳು ಮಂದವಾಗಿ ಹೊರಗಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಂಕಿಯ ಬೆಳಕು ರಕ್ತದ ಬಣ್ಣಕ್ಕೆ ತಿರುಗುತ್ತದೆ. ರಂಗದ ಮಧ್ಯದ ತೆರೆ ಮುಚ್ಚಿಕೊಳ್ಳುವುವು.

ದೃಶ್ಯ ೧೨

ಸುಜಾನಳೊಬ್ಬಳೇ ಬೆದರುಗಣ್ಣುಗಳಿಂದ ಅತ್ತಿತ್ತ ನೋಡುತ್ತ ಹೊರಟಿದ್ದಾಳೆ. ಹಿಂದಿನಿಂದ ಯಾರೋ ತನ್ನ ಹೆಸರು ಹಿಡಿದು ಕೂಗಿದುದನ್ನು ಕೇಳಿ ಟೊಂಕದಲ್ಲಿನ ಕಿರುಗತ್ತಿಯನ್ನು ಹಿರಿದು ವೈರಿಯನ್ನು ಎದುರಿಸಲು ಸಿದ್ಧಳಾಗಿ ನಿಲ್ಲುತ್ತಾಳೆ. ಕಲಾವತಿ ಪ್ರವೇಶಿಸುತ್ತಿರುವಂತೆಯೇ ಭಯವನ್ನು ತೊರೆದು ಸಮಾಧಾನದ ಉಸಿರೆಳೆದು ಕಿರುಗತ್ತಿಯನ್ನು ಯಥಾಸ್ಥಾನವಿರಿಸಿಕೊಳ್ಳುತ್ತಾಳೆ)

ಸುಜಾನ—ನೀನು ಘನಾನಂದರ ಪತ್ನಿಯಲ್ಲವೆ?

ಕಲಾವತಿ—ಆಹುದು ಬೇಗಂ ಸಾಹಿಬಾ.

ಸುಜಾನ—ಬೇಗಂ ಸಾಹಿಬಾ! ಮಯೂರ ಸಿಂಹಾಸನ ನಾದಿರಶಾಹನೊಡನೆ ಪರ್ಶಿಯಾ ದೇಶಕ್ಕೆ ಹೋಯಿತು. ಸುಲತಾನ ಮಹಮ್ಮದಶಾಹರು ಅದನ್ನೇ ರಕ್ಷಿಸಲಾರದೆ ಹೋದರು. ಇನ್ನು ನನ್ನ ಪಾಡೇನು? ಕೊಳ್ಳಿಗಾರರ ಉಪಟಳಕ್ಕೆ ಸಿಕ್ಕು ದೆಹಲಿಯೇ ಧ್ವಂಸವಾಗಿರುವಾಗ ನನ್ನನ್ನು ಬೇಗಂ ಎಂದು ಹೀಯಾಳಿಸಲು ಬಂದೆಯಾ ನೀನು?

ಕಲಾವತಿ—ನೀನು ನನ್ನನ್ನು ಹೀಯಾಳಿಸಲಿಲ್ಲವೆ ಸುಜಾನ? [ಆವಳು ಪ್ರಶ್ನಾರ್ಥಕವಾಗಿ ನೋಡಲು] ನನ್ನನ್ನು ಘನಾನಂದರ ಪತ್ನಿ ಎನ್ನಲಿಲ್ಲವೆ ನೀನು? ನೀನು ಬೇಗಂ ಎಂಬುದು ಎಷ್ಟು ಸತ್ಯವೋ ನಾನು ಪತ್ನಿ ಎಂಬುದೂ ಅಷ್ಟೇ ಸಮರ್ಪಕ [ನೆನೆದುಕೊಳ್ಳುತ್ತ] ನನ್ನ ಪತಿಯನ್ನು ರಕ್ಷಿಸಲಾರದೆ ಹೋದೆ ನಾನು—

ಸುಜಾನ—[ಕಟಕಿ] ನನ್ನ ಕೈಯಿಂದ?

ಕಲಾವತಿ—[ಆವಳ ಕೈಗಳನ್ನು ಹಿಡಿದುಕೊಂಡು] ನನ್ನನ್ನು ಕ್ಷಮಿಸು ಸುಜಾನ. ನನ್ನ ವಸ್ತು ನನಗೆ ದೊರೆಯಬೇಕೆಂದು ನಾನೆಂದು ಪ್ರಯತ್ನ ಮಾಡಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಅದು ನಮ್ಮಿಬ್ಬರ ಕೈಗೂ ಸಿಗದೆ ಮಥುರೆಯ ವೃಂದಾವನ ಸೇರುವುದೆಂದಾರೆಣಿಸಿದ್ದರು ? ನಿನ್ನ ವಶದಲ್ಲಾದರೂ ಉಳಿದಿದ್ದರೆ ಆವರ ಸಂಗೀತ ಕಲೆ ವರ್ಧಿಸುತ್ತಿತ್ತು. ತಾನಸೇನರ ಅನಂತರ ಅದೇ ಮಟ್ಟಿದ ಘನೋನ್ನತ ಗಾಯಕ ಧ್ರುಪದಿಯಾ ಘನಾನಂದ ಎಂದು ಹೆಸರಾಗುತ್ತಿದ್ದಿತು.

ಸುಜಾನ—ಈಗಲಾದರೂ ಏನಾಯಿತು? ದಿಲ್ಲೀಶ್ವರನ ದರಬಾರಿನಿಂದ ಹೊರಟು ಹೋಗಿ ಜಗದೀಶ್ವರನ ದರಬಾರಿನಲ್ಲಿ ಹಾಡುತ್ತಿರಬಹುದು ; ಒಳ್ಳೆಯದೇ ಆಯಿತಲ್ಲವೆ ?

ಕಲಾವತಿ—ಆಗಬಹುದಿತ್ತು ಸುಜಾನ ; ಆದರೆ ಆಗಲಿಲ್ಲ....ಹಾಗಾಗಲಿಲ್ಲ. ಅವರೀಗ ಸಂಗೀತ ಸಾಧನೆಗಿಂತ ಕವಿತಾರಚನೆಗೆ ಹೆಚ್ಚು ಹೆಚ್ಚಾಗಿ ಸಮಯ ವಿನಿಯೋಗಿಸತೊಡಗಿದ್ದಾರೆ.

ಸುಜಾನ—ಆಗಲಿ, ಆದೂ ಒಳ್ಳೆಯದೇ. ಆವರ ಕಾವ್ಯ ಪ್ರತಿಭೆಯೂ ಸಾಮಾನ್ಯವಾದುದೇನಲ್ಲ. ಇವರೂ ಒಬ್ಬ ಮಹಾನ್ ಸಂತ ಕವಿಗಳೆಂದು ಖ್ಯಾತಿ ಪಡೆಯುವರು : ಸೂರ ತುಲಸೀದಾಸರುಗಳಂತೆ !

ಕಲಾವತಿ—[ನೋವಿನ ನಗೆ ನಕ್ಕು] ತುಲಸೀದಾಸರೇ? ಆಪರಾತ್ರಿಯಲ್ಲಿ ತುಂಬಿದ ನದಿಯನ್ನೀಜಿ ಹೋಗಿ ನೇತಾಡುತ್ತಿದ್ದ ಹಾವನ್ನು ಹಿಡಿದು ಕೊಂಡು ಆಟ್ಟವನ್ನು ಹತ್ತಿ ಹೆಂಡತಿಯನ್ನು ಕಾಣಲು ಹೋದವರು ತುಲಸೀದಾಸ. ಆದರೆ ಘನಾನಂದರಿಗೆ ಗಡೀಪಾರಾಗಿ ಪರದೇಶಿಯಾಗಿ ಹೊರಡುವಾಗ ಕೂಡಾ ಮಡದಿಯ ಮುಖ ನೋಡಲು ಮನಸ್ಸಾಗಲಿಲ್ಲ. ಇನ್ನು ಸಂಗೀತದ ಸೂರನ್ನು ದೂರ ಮಾಡಿದ ಇವರು ಸೂರದಾಸರೂ ಆಗಲಿಲ್ಲ. ಇವರು ಕೇವಲ ಸುಜಾನದಾಸರು !

ಸುಜಾನ—[ಕೋಪದಿಂದ] ಕಲಾವತಿ !

ಕಲಾವತಿ—ನಿಜ ಸುಜಾನ, ನಾನು ಹೇಳುತ್ತಿರುವುದು ನಿಜ ಸಂಗತಿ. ವೃಂದಾವನದಲ್ಲಿ ಮಥುರಾಧಿಪತಿಯೆದುರಿಗೆ ಕುಳಿತೂ ಅವರು ನಿತ್ಯ ಮಾಡುತ್ತಿರುವುದು ಸುಜಾನಧ್ಯಾನ. [ಕಂಬನಿ ದುಂಬಿ] ವಿರಹ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಥೆ ತುಂಬಿದ ದೋಹಾಗಳನ್ನು ರಚಿಸಿ ಸುಜಾನಳ ಸ್ಮೃತಿಗರ್ಪಿಸುತ್ತಿರುವವರಂತೆ ದಿನನಿತ್ಯ.

ಸುಜಾನ—ನಿನಗೆ ಹೇಗೆ ಗೊತ್ತು ?

ಕಲಾವತಿ—ಅಣ್ಣ ಅನೀಜ ಹೇಳಿದ.

ಸುಜಾನ—ಅವನಿಗೆ ?

ಕಲಾವತಿ—ಸ್ವತಃ ಪ್ರಮಾಣ. ಆಗಾಗ ಮಥುರೆಗೆ ಹೋಗಿ ಅವರ ಕಾವ್ಯ ಸಮಾಧಿಗೆ ಭಂಗ ಬಾರದಂತೆ ದೂರದಿಂದಲೇ ನೋಡಿ ದೇವಸ್ಥಾನದ ಪಾರುಪತ್ಯಗಾರರಿಗೆ ಹಣ ಕೊಟ್ಟು ಇವರ ಯೋಗಕ್ಷೇಮದ ಹೊಣೆಯನ್ನೊಪ್ಪಿಸಿ ಬರುತ್ತಿದ್ದಾನೆ.

ಸುಜಾನ—(ಪಶ್ಚಾತ್ತಾಪದಿಂದ) ಓ ... ಕೇವಲ ತನ್ನೊಬ್ಬ ತಂಗಿಗಾಗಿ – ಅದೂ ಬರಿಯೊಂದು ರಾಖೀ ಕಟ್ಟಿಸಿಕೊಂಡ ನಿಯತ್ತಿಗಾಗಿ–ಇಷ್ಟೊಂದು ಕಷ್ಟ ಪಡುತ್ತಿದ್ದಾನೆ ಅನೀಜ ಖಾನ ! ಇನ್ನು ಘನಾನಂದರು ... ಪ್ರೇಯಸಿಗಾಗಿ ಮನೆಮಾರು ಹೆಂಡಿರುಮಕ್ಕಳನ್ನು ತೊರೆದು, ಬಹಿಷ್ಕರಿಸಿದ ಬ್ರಾಹ್ಮಣ ಸಮಾಜವನ್ನೇ ತಿರಸ್ಕರಿಸಿ, ದೇಹಲೀ ಸುಲತಾನನನ್ನೂ ಅವಮಾನಿಸಿ ಶಿಕ್ಷೆಗೆ ಗುರಿಯಾಗಿ ದೇಶಭ್ರಷ್ಟರಾಗಿ ಹೋಗಿ ಭಗವಂತನ ಸಾನ್ನಿಧ್ಯದಲ್ಲಿಯೂ ಸುಜಾನಳ ಧ್ಯಾನದಲ್ಲಿಯೇ ಇದ್ದಾರೆ ಅವರು.... ಹರಕೆಯ ಕುರಿಯನ್ನು ಬಲಿಗೊಟ್ಟು ತಲೆಗಡಿದು ದೇವರ ಮುಂದೆ ತಂದಿರಿಸಿ ಅದರ ಮೇಲೆ ಹಣತೆಯಿಟ್ಟು ದೀಪವುರಿಸಿದರೂ ಆ ತಲೆಯಿನ್ನೂ ತನ್ನನ್ನು ಕಡಿದ ಕಟುಕಳನ್ನೇ ಕೂರ್ಮೆಯಿಂದ ನೆನೆಯುತ್ತಿದೆ : ಅಯ್ಯೋ, ಅನೀಜ ಘನಾನಂದರಂತಹ ನಿಷ್ಕಾಮಂತರಿಬ್ಬರನ್ನೂ ಕನಿಷ್ಠವಾಗಿ ಕಂಡು ದೂರೀಕರಿಸಿದ ದುರ್ಜನಳೀ ಸುಜಾನಳು ! ಇಂತಹ ಕ್ರೂರಕರ್ಮಿಯಾದವಳನ್ನು ಬಾಯ್ದೆರೆದು ನುಂಗಲಾರದೆ ವಾಕರಿಸಿ ಮೇಲೆ ಧರಿಸಿದೆ ಧರೆ....ನನ್ನಂಥವನ್ನೂ ಧರಿಸಿ ಸಹಿಸುತ್ತಿರುವುದ ಕ್ಕಾಗಿಯೇ ಸರ್ವಂಸಹೆಯೆನಿಸಿದ್ದಾಳೆ ವಸುಂಧರೆ.

ಕಲಾವತಿ—ಸರ್ವಂಸಹೆ ಕೇವಲ ಭೂಮಿಯಷ್ಟೇ ಅಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಮತ್ತಾರು ?

ಕಲಾವತಿ—ಸ್ತ್ರೀ.

ಸುಜಾನ—ನಿಜ. ಅದಕ್ಕೆ, ಕಲಾವತೀ, ನೀನೇ ಸಾಕ್ಷ್ಯೆ !

ಕಲಾವತಿ—ನೀನೂ ಆಗಬಹುದು ಸುಜಾನ.

ಸುಜಾನ—ಅದು ಹೇಗೆ ?

ಕಲಾವತಿ—ನಿನಗೆ ನಾನೆಸಗಿರುವ ಅಪಚಾರವನ್ನೆಲ್ಲ ಮನ್ನಿಸಿ.

ಸುಜಾನ—ಓ ಕ್ಷಮೆಯ ಧರಿತ್ರಿ ತಾನೇ ಕ್ಷಮೆ ಕೇಳಿಕೊಳ್ಳುತ್ತಿದ್ದಾಳೆ.

ಕಲಾವತಿ—ಅಷ್ಟೇ ಅಲ್ಲ ; ದೊಡ್ಡ ಹೊಣೆಯೊಂದನ್ನು ಹೊರಿಸಬೇಕೆಂದಿದ್ದಾಳೆ.

ಸುಜಾನ—ಹೊಣೆ ?

ಕಲಾವತಿ—ಘನಾನಂದರ ಪ್ರಾಣರಕ್ಷಣೆ.

ಸುಜಾನ—ಅಯ್ಯೋ, ಏನಾಯಿತು ಅವರಿಗೆ ?

ಕಲಾವತಿ—ದೆಹಲಿಯನ್ನು ಕೊಳ್ಳೆ ಹೊಡೆದು ತೃಪ್ತರಾಗದೆ ನಾದಿರಶಾಹನ ಸೈನಿಕರು ಇನ್ನು ಮೇಲೆ ಮಥುರೆಗೆ ದಾಳಿಯಿಡುವ ಸನ್ನಾಹದಲ್ಲಿದ್ದಾರೆ.

ಸುಜಾನ—ಅನೀಜ ತಿಳಿಸಿದನೋ ?

ಕಲಾವತಿ—ಆಹುದು. ಆಲ್ಲಿನ ದೇವಸ್ಥಾನದ ಸಂಪತ್ತಿನ ಮೇಲೆ ಪರ್ಶಿಯನ್ನರ ಕಾಕ ದೃಷ್ಟಿ ಬಿದ್ದಿದೆ. ಆ ದೇವಾಲಯದ ಪ್ರಾಂಗಣದಲ್ಲಿ ನೆಲಸಿದೆ ನನ್ನ ಸಂಪತ್ತು ; ಅದು ನಿನ್ನದು ಕೂಡಾ.

ಸುಜಾನ—[ಚಿಂತೆಯಿಂದ] ಓ !

ಕಲಾವತಿ—ಅದನ್ನು ನೀನೀಗ ರಕ್ಷಿಸಬೇಕು. ಯಾರೇನು ಹೇಳಿದರೂ ಘನಾನಂದರು ವೃಂದಾವನವನ್ನು ಬಿಟ್ಟು ಕದಲುವಂತಿಲ್ಲ. ಹಾಗಿದ್ದರೆ ಅವರಿಗೆ ಪ್ರಾಣಾಪತ್ತು ಒದಗುವುದು ಖಂಡಿತ. ಆದಕ್ಕಾಗಿ ನೀನೀಗ ಮಥುರೆಗೆ ಹೋಗಬೇಕು. ಎಚ್ಚರಿಕೆ : ಮಾರ್ಗದಲ್ಲಿ ನಿನ್ನ ಪ್ರಾಣಕ್ಕೂ ಅಪಾಯ ಕಾದಿರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ನನ್ನ ಪ್ರಾಣ ? ಇದಕ್ಕೇನು ಬೆಲೆಯೀಗ !

ಕಲಾವತಿ—ಉಪಾಯವಾಗಿ ಅವರನ್ನಲ್ಲಿಂದ ಹೊರಡಿಸಿಕೊಂಡು ಹೊರಟು ಹೋಗು.

ಸುಜಾನ—ಎಲ್ಲಿಗೆ ?

ಕಲಾವತಿ—ಎಲ್ಲಿಗೋ....ನಾದಿರಶಾಹನ ಸೈನಿಕರ ಕ್ರೌರ್ಯದ ಸೀಮೆಯಿಂದಾಚೆಗೆ ! ಘನಾನಂದರು ಮುಖ ಕೂಡ ನೋಡಬಯಸದೆ ದೂರೀಕರಿಸಿದ ಧರ್ಮಪತ್ನಿ ಕಲಾವತಿಯ ಕಣ್ಣ ಸೀಮೆಯಿಂದಾಚೆಗೆ ! ದೂರ... ದೂರ ....ಅವರ ಪ್ರಾಣ ಸುರಕ್ಷಿತವಾಗಿರುವಲ್ಲಿಗೆ....ಅಲ್ಲಿಗೆ... ಕರೆದುಕೊಂಡು ಹೋಗು ಸುಜಾನ. (ಅವಳಿದುರು ಕೈ ಜೋಡಿಸಿ, ರುದ್ಧಕಂಠದಿಂದ) ನನ್ನ ಪತಿಯನ್ನು ನಿನ್ನ ಉಡಿಯಲ್ಲಿ....ಹಾಕಿದ್ದೇನೆ !....
ಅವರನ್ನು ರಕ್ಷಿಸಿಕೋ, ನಿನ್ನ ಧರ್ಮಕ್ಕೆ ಅವರನ್ನು ರಕ್ಷಿಸಿಕೋ ತಂಗೀ ! (ಸುಜಾನಳ ಭುಜಕ್ಕೆ ಹಣೆಯಿಟ್ಟು ಅಳತೊಡಗುವಳು. ಅವಳು ಸಾಂತ್ವನಗೊಳಿಸುವಂತೆ ಇವಳ ಬೆನ್ನನ್ನು ನೇವರಿಸುತ್ತಿರಲು ರಂಗವನ್ನು ಕತ್ತಲಾವರಿಸುವುದು.

ಕೊನೆಯ ದೃಶ್ಯ

ಬೆಳಕಾದಾಗ ಮಥುರೆಯ ವೃಂದಾವನದ ಪಕ್ಕದನೋಟ ಕಾಣಿಸುವುದು. ಬಲ ಪಾರ್ಶ್ವದೊಳಗಡೆಯಲ್ಲಿ ಶ್ರೀಕೃಷ್ಣನ ಮಂದಿರವಿದೆ. ಆದರೆ ದುರುಗಡೆಯ ಮರದಡಿಯಲ್ಲಿನ ಶಿಲಾ ಪೀಠವೊಂದರ ಮೇಲೆ ಘನಾನಂದ ಕುಳಿತಿದ್ದಾನೆ. ಸಂತ ಕವಿಗಳೋಪಾದಿಯಲ್ಲಿ ಬಟ್ಟಿಬರೆಗಳನ್ನೂ ಕವಿ ಮುಚ್ಚುವ ಟೊಪ್ಪಿಗೆಯನ್ನೂ ಧರಿಸಿದ್ದಾನೆ. ಗಡ್ಡ ಬೆಳೆದಿದ್ದರೂ ಮುಖ ಮುನ್ನಿನಂತೆಯೇ ತೇಜಃಪುಂಜವಾಗಿದೆ. ಆದರೆ ಮೊದಲಿನಷ್ಟು ಶೋಕಾಕುಲವಾಗಿಲ್ಲ. ತೊಡೆಯ ಮೇಲೆ ಕಾಗದಗಳ ಕಟ್ಟನ್ನಿರಿಸಿಕೊಂಡು ಕವಿತಾರಚನೆಯಲ್ಲಿ ಮಗ್ನನಾಗಿದ್ದಾನೆ. ದೇವಸ್ಥಾನದಲ್ಲಿನ ಗಂಟೆಗಳ ನಾದ ಕೇಳಿ ಬರಲು ತಲೆಯೆತ್ತಿ ಆತ್ತ ನೋಡಿ ಕೈಮುಗಿಯು

Sri Vidyabharathi Book Centre, Shirgeri

CC-O. In Public Domain. Digitized by eGangotri

ತ್ತಾನೆ. ಹಿನ್ನೆಲೆಯಲ್ಲಿ ಕೊಳಲಿನ ಆಲಾಪ ಆರಂಭವಾಗಿ ಮೆಲ್ಲುಲಿಯಾಗಿ ಮುಂದುವರಿಯುವುದು.)

ಘನಾನಂದ—[ಪೀಠದ ನಗುವಿನಿಂದಿಗೆ] ನನ್ನ ಪಾಡು ಹಾಡಾಗಿ ಹೊಮ್ಮಿತು. ಪ್ರೇಮದ ಅಗ್ನಿ ಅಷ್ಟು ಪ್ರಖರವಾದುದು. ನನ್ನೆದೆಯ ಆಳಲ್ಲ ಕಂಬನಿಯಾಗಿ ಕುದಿಯದೆ ಹಾಡಿನ ಹಬೆಯಾಗಿ ಹಬ್ಬುತ್ತಿದೆ. (ಗದ್ಗದಕಂಠನಾಗಿ ಹಾಡುತ್ತ ಬರೆಯುತ್ತಾನೆ.)

ಪ್ರೇಮ ಆಗ ಲಾಗೈ ಜಾಗೈ ಉಭರ; ಘನ ಆನಂದಕೋ
ರೋಯಿಬೋ ನ ಆವೈ ತೋ ವೈ ಗಾಯಿಬೋ ॥

[ಬರೆಯುವುದನ್ನು ನಿಲ್ಲಿಸಿ, ಸ್ವಗತವಾಗಿ]

ಇನ್ನು ಆಯುಷ್ಯವಿಡೀ ಹಾಡುವೆ. ವೃಂದಾವನದ ಈ ರಾಧಾಮೋಹನನ ಗುಣಗಾನ ಮಾಡುವೆ. ಆಂ ? ರಾಧಾ—ಮೋಹನ; ರಾಧಾ.... ಮೋಹನ ? ಅಲ್ಲ; ಸುಜಾನ—ಘನಾನಂದ; ಘನಾನಂದ ಮೋಹನ.... ಸುಜಾನ ರಾಧೆ .....ಸುಜಾನ ರಾಧೆ (ಹಾಡತೊಡಗುತ್ತಾನೆ]

ಏರೀ ರೂಪ ಅಗಾಧ ರಾಧೇ ರಾಧೇ ರಾಧೇ ರಾಧೇ
ತೇರ ಮಿಲಿಬೆಕೋ ಬ್ರಜ ಮೋಹನ ಬಹುತ ಜತನ ಹೈ ಸಾಧೇ॥
ಉನಕೇ ನಿಸದಿನ ಲಗೇ ರಹೈ ಜತ ತೂನ ಧರತಿ ಪಲ ಆಧೆ
ಆನಂದ ಘನ ಪಿಯಾ ಚಾತಕ ಚಾಂಪನಿ ಹಾ ರಾಧೇ ಹಾ ರಾಧೇ....

ಇಲ್ಲ ಇಲ್ಲ – ನಾನೆ ರಾಧೆ : ಸುಜಾನಳೆ ಕೃಷ್ಣ ! ಸುಜಾನ ಕೃಷ್ಣ. ಸುಜನ ಕೃಷ್ಣ ! ಸುಜ್ಞಾನ ಕೃಷ್ಣ ! ಸುಜಾನ ಶ್ಯಾಮ ! ಸುಘರ ಸುಜಾನ ಶ್ಯಾಮ .... (ತಾನು ಹಿಂದೊಮ್ಮೆ ಹಾಡಿದ್ದ ಧ್ರುಪದವನ್ನು ನೆನೆದುಕೊಂಡು ಅದಿಷ್ಟನ್ನೇ ಹಾಡುತ್ತಾನೆ.) "ಸುಘರ ಸುಜಾನ ಶ್ಯಾಮ ಸಕಲ ವಿಧ ಪ್ರಸಂಸಿತ" . (ಸುಜಾನ ಎಂಬ ಬೋಲನ್ನು ವಿನ್ಯಾಸ ಮಾಡುತ್ತಿರುವಷ್ಟರಲ್ಲಿ ನೇಪಥ್ಯದಲ್ಲಿ ಸುಜಾನಳ ದನಿ ಕೇಳಿ ಬರುವುದು.)

ಸುಜಾನ—ಘನಾನಂದಜೀ ...ಘನಾನಂದಜೀ [ಪ್ರವೇಶಿಸುವಳು]

ಘನಾನಂದ—ಸುಜಾನ ! ನೀನಿಲ್ಲಿ – ವೃಂದಾವನದಲ್ಲಿ ! ದೆಹಲಿಯ ಸುಲತಾನರ ಬೇಗಂ ವೈಭವದ ಮಹಲನ್ನು ತೊರೆದು ಭವದ ಬಂಧನ ಹರಿದ ಹರಿದಾಸನ ನಿವಾಸಕ್ಕೆ ಬಂದುದೇಕೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಎಲ್ಲಿಯ ವೈಭವ, ಎಲ್ಲಿಯ ಮಹಲು ಘನಾನಂದ ; ಸ್ವಾಮಿಯ ಸನ್ನಿಧಿಯಲ್ಲಿ ಲೋಕವನ್ನು ಮರೆತು ಕುಳಿತ ನಿಮಗೆ ಬ್ಯಾಹ್ಯಪ್ರಪಂಚದಲ್ಲಿ ಏನೆಲ್ಲ ನಡೆಯಿತೆಂಬುದೇನು ಗೊತ್ತು !

ಘನಾನಂದ—ಏನೆಲ್ಲ ನಡೆಯಿತು ?

ಸುಜಾನ—ಸುಲತಾನರ ಸಾಮ್ರಾಜ್ಯ ಕೊಳ್ಳೆ ಹೋಯಿತು. ವಿಲಾಸದ ಮಹಲು ಧ್ವಂಸವಾಯಿತು. ಸುಲತಾನರ ವಿಲಾಸ ಜೀವನವೇ ದೆಹಲಿ ನಗರದ ಪತನಕ್ಕೆ ಕಾರಣವಾಯಿತು.

ಘನಾನಂದ—ಅದು ಹೇಗೆ ?

ಸುಜಾನ—ಸುಲತಾನರ ಹಿತಶತ್ರುಗಳು ಪರ್ಶಿಯಾದ ನಾದಿರಶಾನಿಗೆ ಗುಟ್ಟಾಗಿ ಕಾಗದ ಬರೆದರು. ಇದೀಗ ಹಿಂದುಸ್ತಾನದ ಮೇಲೆ ದಾಳಿ ಮಾಡಲು ಸಮಯ ಸುಯೋಗ್ಯವಾಗಿದೆಯೆಂದು. ನಾದಿರಶಾಹನ ಸೈನ್ಯ ಬಂದಿತು. ನಮ್ಮ ಸುಲತಾನರ ಸೈನಿಕರು ತಮ್ಮ ಒಡೆಯನಂತೆ ತಾವೂ ಕುಡಿತ ಕುಣಿತ ವಿಲಾಸಗಳಿಗೆ ಮನಸೋತು ಖಡ್ಗ ಹಿಡಿಯುವುದನ್ನೇ ಮರೆತವರು. ಹೀಗಾಗಿ ನಾದಿರಶಾಹನ ಸೈನಿಕರು ಸುಲಭವಾಗಿ ನಮ್ಮವರನ್ನು ತರಿದೊಟ್ಟಿ ಮಯೂರ ಸಿಂಹಾಸನವನ್ನು ವಶಪಡಿಸಿಕೊಂಡರು. ದೆಹಲಿ ನಗರವನ್ನು ಲೂಟಿ ಮಾಡಿದರು.

ಘನಾನಂದ—ಅದಕ್ಕಾಗಿ ಸುಲತಾನರನ್ನು ಕಳೆದುಕೊಂಡು ಅನಾಶ್ರಿತಳಾದ ನೀನು ಈಗ ನನ್ನನ್ನು ಹುಡುಕಿಕೊಂಡು ಬಂದೆ.

ಸುಜಾನ—ಆಲ್ಲ, ಆದಕ್ಕಾಗಿಯಲ್ಲ. ನಾದಿರಶಾಹನ ಸೈನಿಕರು ಮಥುರೆಯನ್ನೂ ಕೊಳ್ಳೆ ಹೊಡೆಯಲು ಹೊರಡಲಿರುವರೆಂದು ತಿಳಿದು ಬಂದಿತು. ನೀವಿಲ್ಲಿರುವುದು ನನಗೆ ಗೊತ್ತಾಯ್ತು. ಸಕಾಲದಲ್ಲಿ ನಿಮ್ಮನ್ನು ಕಂಡು ಅಪಾಯದ ಮುನ್ಸೂಚನೆ ಕೊಟ್ಟು ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋಗೋಣವೆಂದು ಬಂದೆವು.

ಘನಾನಂದ—ಬಂದೆವು ?

ಅನೀಜ—(ಪ್ರವೇಶಿಸುತ್ತ) ನಾನೂ ಬಂದಿದ್ದೇನೆ ಘನಾನಂದ.

Sri Vidyabharathi Book Centre, Srirangam

CC-O. In Public Domain. Digitized by eGangotri

ಘನಾನಂದ—ಓ, ಅನೀಜ !

ಅನೀಜ—ನೀನೀಗ ಕೂಡಲೆ ನಮ್ಮೊಂದಿಗೆ ಹೊರಡದಿದ್ದರೆ ತುಂಬಾ ಅಪಾಯ ವಿದೆ ಆನಂದ. ಜೀವಕ್ಕೆ ಖತರಾ !

ಘನಾನಂದ—ಜೀವಕ್ಕೆ ? ಜೀವವಿದ್ದರಲ್ಲವೆ ಅದಕ್ಕೆ ಖತರಾ ಅನೀಜ ? ನೀನೆಂದು ಉಪಾಯವಾಗಿ ನನ್ನನ್ನು ಸುಲತಾನರ ದರಬಾರಿನಲ್ಲಿ ಹಾಡಲು ಕರೆಸಿದೆಯೋ ಅಂದು – ಸುಜಾನಳು ನನ್ನನ್ನು ತೊರೆದು ಮಹಮ್ಮದಶಾಹರ ಜನಾನಖಾನೆಯನ್ನು ಸೇರಿದಂದು – ಅಂದೇ ನನ್ನ ಜೀವ ನನ್ನನ್ನು ತೊರೆಯಿತು. ಸುಜನ ಶ್ರೀಕೃಷ್ಣನ ಸಾನ್ನಿಧ್ಯವನ್ನು ಸೇರಿತು.

ಸುಜಾನ—ಈ ಪಾಪಿಣಿಗೆ ಕ್ಷಮೆ ಕೇಳಲು ಬಾಯಿಲ್ಲ. ಶಿಕ್ಷೆಯ ಭಿಕ್ಷೆಯ ನ್ನಾದರೂ ನೀಡಿರಿ ಘನಾನಂದ !

ಘನಾನಂದ—ಶಿಕ್ಷೆ ? ನಿನ್ನದೇನಪರಾಧ ಸುಜಾನ ? ಎಲ್ಲ ಅವನಿಚ್ಛೆ.

ಸುಜಾನ—ಇಲ್ಲ – ನಿಮ್ಮನ್ನೀ ಅವಸ್ಥೆಗೆ ತಂದವಳು ನಾನು !

ಘನಾನಂದ—ಅದೂ ಕೂಡ ಅವನಿಚ್ಛೆ. (ಗಂಟೆ) ನೋಡಲ್ಲಿ – ದೇವಸ್ಥಾನ ದೊಳಗೆ ಪೂಜಾರಿ ನೀರಾಂಜನದ ಜ್ಯೋತಿಗೆ ಮುಟ್ಟಿಸಿ ಕರ್ಪೂರವನ್ನು ಹೊತ್ತಿಸಿದ. (ಗಣ ಗಣ ಘಂಟಾನಾದ)

ಕರ್ಪೂರಾರತಿ ಬೆಳಗಿದ. ಆದೋ ಈಗ ನೀರಾಂಜನವೆತ್ತಿ ಮಂಗಳಾರತಿ ಬೆಳಗುತ್ತಿದ್ದಾನೆ. ನಾನು ಕರ್ಪೂರ : ನೀನು ನೀರಾಂಜನ, ಸುಜಾನ !

ಸುಜಾನ—(ಅಳುತ್ತ) ಘನಾನಂದ....

ಘನಾನಂದ—ಕರ್ಪೂರವನ್ನೂ ಉರಿಸಿ ತಾನೂ ಮಂಗಳಾರತಿಯಾದ ನೀರಾಂಜನ ದ್ವಿಧಾ ಧನ್ಯ !

ಸುಜಾನ—ನಾನು ? ಮಂಗಳಾರತಿ ! ಅಯ್ಯೋ (ಅಳು)

ಘನಾನಂದ—ರತಿಯಲ್ಲಿ ಮುಳುಗಿದ್ದ ನನಗೆ ವಿರತಿಯನ್ನು ತಂದಿತ್ತು ಸ್ವಾಮಿಯ ಸೇವೆಯಲ್ಲಿ ತೊಡಗಿಸಿದ ನೀನು ನಿಜವಾಗಿ ಮಂಗಳಾರತಿ.

ಸುಜಾನ—ಅಲ್ಲ. ನಾನು ನಿಮಗೆ ಪ್ರೋಹ ಬಗೆದವಳು.

Sri Vidyabharathi Book Centre, Sangeri

CC-O. In Public Domain. Digitized by eGangotri

ಘನಾನಂದ—ಕ್ರೌಂಚ ವಧೆಯಿಂದ ನೊಂದ ವಾಲ್ಮೀಕಿಯ ಶೋಕವೇ ಶ್ಲೋಕವಾಗಿ ಹರಿದು ಬಂದಂತೆ ನೀನು ಮಾಡಿದ ದ್ರೋಹವೇ ನನ್ನ ಬಾಯಲ್ಲಿ ದೋಹಾಗಳಾಗಿ – ದ್ವಿಪದಿಗಳಾಗಿ ಹಾಡಾಗಿ ಹೊಮ್ಮಿ ಬಂದಿವೆ ನೋಡು ಸುಜಾನ ; ಬರೆದಿಟ್ಟಿದ್ದೇನೆ. ತನ್ನ ಚರಿತ್ರೆ ಬರೆಸುವುದಕ್ಕಾಗಿ ವಾಲ್ಮೀಕಿಗೆ ಪ್ರೇರಣೆ ಬರಿಸುವುದಕ್ಕಾಗಿ ಭಗವಂತ ಕಾಮ ಮೋಹಿತವಾದ ಕ್ರೌಂಚಮಿಥುನದಲ್ಲಿಯ ಗಂಡು ಹಕ್ಕಿಯ ವಧೆ ಮಾಡಿಸಿದ ನಿಷಾದನಿಂದ. (ತನ್ನ ಕಾವ್ಯದ ಕಟ್ಟನ್ನೆತ್ತಿ ನಿರುಕಿಸುತ್ತ) ಆದರೆ ಈ ಕವಿತ್ತಕ್ಕಾಗಿ ದೈವತದಿಂದ ವಧೆ ಮಾಡಲ್ಪಟ್ಟ ಕ್ರೌಂಚ – ನಾನೆ ! ನಾನೆ ಕ್ರೌಂಚ, ನಾನೆ ಕವಿ, ನಾನೆ ಕಥಾನಾಯಕ ! (ನೆನೆಯುತ್ತ) ಹಿಂಬೊಮ್ಮಿ ನೀನು ಆಶೀರ್ವದಿಸಿದಂತೆ ನನ್ನ ದ್ವಿಪದಿಗಳು ಅಮರವಾಗಿ ನಾನು ಚಿರಾಯುವಾಗುವೆ – ಸುಜಾನ, ನಾನು ಚಿರಾಯು ! ನಾನು ನಿರ್ಜರ ! ನಿರ್ಜರ !!

ಪರ್ಶಿಯನ್ ಸೈನಿಕ—(ದೂರದಿಂದ ಕೂಗುತ್ತಾ ಬರುತ್ತಾನೆ) ಜರ್ ಜರ್ ಜರ್ !

ಅನೀಜ—ಓ, ನಾದಿರಶಾಹನ ಸೈನಿಕ (ಖಡ್ಗ ಹಿಡಿದು) ನಾನಿವನನ್ನು ತಡೆಯುತ್ತೇನೆ. ನೀವಿಬ್ಬರೂ ಓಡಿ ಪಾರಾಗಿ ಹೋಗಿರಿ--ಬೇಗ ಬೇಗ.

ಪರ್ಶಿಯನ್ ಸೈನಿಕ—ಯೆ ಹಿಮ್ಮತ್ ? (ಖಡ್ಗ ಯುದ್ಧದಲ್ಲಿ ಅನೀಜ ಗಾಯ ಗೊಂಡು ಕೆಳಗುರುಳುತ್ತಾನೆ)

ಅನಿಜ—ಯಾ ಅಲ್ಲಾಹ ; ನನ್ನ ಕತೆ ಮುಗಿಯಿತು. ಆಯ್ಯೋ ನೀವಿಬ್ಬರೂ ಇನ್ನೂ ಇಲ್ಲಿಯೇ ಇರುವಿರಾ ? ಓಡಿರಿ – ಈಗಲಾದರೂ ಓಡಿರಿ..... ಖುದಾ ಹಾಫಿಜ್.... (ಸಾಯುತ್ತಾನೆ)

ಪರ್ಶಿಯನ್ ಸೈನಿಕ—ಹಾಂ–ಜರ್ ಜರ್ ಜರ್ !

ಸುಜಾನ—ಹಣ ಕೇಳುತ್ತಿದ್ದಾನೆ ಲೂಟಿಗಾರ.

ಘನಾನಂದ—ಜರ್ ಜರ್ ಎಂದರೆ ಹಣವೆ ? (ಮುರದಡಿಯಿಂದ ಒಂದು ಹಿಡಿ ಮಣ್ಣನ್ನೆತ್ತಿ ಸುರಿಯುತ್ತ) ರಜ್–ರಜ್–ರಜ್ ! ಪವಿತ್ರವಾದ ಈ ವೃಂದಾವನದ ಮಣ್ಣು – ರಜ –

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಜಾನ—ಹಾಗೆ ಹೇಳಬೇಡಿರಿ – ಅವಮಾನಿತನಾಗಿಯಾನು.

ಘನಾನಂದ—ಹೂಂ. ಇದೋ – ರಜ – ರಜ – ರಜ !

ಸೈನಿಕ—ಕ್ಯಾ ಕಹಾ ? ಯಃ ಲೋ – (ಖಡ್ಗದಿಂದ ಇರಿಯುತ್ತಾನೆ)

ಘನಾನಂದ—ಆ– – ಕೃಷ್ಣಾ....ಕೃಷ್ಣಾ....ಸುಘರ ಸುಜಾನ ಶ್ಯಾ....ಮ
(ಗತಪ್ರಾಣನಾಗಿ ಶಿಲಾಪೀಠದಿಂದ ಕೆಳಕ್ಕೆ ಬೀಳುತ್ತಾನೆ.)

ಸುಜಾನ—ಅಯ್ಯೋ ಘನಾನಂದ....ಅಯ್ಯೋ ;....(ಘನಾನಂದನ ಶವವನ್ನು ತಡವುತ್ತ ಬಿಕ್ಕಿ ಬಿಕ್ಕಿ ಅಳತೊಡಗುತ್ತಾಳೆ. ಆಗ ಪರ್ಶಿಯನ್ ಸೈನಿಕ ಅಟ್ಟಹಾಸದಿಂದ ಬಂದು ಅವಳ ಕೈಹಿಡಿದೆಳೆದೆಬ್ಬಿಸುತ್ತಾನೆ. ಬಲಾತ್ಕಾರ ಮಾಡಬೇಕೆನ್ನುವಷ್ಟರಲ್ಲಿ ಸುಜಾನಳು ಸೊಂಟದಿಂದ ಕಿರುಗತ್ತಿಯನ್ನೀಚೆಗೆ ತೆಗೆಯುತ್ತಾಳೆ. ಅದನ್ನು ಕಂಡು ಹೌಹಾರಿ ಅವಳ ಮೇಲೆ ಖಡ್ಗವನ್ನೆತ್ತಲಾರದೆ, ಅವಳ ಕತ್ತಿಯನ್ನೆದುರಿಸಲಾರದೆ ಹಿಂದಕ್ಕೆ ಸರಿಯುತ್ತ ಪಾರ್ಶ್ವದೊಳಕ್ಕೆ ಮರೆಯಾಗುತ್ತಾನೆ. ಕಂಬನಿಯಿಂಗಿ ಹೋದ ದೃಷ್ಟಿಯಿಂದ ಸುಜಾನಳು ಒಮ್ಮೆ ಪ್ರಿಯತಮನ ಶವವನ್ನು ನೋಡಿ ನಿಟ್ಟುಸಿರಿಡುತ್ತಾಳೆ. ಅನಂತರ ಘನಾನಂದನ ಶವದ ಬಳಿಗೆ ಬರುತ್ತಾಳೆ. ಮರುಕಳಿಸಿ ದುಃಖವೊತ್ತರಿಸಿ ಬರಲು ಅವನ ಪಾದಗಳೆಡೆ ಮುಂಡಿಯೂರಿ ಕುಳ್ಳಿರುತ್ತಾಳೆ. ಎಡಗೈಯಿಂದ ಅವನ ಪಾದವನ್ನು ಹಿಡಿದು :)

ಸುಜಾನ—ಘನಾನಂದ, ಕ್ರೌಂಚಮಿಥುನದ ಗಂಡು ಹಕ್ಕಿಯ ವಧೆಯಾದ ಮೇಲೆ ಹೆಣ್ಣು ಕ್ರೌಂಚವೇನು ಮಾಡಿತೆಂದು ನೀವು ಹೇಳಲಿಲ್ಲ.. ನಾನು ಹೇಳುತ್ತೇನೆ....ನಾನು ಹೇಳುತ್ತೇನೆ – (ಬಲಗೈಯ ಕಿರುಗತ್ತಿಯನ್ನು ನೋಡುತ್ತ ನಿಧಾನವಾಗಿ ಮೇಲೆತ್ತಿ ತೀಕ್ಷ್ಣವಾದ ದೃಷ್ಟಿಯಿಂದ ಅದನ್ನಿರಿದುಬಿಡುವಂತೆ ನೋಡುತ್ತಿರಲು ಅಂಕದ ಪರದೆಯಿಳಿಯುವುದು.)

॥ ಶುಭಂ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಾನಂದನ ಬಾಳ ಕತೆಯನ್ನು ಶ್ರೀ ವಸಂತ ಕವಲಿ ಅವರು ತಮ್ಮ ರಂಗನಾಟಕದಲ್ಲಿ ಉಚಿತ ವಾದ ಐತಿಹಾಸಿಕ ಪರ್ಯವೇಕ್ಷಣೆಯೊಂದಿಗೆ ಮನಂಬುಗುವಂತೆ ಕಲಾತ್ಮಕವಾಗಿ ಹೆಣೆದಿದ್ದಾರೆ. ಇಲ್ಲಿ ಮಾತು ಗೀತ ನೃತ್ಯಗಳ ಸುಮಧುರ ಸಮ್ಮಿಲನವಾಗಿದೆ. ಸಾಂಪ್ರದಾಯಕ ಭಾರತೀಯ ರಂಗಭೂಮಿ ಆಧುನಿಕ ಸಂದರ್ಭದಲ್ಲಿಯೂ ಸತ್ತ್ವ ಶಾಲಿಯೆನಿಸಬಲ್ಲುದೆಂಬುದಿಲ್ಲಿ ದೃಢಪಟ್ಟಿದೆ. ಹೀಗಾಗಿ ಈ ನಾಟಕ ಪರಿಪೂರ್ಣ ರಂಗ (Total Theatre)ದ ಉಜ್ವಲ ಉದಾಹರಣೆ ಯಾಗಿದೆ.

ನಾಟಕ ಸಾಹಿತ್ಯ ರಂಗತಂತ್ರಗಳೆರಡರಲ್ಲಿಯೂ ಹೊಸ ಪ್ರಯೋಗಗಳನ್ನು ನಡೆಸಿ ಯಶಸ್ವಿಯಾಗಿ ರುವ ಶ್ರೀ ಕವಲಿಯವರು ಅಭಿನಂದನಾರ್ಹರು. ಪೂರ್ವಾಗ್ರಹವಿರಹಿತವಾದ ಸೃಜನಶೀಲ ಕಲಾ ಪ್ರತಿಭೆಯುಳ್ಳ ಇವರು ನಿಷ್ಠಾವಂತ ನಾಟಕ ಕಾರರು, ಸಂಗೀತಗಾರರು. ಆದುದರಿಂದಲೇ ದಾಕ್ಷಿಣಾತ್ಯ ಪ್ರೇಕ್ಷಕರೆದುರು ಔತ್ತರೇಯ ವಸ್ತು ವುಳ್ಳ ನಾಟಕವನ್ನು ಪ್ರದರ್ಶಿಸಿ ಭಾರತೀಯ ಸಂಸ್ಕೃತಿಯ ಏಕರೂಪತೆಯನ್ನು ಸಾಧಿಸಲು ಸಮರ್ಥರಾಗಿದ್ದಾರೆ. ಅದು ಕಾರಣ ಅನರ್ಘ್ಯ ವಾದ ಅತಿ ಮಹತ್ವದ ಸಾಂಸ್ಕೃತಿಕ ಸೇತುಬಂಧ " ಘನ ಆನಂದ " ಎಂದೆಯೆ ನನ್ನ ಅಭಿಮತ.

(—ಚಿರಂಜಿತರ ಮುನ್ನುಡಿಯಿಂದ)

Cover Printed by Bhaskar Pi Book Centre, Sringeri
Sri Vidyabharathi Book Centre, Sringeri
Bangalore-53